ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮತದಾನದ ಸಂಭ್ರಮ

ಭಾನುವಾರ ನಡೆದ ದೆಹಲಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತ ಚಲಾಯಿಸಿದ ಮಹಿಳೆಯೊಬ್ಬರು ಕೈ ಬೆರಳಿನಲ್ಲಿನ ಶಾಯಿ ಗುರುತು ಪ್ರದರ್ಶಿಸಿದರು





ಅಭಿಷೇಕ್ ಅಬ್ಬರ

ಪಂಜಾಬ್ ತಂಡದ ಅಭಿಷೇಕ್ ಶರ್ಮಾ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಬಂಗಾಳ ವಿರುದ್ಧ 52 ಎಸೆತಗಳಲ್ಲಿ 148 ರನ್ ಗಳಿಸಿ ದಾಖಲೆ ಬರೆದರು

ಚಿಂತ್ರಪಳ್ಳಿ ಕೆರೆಯಲ್ಲಿ 'ರೋಸಿ ಸ್ಟಾರ್ಲಿಂಗ್' ಕಲರವ 4 | 'ರೆಪೊ ದರ ಕಡಿತ ನಿರೀಕ್ಷೆ' 10

ಚರ್ಚೆಗೆ ಪಟ್ಟು: ಸರ್ಕಾರಕ್ಕೆ ಇಕ್ಕಟ್ಟು

ಸಂಸತ್ ಅಧಿವೇಶನ ಇಂದಿನಿಂದ ವಿಪಕ್ಷಗಳ ಸಹಕಾರ ಕೋರಿದ ಸರ್ಕಾರ

ಪ್ರಜಾವಾಣಿ ವಾರ್ತೆ/ಪಿಟಿಐ


ನವದೆಹಲಿ (ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನ ಸೋಮವಾರದಿಂದ ಆರಂಭವಾಗಲಿದ್ದು, ಆಡಳಿತಾರೂಢ ಎನ್‌ಡಿಎ ಕೆಲ ಮಸೂದೆಗಳನ್ನು ಮಂಡಿಸಲು ಸಿದ್ಧತೆ ನಡೆಸಿದ್ದರೆ, ವಿರೋಧ ಪಕ್ಷಗಳು ಮತದಾರರಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ (ಎಸ್‌ಐಆರ್), ದೆಹಲಿ ಕಾರು ಬಾಂಬ್ ಸ್ಫೋಟ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲು ಪಟ್ಟು ಹಿಡಿದಿವೆ.

ಡಿ. 1ರಿಂದ 19ರವರೆಗೆ ನಡೆಯಲಿರುವ ಅಧಿವೇಶನದಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಕಾವೇರಿದ ಚರ್ಚೆ ನಡೆಯುವ ಸಾಧ್ಯತೆಗಳಿವೆ. ವಿರೋಧ ಪಕ್ಷಗಳ ಆಗ್ರಹಕ್ಕೆ ಮಣಿಯದೆ, ನಿಯಮದ ಪ್ರಕಾರ ಚರ್ಚೆಗೆ ಅವಕಾಶ ಕಲ್ಪಿಸಲು ಸರ್ಕಾರ ಬಯಸಿದೆ.

ದೆಹಲಿ ಕಾರು ಸ್ಫೋಟದ ಘಟನೆಯನ್ನು ಮುಂದಿಟ್ಟುಕೊಂಡು ರಾಷ್ಟ್ರೀಯ ಭದ್ರತೆ ಕುರಿತು ಚರ್ಚಿಸಲು ವಿರೋಧ ಪಕ್ಷಗಳು ಉತ್ಸುಕವಾಗಿವೆ. ಅಲ್ಲದೆ, ಕಾರ್ಮಿಕ ಸಂಹಿತೆಗಳ ಜಾರಿ, ರಾಜ್ಯ ಶಾಸಕಾಂಗಗಳು ಅಂಗೀಕರಿಸಿದ ಮಸೂದೆಗಳ ವಿಷಯದಲ್ಲಿ ರಾಜ್ಯಪಾಲರ ಪಾತ್ರ, ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಅನುದಾನ ಬಿಡುಗಡೆಯಲ್ಲಿನ ಬಾಕಿ, ಮತಕಳವು ಆರೋಪ ಸೇರಿದಂತೆ ವಿವಿಧ ವಿಷಯಗಳನ್ನು ಚರ್ಚಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಿರ್ಧರಿಸಿವೆ.

'ವಿವಾದಿತ ಎಸ್‌ಐಆರ್ ಕುರಿತು ಚರ್ಚೆಗೆ ಅವಕಾಶ ನೀಡದಿದ್ದರೆ, ಕಲಾಪಕ್ಕೆ ಅಡ್ಡಿಪಡಿಸಬೇಕಾಗುತ್ತದೆ. ಅದರ ಹೊಣೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ' ಎಂದು ಪ್ರತಿಪಕ್ಷಗಳು ಸರ್ಕಾರಕ್ಕೆ ಈಗಾಗಲೇ ಎಚ್ಚರಿಕೆ ನೀಡಿವೆ.

> ಮೋದಿ ಸರ್ಕಾರ 13 ಮಸೂದೆಗಳ ಅಂಗೀಕಾರಕ್ಕೆ ಪಟ್ಟ ಮಾಡಿದೆ. ಈ ಪೈಕಿ 10 ಮಸೂದೆಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಗಳು ಪರಿಶೀಲಿಸಿಲ್ಲ
>
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)



'ವಂದೇ ಮಾತರಂ'ನ 150ನೇ ವರ್ಷಾಚರಣೆ ಪ್ರಯುಕ್ತ ಚರ್ಚೆ ನಡೆಸಲು ಸರ್ಕಾರ ಉತ್ಸುಕವಾಗಿದೆ. ಅದರ ಜತೆಗೆ 13 ಮಸೂದೆಗಳು ಮತ್ತು ಅನುದಾನಕ್ಕಾಗಿ ಹೆಚ್ಚುವರಿ ಬೇಡಿಕೆಗಳನ್ನು ಒಳಗೊಂಡಿರುವ ಪೂರಕ ಅಂದಾಜುಗಳನ್ನು ಮಂಡಿಸುವ ಉದ್ದೇಶವಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ಭಾನುವಾರ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ ಸರ್ಕಾರ ತಿಳಿಸಿದೆ. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಡಿಎಂಕೆ, ಸಮಾಜವಾದಿ ಪಕ್ಷ, ಸಿಪಿಎಂ ಸೇರಿದಂತೆ ವಿರೋಧ ಪಕ್ಷಗಳ ನಾಯಕರು ಎಸ್‌ಐಆರ್ ಕುರಿತ ಚರ್ಚೆಗೆ ಸಭೆಯಲ್ಲಿ ಆಗ್ರಹಿಸಿದರು.

ಭದ್ರತೆ ಕುರಿತ ಚರ್ಚೆಗೆ ಕಾಂಗ್ರೆಸ್ ಒಲವು: 'ರಾಷ್ಟ್ರೀಯ ಭದ್ರತೆ, ಚುನಾವಣಾ ಪ್ರಕ್ರಿಯೆಯ ಭದ್ರತೆ ಮತ್ತು ಆರ್ಥಿಕ ಭದ್ರತೆ ಸೇರಿದಂತೆ ಇತರ ವಿಷಯಗಳ ಕುರಿತು ಚರ್ಚೆ ಆಗಬೇಕು. ಮುಖ್ಯವಾಗಿ ಪ್ರಜಾಪ್ರಭುತ್ವದ ಭದ್ರತೆ ಕುರಿತು ಚರ್ಚೆಯಾಗಬೇಕು. ಚುನಾವಣಾ ಆಯೋಗ ಪಕ್ಷಪಾತಿಯಾಗಿ ವರ್ತಿಸುತ್ತಿದ್ದು, ಮತದಾರರ ಪಟ್ಟಿಯ ಶುದ್ಧತೆಯ ಬಗ್ಗೆ ಸಮಗ್ರ ಚರ್ಚೆ ನಡೆಯಬೇಕು. ವಿದೇಶಾಂಗ ನೀತಿ, ಬೆಳೆಗಳಿಗೆ ಸೂಕ್ತ ಬೆಲೆ, ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಉಪ ನಾಯಕ ಗೌರವ್ ಗೊಗೊಯ್ ಒತ್ತಾಯಿಸಿದರು.

'ಆಡಳಿತ ಪಕ್ಷವು ಪ್ರಜಾಪ್ರಭುತ್ವವನ್ನು ಕೊನೆಗೊಳಿಸಲು, ಸಂಸತ್ತನ್ನು ಹಳಿತಪ್ಪಿಸುತ್ತಿದೆ. ಮತ್ತು ಸಂಸದೀಯ ಸಂಪ್ರದಾಯಗಳನ್ನು ಹೂತುಹಾಕಲು ಬಯಸಿದೆ' ಎಂದು ಅವರು ಸುದ್ದಿಗಾರರಿಗೆ ಹೇಳಿದರು. ▶10



ಸರ್ವ ಪಕ್ಷಗಳ ಸಭೆ ಬಳಿಕ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್, ರಾಜ್ಯ ಖಾತೆ ಸಚಿವೆ ಅನುಪ್ರಿಯಾ ಪಟೇಲ್ ಮತ್ತು ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್ ಚರ್ಚೆಯಲ್ಲಿ ತೊಡಗಿದ್ದರು —ಪಿಟಿಐ ಚಿತ್ರ

ಮಂಡನೆ ಸಾಧ್ಯತೆಯಿರುವ ಮಸೂದೆ

- ಜನ ವಿಶ್ವಾಸ (ನಿಬಂಧನೆಗಳು ತಿದ್ದುಪಡಿ) ಮಸೂದೆ–2025
- ದಿವಾಳಿತನ ಮತ್ತು ದಿವಾಳಿತನ ಸಂಹಿತೆ (ತಿದ್ದುಪಡಿ) ಮಸೂದೆ–2025
- ಮಣಿಪುರ ಸರಕು ಮತ್ತು ಸೇವಾ ತೆರಿಗೆ (ಎರಡನೇ ತಿದ್ದುಪಡಿ) ಮಸೂದೆ–2025 (ಸುಗ್ರೀವಾಜ್ಞೆ ಬದಲಿಸಲು)
- ರದ್ದುಗೊಳಿಸುವ ಮತ್ತು ತಿದ್ದುಪಡಿ ಮಾಡುವ ಮಸೂದೆ–2025
- ರಾಷ್ಟ್ರೀಯ ಹೆದ್ದಾರಿಗಳ (ತಿದ್ದುಪಡಿ) ಮಸೂದೆ–2025
- ಪರಮಾಣು ಶಕ್ತಿ ಮಸೂದೆ–2025
- ಕಾರ್ಪೊರೇಟ್ ಕಾನೂನುಗಳ (ತಿದ್ದುಪಡಿ) ಮಸೂದೆ 2025
- ದಿ ಸೆಕ್ಯುರಿಟೀಸ್ ಮಾರ್ಕೆಟ್ಸ್ ಕೋಡ್ ಬಿಲ್–2025
- ವಿಮಾ ಕಾನೂನುಗಳ (ತಿದ್ದುಪಡಿ) ಮಸೂದೆ–2025
- ಮಧ್ಯಸ್ಥಿಕೆ ಮತ್ತು ಸಂಧಾನ (ತಿದ್ದುಪಡಿ) ಮಸೂದೆ–2025
- ಭಾರತದ ಉನ್ನತ ಶಿಕ್ಷಣ ಆಯೋಗದ ಮಸೂದೆ–2025
- ಕೇಂದ್ರ ಅಬಕಾರಿ (ತಿದ್ದುಪಡಿ) ಮಸೂದೆ–2025
- ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ–2025

ಹಾನಿಕಾರಕ ಸರಕು: ಗರಿಷ್ಠ ತೆರಿಗೆ

ನವದೆಹಲಿ: ಸಿಗರೇಟ್, ಗುಟ್ಕಾ, ಪಾನ್‌ಮಸಾಲ ಸೇರಿ ಸಮಾಜ ಹಾಗೂ ಆರೋಗ್ಯಕ್ಕೆ ಹಾನಿಕಾರಕ ಎಂದು ಪರಿಗಣಿಸಲಾಗಿರುವ 'ಅನಾರೋಗ್ಯಕಾರಿ ಸರಕು'ಗಳ ಮೇಲೆ ಗರಿಷ್ಠ ಮಟ್ಟದ ತೆರಿಗೆ ಹೇರಲು ಕೇಂದ್ರ ಸರ್ಕಾರ ಮುಂದಾಗಿದೆ.


ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಲೋಕಸಭೆಯಲ್ಲಿ ಪ್ರಸ್ತಾವಿತ ಕೇಂದ್ರ ಅಬಕಾರಿ ತಿದ್ದುಪಡಿ ಮಸೂದೆ 2025 ಮತ್ತು ಆರೋಗ್ಯ ಮತ್ತು ರಾಷ್ಟ್ರೀಯ ಭದ್ರತೆ ಸೆಸ್ ಮಸೂದೆ 2025 ಅನ್ನು ಮಂಡಿಸಲಿದ್ದಾರೆ. ಈ ಎರಡೂ ಮಸೂದೆಗಳು ಮುಖ್ಯವಾಗಿ 'ಅನಾರೋಗ್ಯಕಾರಿ ಸರಕು'ಗಳ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿವೆ.

ಸದ್ಯ ಜಾರಿಯಲ್ಲಿರುವ ತೆರಿಗೆ ಪರಿಹಾರದ ಸ್ವರೂಪವು 2026ರ ಮಾರ್ಚ್ ವೇಳೆಗೆ ಸ್ಥಗಿತಗೊಳ್ಳುವ ಸಾಧ್ಯತೆಯಿದೆ. ಆ ನಂತರವೂ, ಸರ್ಕಾರವು 'ಅನಾರೋಗ್ಯಕಾರಿ ಸರಕು'ಗಳ ಮೇಲಿನ ತೆರಿಗೆಯನ್ನು ಗರಿಷ್ಠ ಮಟ್ಟದಲ್ಲೇ ಮುಂದುವರಿಸಲು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ವಿಂಟೇಜ್ ವಿರಾಟ್; ಸಿಕ್ಸರ್ ಶರ್ಮಾ

ರಾಂಚಿ: 'ಸೂಪರ್ ಸ್ಟಾರ್ ಜೋಡಿ' ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಭಾನುವಾರ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಶತಕದ ಜೊತೆಯಾಟವಾಡಿದರು. ಇದರಿಂದಾಗಿ ಭಾರತವು ಸರಣಿಯಲ್ಲಿ ಶುಭಾರಂಭ ಮಾಡಿತು.

- ರೋಹಿತ್–ಕೊಹ್ಲಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 136 (109ಎಸೆತ) ರನ್ ಗಳಿಸಿದರು
- ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ಸಿಕ್ಸರ್ (352) ದಾಖಲಿಸಿದ ರೋಹಿತ್ ಶರ್ಮಾ



ಭಾರತ	ದ. ಆಫ್ರಿಕಾ
8ಕ್ಕೆ 349	332
(50 ಓವರ್)	(49.2 ಓವರ್)

ಫಲಿತಾಂಶ: ಭಾರತಕ್ಕೆ 17 ರನ್ ಜಯ. ಸರಣಿಯಲ್ಲಿ 1–0 ಮುನ್ನಡೆ

ನ್ಯಾಷನಲ್ ಹೆರಾಲ್ಡ್: ಸೋನಿಯಾ ರಾಹುಲ್ ವಿರುದ್ಧ ಎಫ್‌ಐಆರ್

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಇತರ ಆರೋಪಿಗಳ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.



ಸೋನಿಯಾ



ರಾಹುಲ್

ವೈಯಕ್ತಿಕ ಲಾಭಕ್ಕಾಗಿ ಗಾಂಧಿ ಕುಟುಂಬ ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದೆ ಎಂದು ಆರೋಪಿಸಲಾಗಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಾಗಿದೆ.

ದೆಹಲಿ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗ (ಇಒಡಬ್ಲ್ಯು) ಅಕ್ಟೋಬರ್ 3ರಂದು ಗಾಂಧಿ ಕುಟುಂಬ ಮತ್ತು ಇತರ ಏಳು ಜನರ ವಿರುದ್ಧ ಪ್ರಕರಣದ ದಾಖಲಿಸಿದೆ ಎಂದು ಮೂಲಗಳು ತಿಳಿಸಿವೆ. ▶7

ಸೇಡಿನ ರಾಜಕಾರಣ: ಕಾಂಗ್ರೆಸ್

ನ್ಯಾಷನಲ್ ಹೆರಾಲ್ಡ್ ಪ್ರಕರಣ ಕುರಿತು ಎಫ್‌ಆರ್‌ಆರ್ ದಾಖಲಿಸಿದ ಕ್ರಮವನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತೀವ್ರವಾಗಿ ಖಂಡಿಸಿದ್ದಾರೆ.

'ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಜೋಡಿಯು ಕಾಂಗ್ರೆಸ್‌ನ ಹಿರಿಯ ನಾಯಕತ್ವದ ವಿರುದ್ಧ ಕಿರುಕುಳ, ಬೆದರಿಕೆ ಮತ್ತು ಸೇಡಿನ ರಾಜಕಾರಣವನ್ನು ಮುಂದುವರಿಸಿದೆ' ಎಂದು ಆರೋಪಿಸಿದ್ದಾರೆ. 'ಇಲ್ಲಿ ಬೆದರಿಕೆ ಹಾಕುತ್ತಿರುವವರೇ ಸ್ವತಃ ಅಸುರಕ್ಷಿತರು ಮತ್ತು ಭಯಭೀತರಾಗಿದ್ದಾರೆ' ಎಂದು ಅವರು 'ಎಕ್ಸ್'ನಲ್ಲಿ ದೂರಿದ್ದಾರೆ.

'ನ್ಯಾಷನಲ್ ಹೆರಾಲ್ಡ್ ಕುರಿತ ಪ್ರಕರಣವು ಸಂಪೂರ್ಣ ನಕಲಿಯಾಗಿದ್ದು, ಅಂತಿಮವಾಗಿ ನಾವು ಗೆಲ್ಲುತ್ತೇವೆ. ಸತ್ಯಮೇವ ಜಯತೇ' ಎಂದು ಅವರು ಹೇಳಿದ್ದಾರೆ. ▶7

'ಬೆನ್ನಿಗೆ ಚೂರಿ ಹಾಕಲ್ಲ'

ಬೆಂಗಳೂರು: 'ನಾನು ಯಾವತ್ತೂ ಗುಂಪುಗಾರಿಕೆ ಮಾಡಿಲ್ಲ. ಬೆನ್ನಿಗೆ ಚೂರಿ ಹಾಕುವುದಿಲ್ಲ. ನೇರವಾಗಿ ಹೋರಾಟ ಮಾಡುವವನು' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು. ▶4

ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ದೇಶದ ವಿವಿಧೆಡೆ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ವಿವಿಧ ಹಂತಗಳ ಅಂತಿಮ ಗಡುವನ್ನು ಕೇಂದ್ರ ಚುನಾವಣಾ ಆಯೋಗವು ಒಂದು ವಾರ ವಿಸ್ತರಿಸಿದೆ. ▶7

ಬಿಹಾರ: ವಾಕ್ಸಮರ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಯಲ್ಲಿ 'ಮಹಾಘಟಬಂಧನ'ವು ಸೋಲುಂಡ ಬೆನ್ನಲ್ಲೇ, ಕಾಂಗ್ರೆಸ್ ಹಾಗೂ ಆರ್‌ಜೆಡಿ ಪಕ್ಷಗಳ ಮುಖಂಡರ ನಡುವೆ ಆರೋಪ–ಪ್ರತ್ಯಾರೋಪಗಳು ಶುರುವಾಗಿವೆ. ▶7


ಚಿನಕುರುಳಿ ಪ್ರಕಾಶ್ ಶೆಟ್ಟಿ



ವಿಐಎಸ್‌ಎಲ್ ಪುನಶ್ಚೇತನಕ್ಕೆ ₹4,000 ಕೋಟಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಭದ್ರಾವತಿಯ ವಿಶ್ವೇಶ್ವರಾಯ ಉಕ್ಕಿನ ಕಾರ್ಖಾನೆಯ (ವಿಐಎಸ್‌ಎಲ್) ಪುನಶ್ಚೇತನಕ್ಕೆ ₹4,000 ಕೋಟಿ ಮೊತ್ತದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ' ಎಂದು ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.



ಕುಮಾರ ಸ್ವಾಮಿ

'ಭಾರತೀಯ ಉಕ್ಕು ಪ್ರಾಧಿಕಾರ ಬಂಡವಾಳ ಹೂಡಲಿದೆ. ಪುನಶ್ಚೇತನದ ನಂತರ ರೈಲ್ವೆ ಹಾಗೂ ರಕ್ಷಣಾ ವಲಯದ ಬೇಡಿಕೆ ಆಧರಿಸಿ ಉತ್ಪಾದನೆ ಆರಂಭಿಸಲಾಗುವುದು. ಕಾರ್ಖಾನೆಯ 50 ವರ್ಷಗಳ ಭವಿಷ್ಯ ಗಮನದಲ್ಲಿಟ್ಟುಕೊಂಡು ಮಾರುಕಟ್ಟೆ ಹಾಗೂ ಹೊಸ ತಂತ್ರಜ್ಞಾನದ ಕುರಿತು ಅಧ್ಯಯನ ನಡೆಸಿ ಪ್ರತ್ಯೇಕ ಡಿಪಿಆರ್ ರೂಪಿಸಲಾಗಿದೆ' ಎಂದು ಹೇಳಿದರು.

'ವಿಐಎಸ್‌ಎಲ್ ಕಾರ್ಖಾನೆ ಮುಚ್ಚುವ ನಿರ್ಧಾರವನ್ನು ಕೇಂದ್ರ ಸಂಪುಟದಲ್ಲಿ ಕೈಗೊಳ್ಳಲಾಗಿದೆ. ಈ ತೀರ್ಮಾನ ಹಿಂಪಡೆಯಲು ಪ್ರಧಾನಿ ಮೋದಿ ಅವರ ಮನವೊಲಿಸಿ ಕಾರ್ಖಾನೆಗೆ ಜೀವ ಕೊಡುವ ಪ್ರಯತ್ನ ನಡೆದಿದೆ. ಒಮ್ಮೆ ಪುನರಾರಂಭವಾದರೆ ಅಡೆತಡೆ ಇಲ್ಲದೇ ಕಾರ್ಖಾನೆ ನಡೆಯಬೇಕು. ಹೀಗಾಗಿ ಅಗತ್ಯವಿರುವ ಗಣಿ ಪಡೆಯುವ ಕೆಲಸವೂ ನಡೆದಿದೆ. ಈ ಬಗ್ಗೆ ಜನವರಿ ತಿಂಗಳಲ್ಲಿ ಸಂಪೂರ್ಣ ಮಾಹಿತಿಯನ್ನು ನೀಡುವೆ' ಎಂದು ಹೇಳಿದರು.

ನಟ ಎಂ.ಎಸ್. ಉಮೇಶ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ದಶಕ ಪ್ರೇಕ್ಷಕರನ್ನು ರಂಜಿಸಿದ್ದ ನಟ ಎಂ.ಎಸ್.ಉಮೇಶ್ ಭಾನುವಾರ ನಿಧನರಾದರು. ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು.



ಮೈಸೂರು ಶ್ರೀಕಂಠಯ್ಯ ಉಮೇಶ್ ಅವರಿಗೆ 80 ವರ್ಷವಾಗಿತ್ತು. ಕಳೆದ ಕೆಲ ತಿಂಗಳುಗಳಿಂದ ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ವಿಭಿನ್ನ ಹಾವಭಾವ, ಹಾಸ್ಯಭರಿತ ಸಂಭಾಷಣೆಗಳಿಗೆ ಹೆಸರಾಗಿದ್ದರು. '... ನೀವೇನೂ ಬೇಜಾರ್ ಮಾಡ್ಕೊಂಡಿಲ್ಲ ಅಂದ್ರೆ...?, ಅಯ್ಯಯ್ಯೋ ಅಪಾರ್ಥ ಮಾಡ್ಕೋಂಡ್‌ಬಿಟ್ರೋ ಏನೋ?, ಅಪಾರ್ಥ ಮಾಡ್ಕೋಬೇಡಿ' ಎಂಬ ಸಂಭಾಷಣೆಯಿಂದ ಚಿರಪರಿಚಿತರಾಗಿದ್ದರು. ▶4

ತಮಿಳುನಾಡಿನಲ್ಲಿ ಮೂವರು ಸಾವು

ದಿತ್ವಾ ಅಬ್ಬರ: 57,000 ಹೆಕ್ಟೇರ್ ಕೃಷಿ ಭೂಮಿಗೆ ಹಾನಿ– ಸಚಿವ ರಾಮಚಂದ್ರನ್

ಚೆನ್ನೈ (ಪಿಟಿಐ): 'ದಿತ್ವಾ' ಚಂಡಮಾರುತದಿಂದಾಗಿ ತಮಿಳುನಾಡಿದ ಹಲವು ಭಾಗಗಳಲ್ಲಿ ಮಳೆಯಾಗುತ್ತಿದ್ದು, ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆ. ಗೋಡೆ ಕುಸಿದು ಇಬ್ಬರು, ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಒಬ್ಬರು ಮೃತಪಟ್ಟಿದ್ದಾರೆ.

'ಭಾರಿ ಮಳೆಯಿಂದಾಗಿ 234 ಜೋಪಡಿಗಳಿಗೆ ಹಾನಿಯಾಗಿದೆ, 149 ಜಾನುವಾರುಗಳು ಮೃತಪಟ್ಟಿವೆ ಮತ್ತು ಡೆಲ್ಟಾ ಜಿಲ್ಲೆಗಳ (ನದಿ ಮುಖಜ ಭೂಮಿ) 57,000 ಹೆಕ್ಟೇರ್ ಕೃಷಿ ಜಮೀನುಗಳಿಗೆ ಹಾನಿಯಾಗಿದೆ' ಎಂದು ಕಂದಾಯ ಮತ್ತು ವಿಪತ್ತು ನಿರ್ವಹಣೆ ಸಚಿವ ಕೆ.ಕೆ.ಎಸ್.ಎಸ್.ಆರ್ ರಾಮಚಂದ್ರನ್ ಅವರು ತಿಳಿಸಿದರು.

'ನಾಗಪಟ್ಟಣಂನ 24,000 ಹೆಕ್ಟೇರ್, ತಿರುವರೂರ್‌ನ 15,000 ಹೆಕ್ಟೇರ್, ಮೈಲಾಡುಥುರೈನ 8,000 ಹೆಕ್ಟೇರ್ ಸೇರಿ ಒಟ್ಟು 57,000 ಹೆಕ್ಟೇರ್ ಕೃಷಿ ಜಮೀನುಗಳು ಹಾನಿಗೊಳಗಾಗಿವೆ' ಎಂದರು.

ರಾಜ್ಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳ 28 ತಂಡಗಳು ರಕ್ಷಣಾ ಕಾರ್ಯಾಚರಣೆಗೆ ಸಿದ್ಧವಿವೆ. ▶10



ಭಾರಿ ಮಳೆಯಿಂದಾಗಿ ಕೊಲಂಬೊದ ವೆಲ್ಲಾಂಪಿತಿಯಾದಲ್ಲಿ ರಸ್ತೆಗಳು ಜಲಾವೃತಗೊಂಡಿದ್ದು, ವ್ಯಕ್ತಿಯೊಬ್ಬರು ವೃದ್ಧರನ್ನು ಹೊತ್ತು ಸಾಗಿದರು —ಎಎಫ್‌ಪಿ ಚಿತ್ರ

ಶ್ರೀಲಂಕಾ: 330ಕ್ಕೂ ಹೆಚ್ಚು ಸಾವು

ಕೊಲಂಬೊ (ಪಿಟಿಐ, ಎಎಫ್‌ಪಿ): 'ದಿತ್ವಾ' ಚಂಡಮಾರುತದ ಪ್ರಭಾವದಿಂದಾಗಿ ಶ್ರೀಲಂಕಾದ ತಗ್ಗು ಪ್ರದೇಶಗಳಲ್ಲಿ ಭಾನುವಾರವೂ ಪ್ರವಾಹ ಪರಿಸ್ಥಿತಿ ಮುಂದುವರಿದಿತ್ತು. ಭಾರಿ ಮಳೆ ಮತ್ತು ಅದಕ್ಕೆ ಸಂಬಂಧಿಸಿದ ಅವಘಡಗಳಿಂದಾಗಿ ಕನಿಷ್ಠ 334 ಮಂದಿ ಮೃತಪಟ್ಟಿದ್ದಾರೆ.

ವರುಣಾರ್ಭಟದಿಂದಾಗಿ ಮರಗಳು ಧರೆಗೆ ಉರುಳಿವೆ, ರಸ್ತೆಗಳು ಜಲಾವೃತವಾಗಿ ಸಂಚಾರ ಬಂದ್ ಆಗಿದೆ. ರಕ್ಷಣಾ ಸಿಬ್ಬಂದಿ ಮರಗಳನ್ನು ತೆರವುಗೊಳಿಸುವಲ್ಲಿ ನಿರತರಾಗಿದ್ದಾರೆ. ▶10

ನರೇಗಾದಡಿ ಗೌರವಧನ ಪಾವತಿಗೆ ಅವಕಾಶ ಇಲ್ಲ: ಕೇಂದ್ರ • ಇವರು ನರೇಗಾ ಭಾಗ –ಪ್ರಿಯಾಂಕ್ ಖರ್ಗೆ

ಕೂಸಿನ ಮನೆ 'ಆರೈಕೆದಾರ'ರಿಗೆ ಸಂಕಷ್ಟ

• ಭೀಮಣ್ಣ ಬಾಲಯ್ಯ

ಕಲಬುರಗಿ: ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ಕೆಲಸ ಮಾಡುವ ಕಾರ್ಮಿಕರ ಮಕ್ಕಳ ಆರೈಕೆಗಾಗಿ ರಾಜ್ಯ ಸರ್ಕಾರ ಆರಂಭಿಸಿದ್ದ 'ಕೂಸಿನ ಮನೆ' ಆರೈಕೆದಾರರಿಗೆ ನರೇಗಾದಡಿ ಗೌರವಧನ ನೀಡಲು ಅವಕಾಶ ಇಲ್ಲ ಎಂದು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ಇದರಿಂದಾಗಿ ರಾಜ್ಯದಲ್ಲಿ ಕೂಸಿನ ಮನೆಯಲ್ಲಿ ಆರೈಕೆದಾರರಾಗಿ ನೇಮಕಗೊಂಡಿದ್ದ 7,358 ಕೂಲಿ ಕಾರ್ಮಿಕರಿಗೆ ಸಂಕಷ್ಟ ಎದುರಾಗಿದೆ. ನರೇಗಾ ಯೋಜನೆಯ ಕಾರ್ಮಿಕರ ಎಳೆಯ ಮಕ್ಕಳ ಪಾಲನೆ, ಆರೈಕೆಗಾಗಿ ರಾಜ್ಯ ಸರ್ಕಾರ 2023ರಲ್ಲಿ ಈ ಕಾರ್ಯಕ್ರಮ ರೂಪಿಸಿದೆ.

ಒಂದು 'ಕೂಸಿನ ಮನೆ'ಗೆ ಸಕ್ರಿಯ ಉದ್ಯೋಗ ಚೀಟಿ ಹೊಂದಿದ್ದ ಇಬ್ಬರು ಮಹಿಳೆಯರನ್ನು ಆರೈಕೆದಾರರಾಗಿ ನೇಮಿಸಲಾಗಿದೆ. ಇವರಿಗೆ ಸಾಮೂಹಿಕ ಕಾಮಗಾರಿಗಳಲ್ಲಿ ಪ್ರತ್ಯೇಕ ಎನ್‌ಎಂಆರ್ (ನಾಮಿನಲ್ ಮಾಸ್ಟರ್ ರೋಲ್) ಸೃಜಿಸಿ, ಕೆಲಸದ ಸ್ಥಳದಲ್ಲಿ ದೈನಂದಿನ ಹಾಜರಾತಿಯಿಂದ ವಿನಾಯಿತಿ ನೀಡಿದ್ದು ಗೌರವಧನವಾಗಿ ಕೂಲಿ ಪಾವತಿಸಲಾಗುತ್ತಿತ್ತು. ಕಾಮಗಾರಿ ಇಲ್ಲದಿದ್ದಾಗ ಗ್ರಾಮ ಪಂಚಾಯಿತಿ ಅನುದಾನದಲ್ಲಿ ಗೌರವಧನ ಭರಿಸಲಾಗುತ್ತಿತ್ತು.

ನರೇಗಾದಲ್ಲಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 4,000 ಕೂಸಿನ ಮನೆಗಳನ್ನು ಸ್ಥಾಪಿಸಿತ್ತು. ಈಗ 'ಮನೆ'ಗಳ ಸಂಖ್ಯೆ 3,679ಕ್ಕೆ ಇಳಿದಿದೆ. 46,723 ಮಕ್ಕಳ ನೋಂದಣಿ ಆಗಿದೆ.

ಕೆಲ ದಿನಗಳ ಹಿಂದೆ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ರಾಜ್ಯದ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಪತ್ರ ಬರೆದಿದ್ದು, 'ಆರೈಕೆದಾರರ ಗೌರವಧನವನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಭರಿಸಲು ನರೇಗಾ ಕಾಯ್ದೆಯ ಶೆಡ್ಯೂಲ್–2ರಲ್ಲಿ ಅವಕಾಶ ಇಲ್ಲ' ಎಂದು ತಿಳಿಸಿದೆ.

ಆದ್ದರಿಂದ ಆರೈಕೆದಾರರಿಗೆ ತಕ್ಷಣದಿಂದ ವಿನಾಯಿತಿ ರದ್ದುಪಡಿಸುವಂತೆ ಇಲಾಖೆ ಸುತ್ತೋಲೆ ಹೊರಡಿಸಿದೆ.



ಕಲಬುರಗಿ ಜಿಲ್ಲೆಯ ಗ್ರಾಮವೊಂದರ ಕೂಸಿನ ಮನೆಯಲ್ಲಿ ಆರೈಕೆದಾರರೊಬ್ಬರು ಮಕ್ಕಳ ಆರೈಕೆಯಲ್ಲಿ ತೊಡಗಿದ್ದರು

'ಕೇಂದ್ರ ಸಚಿವರೊಂದಿಗೆ ಚರ್ಚೆ'

'ಮಹಿಳಾ ಕಾರ್ಮಿಕರು ಮಕ್ಕಳನ್ನು 'ಕೂಸಿನ ಮನೆ'ಗಳಲ್ಲಿ ಬಿಟ್ಟು ನಿಶ್ಚಿಂತೆಯಿಂದ ನರೇಗಾದಲ್ಲಿ ದುಡಿದು ಕೂಲಿ ಪಡೆಯುತ್ತಿದ್ದಾರೆ. ಕೂಸಿನ ಮನೆಯ ಆರೈಕೆದಾರರೂ ನರೇಗಾ ಭಾಗವೇ ಆಗಿದ್ದಾರೆ. ಆದ್ದರಿಂದ ಅವರಿಗೆ ಹಾಜರಾತಿಯಿಂದ ವಿನಾಯಿತಿ ನೀಡಲಾಗುತ್ತಿತ್ತು. ಕೇಂದ್ರ ಸರ್ಕಾರದ ಈ ಆದೇಶ ಸರಿಯಿಲ್ಲ. ಕೇಂದ್ರ ಸಚಿವರನ್ನು ಭೇಟಿ ಮಾಡಿ ಚರ್ಚಿಸಿ ವಿನಾಯಿತಿ ನೀಡುವಂತೆ ಮನವಿ ಮಾಡಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ 'ಪ್ರಜಾವಾಣಿ'ಗೆ ತಿಳಿಸಿದರು.

> **'ಉದ್ಯೋಗ ಖಾತ್ರಿ ಯೋಜನೆ ಕಾರ್ಮಿಕರಿಗೆ ಕೂಲಿಯನ್ನು ಕೇಂದ್ರದ ಅನುದಾನದಲ್ಲಿ ನೀಡಲಾಗುತ್ತದೆ; ಸಲಕರಣೆಗಳ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುತ್ತದೆ**
>
> **ಭಂವರ್ ಸಿಂಗ್ ಮೀನಾ**
> ಜಿ.ಪಂ ಸಿಇಒ, ಕಲಬುರಗಿ

ಮೆಕ್ಕೆಜೋಳ ಖರೀದಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಕ್ಕೆಜೋಳವನ್ನು ಕಡ್ಡಾಯವಾಗಿ ಖರೀದಿ ಮಾಡುವಂತೆ ಡಿಸ್ಟಿಲರಿಗಳಿಗೆ ಆದೇಶ ಹೊರಡಿಸಿರುವ ಸರ್ಕಾರ ಡಿ.1ರಿಂದಲೇ ಖರೀದಿ ಪ್ರಕ್ರಿಯೆ ಆರಂಭಿಸುವಂತೆ ಸೂಚನೆ ನೀಡಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಮೂಲಕ ರೈತರಿಂದ ಮೆಕ್ಕೆಜೋಳ ಖರೀದಿಸಲು ಉತ್ತರ ಕರ್ನಾಟಕದ 3 ಜಿಲ್ಲೆಗಳ 5 ಡಿಸ್ಟಿಲರಿಗಳ ಹೆಸರು, ಖರೀದಿ ಮಾಡಬೇಕಾದ ಪ್ರಮಾಣವನ್ನೂ ನಿಗದಿ ಮಾಡಲಾಗಿದೆ.

'ಧಾನ್ಯ ಆಧಾರಿತ ಎಥೆನಾಲ್ ಉತ್ಪಾದಿಸುವ ಡಿಸ್ಟಿಲರಿಗಳಿಗೆ ಮೊದಲ ತ್ರೈಮಾಸಿಕದಲ್ಲಿ ಅಂದರೆ 2026ರ ಜ.26 ರವರೆಗೆ 44,892 ಟನ್ ಮೆಕ್ಕೆಜೋಳ ಅಗತ್ಯವಿದೆ. ಇದರಲ್ಲಿ ಶೇ 50ರಷ್ಟು 22,446 ಟನ್ ಮೆಕ್ಕೆಜೋಳವನ್ನು ರೈತರಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇಲ್ಲವೇ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸಂಘಗಳ ಮೂಲಕ ಖರೀದಿಸಿ, ಮಹಾಮಂಡಳವು ಡಿಸ್ಟಿಲರಿಗಳ ಗೋದಾಮುಗಳಿಗೆ ಸರಬರಾಜು ಮಾಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರೈತರು ಬೆಲೆ ಕುಸಿತದಿಂದ ಕಂಗಾಲಾಗಿದ್ದರು. ಮೆಕ್ಕೆಜೋಳಕ್ಕೆ ಹೆಚ್ಚುವರಿ ಬೆಲೆ ಘೋಷಿಸಿ, ಖರೀದಿ ಮಾಡಬೇಕೆಂದು ಹೋರಾಟವನ್ನೂ ನಡೆಸಿದ್ದರು. ▶11

ಸೂಚನೆ ಏನೇನು

- ಖರೀದಿ ಪ್ರಕ್ರಿಯೆಗೆ ಎನ್‌ಇಎಂಎಲ್ ಸಂಸ್ಥೆ ತಂತ್ರಾಂಶ ಅಳವಡಿಸಿಕೊಂಡು ಸರ್ಕಾರದ ಫ್ರೂಟ್ಸ್ ಪೋರ್ಟಲ್ ಮತ್ತು ನೇರ ನಗದು ವರ್ಗಾವಣೆ (ಡಿಬಿಟಿ) ಸಂಯೋಜನೆಯೊಂದಿಗೆ ಡಿ.1ರಿಂದ ಮೂರು ದಿನಗಳವರೆಗೆ ರೈತರ ನೋಂದಣಿ ನಡೆಸಬೇಕು.
- ಮೂರು ದಿನಗಳ ನಂತರದಲ್ಲಿ ರೈತರ ನೋಂದಣಿ ಹಾಗೂ ಖರೀದಿ ಎರಡೂ ಪ್ರಕ್ರಿಯೆ ಏಕಕಾಲದಲ್ಲಿ ನಿರ್ವಹಿಸಬೇಕು.
- ಪ್ರತಿ ರೈತರಿಂದ ಗರಿಷ್ಠ 5 ಕ್ವಿಂಟಲ್ ಮೆಕ್ಕೆಜೋಳ ವನ್ನು ಪ್ರತಿ ಕ್ವಿಂಟಲ್‌ಗೆ ಬೆಂಬಲ ಬೆಲೆ ದರವಾದ ₹2,400ರಂತೆ ಖರೀದಿಸಬೇಕು. ▶11

ಸೂರ್ಯೋದಯ: 6:25 ಸೂರ್ಯಾಸ್ತ: 5:51 | ಚಂದ್ರೋದಯ: ಮ. 1:52 ಚಂದ್ರಾಸ್ತ: ರಾ. 1:31 | ಭಾನುವಾರದ ಉಷ್ಣಾಂಶ : ಗರಿಷ್ಠ 21° ಕನಿಷ್ಠ 18°

ಸೋಮವಾರದ ಉಷ್ಣಾಂಶ 22° ಗರಿಷ್ಠ | 18° ಕನಿಷ್ಠ | ಮಂಗಳವಾರ 23° : 18° | ಬುಧವಾರ 24° : 18° | ಗುರುವಾರ 24° : 18°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ

ಜಿಟಿಜಿಟಿ ಮಳೆ ಕಾಡಿದ ಚಳಿ...



ನಗರದಲ್ಲಿ ಭಾನುವಾರ ಮಂಜು ಮತ್ತು ಮೋಡ ಕವಿದ ವಾತಾವರಣ ಕಂಡುಬಂತು — ಪಿಟಿಐ ಚಿತ್ರ

‘ದಿತ್ವಾ’ ಚಂಡಮಾರುತದ ಪರಿಣಾಮ ನಗರದಲ್ಲಿ ಚಳಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ಮೋಡಕವಿದ ವಾತಾವರಣ ಹಾಗೂ ಜಿಟಿಜಿಟಿ ಮಳೆಯ ಜೊತೆಗೆ ಚಳಿಗೆ ನಡುಗಿದ ಜನರು, ಶೀತ ಗಾಳಿಯಿಂದ ರಕ್ಷಿಸಿಕೊಳ್ಳಲು ಬೆಚ್ಚನೆಯ ಉಡುಪಿನ ಮೊರೆ ಹೋದರು.

ಶ್ರೀಲಂಕಾದ ಉತ್ತರ ಭಾಗದಲ್ಲಿ ಕಾಣಿಸಿಕೊಂಡಿದ್ದ ‘ದಿತ್ವಾ’ ಚಂಡಮಾರುತವು ತಮಿಳುನಾಡಿನ ಕರಾವಳಿ ತಲುಪಿದ ಪರಿಣಾಮ, ಬೆಂಗಳೂರಿನಲ್ಲಿ ಚಳಿ ಹೆಚ್ಚಳವಾಗಿತ್ತು. ಬೆಳಿಗ್ಗೆಯಿಂದಲೇ ಕಾಣಿಸಿಕೊಂಡ ಜಿಟಿಜಿಟಿ ಮಳೆ ಹಾಗೂ ತೇವಾಂಶಯುಕ್ತ ಗಾಳಿಯಿಂದಾಗಿ, ಜನರು ಚಳಿಯಿಂದ ರಕ್ಷಿಸಿಕೊಳ್ಳಲು ಸ್ವೆಟರ್ ಹಾಗೂ ಜಾಕೆಟ್‌ಗಳನ್ನು ಧರಿಸಿ ಓಡಾಡಿದರು.

ಭಾನುವಾರ ಸಂಜೆ 5.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ಉಷ್ಣಾಂಶವು 20.2 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು. ಸಾಮಾನ್ಯಕ್ಕಿಂತ ಏಳು ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕಡಿಮೆ ವರದಿಯಾದ ಪರಿಣಾಮ ಇಡೀ ದಿನ ಚಳಿಯಿತ್ತು. ಕನಿಷ್ಠ ಉಷ್ಣಾಂಶ 18.4 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಗರಿಷ್ಠ ಉಷ್ಣಾಂಶ 21.5 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ಉಷ್ಣಾಂಶ 18.2 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು. ಎಚ್‌ಎಎಲ್ ವಿಮಾನ ನಿಲ್ದಾಣದ ಸುತ್ತಮುತ್ತ ಕ್ರಮವಾಗಿ 20.7 ಡಿಗ್ರಿ ಸೆಲ್ಸಿಯಸ್ ಹಾಗೂ 18.2 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶವಿತ್ತು.

3 ವರ್ಷಗಳ ಕನಿಷ್ಠ

ನಗರದಲ್ಲಿ ಕನಿಷ್ಠ ಉಷ್ಣಾಂಶವು ಶನಿವಾರ 16 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು. ಇದು ನವೆಂಬರ್‌ನಲ್ಲಿ ಮೂರು ವರ್ಷಗಳ ಅವಧಿಯಲ್ಲಿ ದಾಖಲಾದ ಕನಿಷ್ಠ ಉಷ್ಣಾಂಶವಾಗಿತ್ತು. 2022ರ ನ.25ರಂದು ಕನಿಷ್ಠ ಉಷ್ಣಾಂಶ 15.4 ಡಿಗ್ರಿ ಸೆಲ್ಸಿಯಸ್ ವರದಿಯಾದರೆ, 2023ರ ನ.24ರಂದು 17.1 ಡಿಗ್ರಿ ಸೆಲ್ಸಿಯಸ್, 2024ರ ನ.27ರಂದು 19.4 ಡಿಗ್ರಿ ಸೆಲ್ಸಿಯಸ್ ಇತ್ತು.

ಕನಿಷ್ಠ 18 ಡಿಗ್ರಿ ಸೆಲ್ಸಿಯಸ್ ಸಾಧ್ಯತೆ

ಹವಾಮಾನ ಇಲಾಖೆ ಪ್ರಕಾರ, ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣ ಇರುವ ಸಾಧ್ಯತೆಯಿದ್ದು, ಜಿಟಿಜಿಟಿ ಮಳೆ ಮುಂದುವರಿಯುವ ಸಂಭವವಿದೆ. ಇನ್ನೂ ಎರಡು ದಿನ ಗರಿಷ್ಠ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇರುವ ಸಾಧ್ಯತೆಯಿದೆ. ಬಳಿಕ ಗರಿಷ್ಠ ಉಷ್ಣಾಂಶ ಹೆಚ್ಚಳವಾಗುವ ಸಂಭವವಿದೆ.

ಸುದ್ದಿ 2 ನಿಮಿಷ

ಉದ್ಯಮಿಗೆ ₹1.80 ಕೋಟಿ ವಂಚನೆ

ಬೆಂಗಳೂರು: ಬೇರೊಬ್ಬರಿಗೆ ಸೇರಬೇಕಾದ ಸಾಲದ ಹಣವನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ ಆರೋಪಿಯನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಮುರುಗೇಶ್ ಪಾಳ್ಯ ನಿವಾಸಿ ಸುರೇಂದ್ರ ರೆಡ್ಡಿ ಅವರ ದೂರಿನ ಮೇರೆಗೆ ನಾಗರಬಾವಿ ನಿವಾಸಿ ವೆಂಕಟೇಶ್ ಎಂಬುವವರನ್ನು ಬಂಧಿಸಲಾಗಿದೆ.

ಬ್ಯಾಂಕ್ ಸಾಲ ತೀರಿಸದ್ದರಿಂದ ಉದ್ಯಮಿ ಸುರೇಂದ್ರ ರೆಡ್ಡಿ ಅವರ ಮನೆ ಹರಾಜಿಗೆ ಬಂದಿತ್ತು. ಸ್ನೇಹಿತರ ಮೂಲಕ ಪರಿಚಯವಾಗಿದ್ದ ವೆಂಕಟೇಶ್ ಅವರು, ರೋಹಿತ್ ಪಟೇಲ್ ಎಂಬುವರ ಮೂಲಕ 2024ರ ಜನವರಿಯಲ್ಲಿ ಸುರೇಂದ್ರ ಅವರಿಗೆ ₹1.6 ಕೋಟಿ ಸಾಲ ಕೊಡಿಸಿದ್ದರು. ಈ ಹಣಕ್ಕೆ ಹೆಚ್ಚುವರಿಯಾಗಿ ₹21 ಲಕ್ಷ ನೀಡುವಂತೆ ಆರೋಪಿ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದರು.

ಜನವರಿಯ ಕೊನೆಯಲ್ಲಿ ಸುರೇಂದ್ರ ರೆಡ್ಡಿ ಅವರು ತಮ್ಮ ಮನೆಯ ದಾಖಲೆಗಳನ್ನು ಖಾಸಗಿ ಬ್ಯಾಂಕ್‌ನಲ್ಲಿ ಅಡವಿಟ್ಟು ₹2 ಕೋಟಿ ಸಾಲ ಪಡೆದಿದ್ದರು. ಈ ಹಣದಲ್ಲಿ ರೋಹಿತ್ ಅವರ ಸಾಲ ಮರುಪಾವತಿಸಲು ಮುಂದಾಗಿದ್ದಾರೆ. ಆದರೆ, ರೋಹಿತ್ ವಿದೇಶಕ್ಕೆ ಹೋಗಿರುವ ಕಾರಣ ₹1.60 ಕೋಟಿ ಅನ್ನು ವೆಂಕಟೇಶ್ ತಮ್ಮ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದರು. ಅಲ್ಲದೇ ಹೆಚ್ಚುವರಿಯಾಗಿ ನೀಡಬೇಕಿದ್ದ ₹21 ಲಕ್ಷವನ್ನು ನಗದು ರೂಪದಲ್ಲಿ ಪಡೆದುಕೊಂಡಿದ್ದರು ಎಂದು ಪೊಲೀಸರು ತಿಳಿಸಿದರು.



‘ರೋಹಿತ್ ಸಾಲ ವಾಪಸ್ ಕೇಳಿದಾಗ, ವೆಂಕಟೇಶ್ ಸೂಚಿಸಿದ ಖಾತೆಗೆ ಹಣ ವರ್ಗಾವಣೆ ಮಾಡಿರುವುದಾಗಿ ಸುರೇಂದ್ರ ತಿಳಿಸಿದ್ದಾರೆ. ಹಣ ತಲುಪದ ವಿಚಾರ ಗೊತ್ತಾಗಿ, ಈ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ, ಹಣವನ್ನು ಸ್ವಂತಕ್ಕೆ ಬಳಸಿಕೊಂಡಿದ್ದು, ರೋಹಿತ್‌ಗೆ ನಾನೇ ಹಣ ನೀಡುವುದಾಗಿ ಹೇಳಿದ್ದಾರೆ. ಮತ್ತೆ ಒತ್ತಡ ಹಾಕಿದಾಗ ವೆಂಕಟೇಶ್ ಹೆದರಿಸಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ತಾಯಿ, ಮಗ ಸ್ಥಳದಲ್ಲೇ ಸಾವು

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಭಾನುವಾರ ದ್ವಿಚಕ್ರ ವಾಹನವು ಕಂಟೇನರ್‌ಗೆ ಡಿಕ್ಕಿ ಹೊಡೆದು ತಾಯಿ ಮತ್ತು ಮಗ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆಂಗೇರಿ ಬಳಿಯ ದೊಡ್ಡಗೊಲ್ಲರಹಟ್ಟಿ ನಿವಾಸಿ ಅಶ್ವಿನಿ (41) ಹಾಗೂ ಅವರ ಮಗ ಅಭಿಲಾಶ್ (19) ಮೃತಪಟ್ಟವರು. ಅಶ್ವಿನಿ, ಖಾಸಗಿ ಆಸ್ಪತ್ರೆಯಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದರು. ಅಭಿಲಾಶ್ ತಾಯಿಯನ್ನು ಆಸ್ಪತ್ರೆಗೆ ಬಿಡಲು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಮತ್ತು ಕಂಟೇನರ್ ನಡುವಿನ ಸಣ್ಣ ಜಾಗದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡಲು ಅಭಿಲಾಶ್ ಯತ್ನಿಸಿದಾಗ ನಿಯಂತ್ರಣ ತಪ್ಪಿ ಕಂಟೇನರ್‌ಗೆ ವಾಹನ ಡಿಕ್ಕಿ ಹೊಡೆದಿದೆ. ಆಯತಪ್ಪಿ ಕೆಳಗೆ ಬಿದ್ದ ಇಬ್ಬರ ತಲೆಗೂ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ.

ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ: ‘ಅಪಘಾತದ ಸಂದರ್ಭದಲ್ಲಿ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಿರಲಿಲ್ಲ. ಹೀಗಾಗಿ, ಇಬ್ಬರ ತಲೆಗೂ ತೀವ್ರ ಪೆಟ್ಟಾಗಿದೆ. ಹೆಲ್ಮೆಟ್ ಧರಿಸಿದ್ದರೆ ಅವರು ಬದುಕುಳಿಯುವ ಸಾಧ್ಯತೆ ಇತ್ತು. ಅತಿಯಾದ ವೇಗ ಹಾಗೂ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬ್ಯಾಟರಾಯನಪುರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮೈಸೂರು ನಗರದ ಸಮೀಪ ಹುಲಿ, ಹೆಚ್ಚಿದ ಆತಂಕ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಹೊರವಲಯದ ಕೂರ್ಗಳ್ಳಿ ಸಮೀಪದ ಬೆಮೆಲ್ ಕಾರ್ಖಾನೆ ಆವರಣದಲ್ಲಿ ಕಾಣಿಸಿಕೊಂಡಿರುವ ಹುಲಿ ಸೆರೆಗೆ ಅರಣ್ಯ ಇಲಾಖೆಯು ಭಾನುವಾರ ಕಾರ್ಯಾಚರಣೆ ಆರಂಭಿಸಿದೆ. ಹುಲಿಯು ನಗರದ ಅಂಚಿನಲ್ಲೇ ಓಡಾಡುತ್ತಿರುವುದು ಘಟನೆಯು ಜನರಲ್ಲಿ ಆತಂಕ ಹೆಚ್ಚುವಂತೆ ಮಾಡಿದೆ.

‘ಹುಲಿಯ ಹೆಜ್ಜೆ ಗುರುತು ಪತ್ತೆ ಆಗಿಲ್ಲ. ಆದರೆ, ಹುಲಿ ಸಂಚರಿಸುತ್ತಿದ್ದ ವಿಡಿಯೊ ಬೆಮೆಲ್ ಆವರಣದ್ದೇ ಎಂದು ಖಚಿತವಾಗಿದೆ. ಚಲನವಲನದ ಮೇಲೆ ನಿಗಾ ವಹಿಸುವುದಕ್ಕಾಗಿ ವಿವಿಧೆಡೆ 10 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಒಂದು ಬೋನನ್ನು ಇರಿಸಲಾಗಿದೆ. ಹುಲಿ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ. ಸೆರೆಗೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಪ್ರಾದೇಶಿಕ ವಿಭಾಗದ ಡಿಸಿಎಫ್ ಕೆ.ಪರಮೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಯುವತಿ ಆತ್ಮಹತ್ಯೆ ಪ್ರಕರಣ: ಆರೋಪಿ ಬಂಧನಕ್ಕೆ ಪೋಷಕರ ಒತ್ತಾಯ


ಪ್ರಿಯಕರ ಸೇರಿ ಇಬ್ಬರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೈಹಿಕ ಹಾಗೂ ಮಾನಸಿಕ ಕಿರುಕುಳ ತಾಳಲಾರದೇ ಯುವತಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಆಕೆಯ ಪ್ರಿಯಕರ ಸೇರಿ ಇಬ್ಬರ ವಿರುದ್ಧ ಪುಟ್ಟೇನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಹಾಸನದ ಅಚಲಾ ಹರ್ಷ (22) ಆತ್ಮಹತ್ಯೆ ಮಾಡಿಕೊಂಡ ಯುವತಿ. ಅಚಲಾ ತಂದೆ ಹರ್ಷ ಅವರ ದೂರಿನ ಮೇರೆಗೆ ಹಾಸನದ ಮಯಾಂಕ್ ಗೌಡ ಮತ್ತು ಆತನ ತಾಯಿ ಮೈನಾ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನವೆಂಬರ್ 21ರಂದು ಪುಟ್ಟೇನಹಳ್ಳಿಯ ಪಾಂಡುರಂಗ ನಗರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು, ಹತ್ತು ದಿನ ಕಳೆದರೂ ಆರೋಪಿಗಳನ್ನು ಬಂಧಿಸಿಲ್ಲ ಎಂದು ಅಚಲಾ ಪೋಷಕರು ಆರೋಪಿಸಿದ್ದಾರೆ.



ಅಚಲಾ

‘ಎಂಜಿನಿಯರಿಂಗ್ ಮುಗಿಸಿ ಕೆಲಸಕ್ಕೆ ಸೇರುವ ಸಿದ್ಧತೆಯಲ್ಲಿದ್ದ ಅಚಲಾಗೆ ತನ್ನ ದೂರದ ಸಂಬಂಧಿ ಮಯಾಂಕ್ ಗೌಡನ ಪರಿಚಯವಾಗಿದೆ. ಈ ವೇಳೆ ಪ್ರೀತಿಸುವುದಾಗಿ ನಂಬಿಸಿ ಮಗಳನ್ನು ಹಲವಾರು ಕಡೆ ಕರೆದೊಯ್ದಿದ್ದ ಆರೋಪಿ, ಮದುವೆಗೂ ಮೊದಲೇ ದೈಹಿಕ ಸಂಬಂಧಕ್ಕೆ ಒತ್ತಾಯಿಸಿದ್ದ. ಅದಕ್ಕೆ ನಿರಾಕರಿಸಿದಾಗ, ದೈಹಿಕವಾಗಿ ಹಲ್ಲೆ ನಡೆಸಿ, ಮಾನಸಿಕವಾಗಿಯೂ ಕಿರುಕುಳ ನೀಡಿದ್ದಾನೆ. ಈ ವಿಚಾರವನ್ನು ಮಗಳು, ಮಯಾಂಕ್ ತಾಯಿ ಮೈನಾಗೆ ತಿಳಿಸಿದಾಗ, ಅವರು ಸಹ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ಕೆಲ ದಿನಗಳ ಬಳಿಕ ಆರೋಪಿಯು ಮಗಳಿಗೆ ಫೋನ್ ಮಾಡಿ, ನಾನು ಬೇರೆ ಯುವತಿಯನ್ನು ಮದುವೆಯಾಗುತ್ತೇನೆ. ಆಕೆ ಶ್ರೀಮಂತಳಾಗಿದ್ದಾಳೆ. ಇದಕ್ಕೆ ನನ್ನ ತಾಯಿ ಸಹಕಾರ ನೀಡಿದ್ದಾರೆ ಎಂದು ಹೇಳಿದ್ದ’ ಎಂದು ದೂರಿನಲ್ಲಿ ಯುವತಿ ತಂದೆ ಹರ್ಷ ಆರೋಪಿಸಿದ್ದಾರೆ.

ಅಪರಾಧ ಸುದ್ದಿ

‘ಇದರಿಂದ ಮಾನಸಿಕವಾಗಿ ನೊಂದಿದ್ದ ಅಚಲಾಳನ್ನು ಬೆಂಗಳೂರಿನ ಪಾಂಡುರಂಗ ನಗರದಲ್ಲಿರುವ ತನ್ನ ಪತ್ನಿಯ ಅಣ್ಣನ ಮನೆಯಲ್ಲಿ ಇರಿಸಲಾಗಿತ್ತು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮದುವೆಯಾಗುವುದಾಗಿ ನಂಬಿಸಿ, ಲೈಂಗಿಕ ಕಿರುಕುಳ ನೀಡಿ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಮಯಾಂಕ್ ಗೌಡನ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು’ ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ. ಅಚಲಾ ಅವರು ನಟಿ ಆಶಿಕಾ ರಂಗನಾಥ್ ಅವರ ಮಾವನ ಮಗಳು ಎಂದು ಹೇಳಲಾಗಿದೆ.

ಅಚಲಾ ಹಾಗೂ ಮಯಾಂಕ್ ನಡುವೆ ವಿನಿಮಯ ಆಗಿರುವ ವಾಟ್ಸ್‌ಆ್ಯಪ್ ಸಂದೇಶವನ್ನು ಸಂಗ್ರಹಿಸಿ, ಪರಿಶೀಲನೆ ನಡೆಸಲಾಗುವುದು. ಒಂದು ವೇಳೆ ಸಂದೇಶಗಳನ್ನು ಅಳಿಸಿ ಹಾಕಿದ್ದರೆ, ದತ್ತಾಂಶ ಮರು ಸಂಗ್ರಹ ಮಾಡಲು ಮೊಬೈಲ್‌ಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಈ ನಡುವೆ ಆರೋಪಿ ಮತ್ತು ಅವರ ತಾಯಿ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಹಿಳೆಯ ಇರಿದು ಕೊಂದು ಪರಾರಿಯಾಗಿದ್ದವನ ಸೆರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತಂಗಿಯ ಒಡನಾಟ ಬಿಡು ಎಂದಿದ್ದಕ್ಕೆ ಕೃತ್ಯ
- ಶೇಷಾದ್ರಿಪುರ ಪೊಲೀಸರ ಕಾರ್ಯಾಚರಣೆ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ನಾಗಪ್ಪ ಪೂಜಾರಿ

ನಾಗಪ್ಪ ಪೂಜಾರಿ (23) ಬಂಧಿತ ಆರೋಪಿ. ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಶರಣಮ್ಮ (23) ಕೊಲೆಯಾದ ಮಹಿಳೆ.

ಶರಣಮ್ಮ ಮತ್ತು ಅವರ ಪತಿ ಸೋಮನಿಂಗ ಮಗುವಿನೊಂದಿಗೆ ಶೇಷಾದ್ರಿಪುರ ಒಂದನೇ ಮುಖ್ಯರಸ್ತೆಯಲ್ಲಿ ವಾಸವಾಗಿದ್ದರು. ಪತಿ ಶೇಷಾದ್ರಿಪುರದ ನಿರ್ಮಾಣ ಹಂತದ ಕಟ್ಟಡದಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಾರೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿ ನಾಗಪ್ಪ, ಶರಣಮ್ಮನ ತಂಗಿಯನ್ನು ಪ್ರೀತಿಸುತ್ತಿದ್ದ. ಈ ವಿಚಾರ ತಿಳಿದು ಬೇಸರಗೊಂಡಿದ್ದ ಅವರು, ತಂಗಿಯನ್ನು ನಾಗಪ್ಪನ ಸಂಪರ್ಕಕ್ಕೆ ಸಿಗದಂತೆ ಬೇರೆ ಊರಿಗೆ ಕಳುಹಿಸಿದ್ದರು. ಇದರಿಂದ ಕೋಪಗೊಂಡಿದ್ದ ಆರೋಪಿ, ಶನಿವಾರ ಸಂಜೆ ಅವರ ಮನೆಗೆ ಬಂದು ವಿಚಾರಿಸಿ, ತಂಗಿಯ ಮೊಬೈಲ್ ನಂಬರ್ ಕೇಳಿದ್ದಾನೆ. ಆಗ ಶರಣಮ್ಮ, ಆತನಿಗೆ ಬೈದು ತನ್ನ ತಂಗಿಯ ಸಹವಾಸಕ್ಕೆ ಬರಬೇಡ ಎಂದು ಬುದ್ಧಿ ಹೇಳಿದ್ದಾರೆ. ಇದರಿಂದ ಕೆರಳಿದ ನಾಗಪ್ಪ, ಅವರೊಂದಿಗೆ ಜಗಳವಾಡಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಘಟನಾ ಸಂದರ್ಭದಲ್ಲಿ ಶರಣಮ್ಮ ಅವರು ಮಗುವಿನೊಂದಿಗೆ ಒಬ್ಬರೇ ಮನೆಯಲ್ಲಿದ್ದರು. ಪತಿ ಕೆಲಸಕ್ಕೆ ಹೋಗಿದ್ದರು. ಕೊಲೆ ಬಳಿಕ ಪರಾರಿಯಾಗಿದ್ದ ಆರೋಪಿಯನ್ನು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ, ಪತ್ತೆ ಮಾಡಿ ಬಂಧಿಸಲಾಗಿದೆ. ಚಾಲಕನಾಗಿ ಕೆಲಸ ಮಾಡುತ್ತಿದ್ದ ಆರೋಪಿ, ಶರಣಮ್ಮರ ಕುಟುಂಬಕ್ಕೆ ಪರಿಚಿತನಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಶೇಷಾದ್ರಿಪುರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ನಾಲ್ಕು ಹೊಸ ಕಾರ್ಮಿಕ ಸಂಹಿತೆ ಜಾರಿಯಿಂದ ಹೊರೆ: ದಾನಪ್ಪ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಕೇಂದ್ರ ಸರ್ಕಾರವು ಕಾರ್ಮಿಕರ ಜೀವನಮಟ್ಟ ಸುಧಾರಿಸಲು ಜಾರಿಗೆ ತಂದಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ನಿರ್ವಹಣೆಗೆ ಸಮಸ್ಯೆಯಾಗಲಿದೆ’ ಎಂದು ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಿ.ಪಿ.ದಾನಪ್ಪ ತಿಳಿಸಿದರು.

‘ಈ ನಿಯಮಗಳಡಿ ನೇಮಕಾತಿ ಪತ್ರ, ಪಿಎಫ್, ಇಎಸ್‌ಐ, ವಿಮೆ, ಕನಿಷ್ಠ ವೇತನ, 40 ವರ್ಷ ಮೇಲ್ಪಟ್ಟವರಿಗೆ ಉಚಿತ ಆರೋಗ್ಯ ತಪಾಸಣೆ ಸೇರಿ ಹಲವು ಪ್ರಯೋಜನಗಳನ್ನು ಕಾರ್ಮಿಕರಿಗೆ ನೀಡಬೇಕಾಗುತ್ತದೆ. ಇದರಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ತೊಂದರೆ ಎದುರಿಸಬೇಕಾಗುತ್ತದೆ’ ಎಂದರು.

‘ಎಲ್ಲ ಉದ್ಯೋಗದಾತರು ನೇಮಕಾತಿ ಪತ್ರ ನೀಡಬೇಕೆಂಬುದು ಈ ಸಂಹಿತೆಯಲ್ಲಿದೆ. ಆದರೆ ಸಣ್ಣ ಕಂಪನಿಗಳಲ್ಲಿ ಇದು ಲಭ್ಯವಿಲ್ಲ. ಗ್ರ್ಯಾಚ್ಯುಟಿ ಕಾಯ್ದೆಯಲ್ಲಿ 5 ವರ್ಷಗಳ ಅವಧಿಯನ್ನು 1 ವರ್ಷಕ್ಕೆ ಇಳಿಸಿರುವುದರಿಂದ ಕಾರ್ಮಿಕರು ವರ್ಷದ ನಂತರ ಕೆಲಸ ಬದಲಿಸುತ್ತಾರೆ’ ಎಂದರು.



ಡಿ.ಪಿ.ದಾನಪ್ಪ

‘ರಾತ್ರಿಪಾಳಿ ಕೆಲಸಗಳಲ್ಲಿ ಮಹಿಳೆಯರಿಗೆ ಅವಕಾಶ, ಭದ್ರತೆ ಕಲ್ಪಿಸಬೇಕು ಎಂದು ಸಂಹಿತೆಯಲ್ಲಿ ತಿಳಿಸಿದ್ದು, ಸಣ್ಣ ಕೈಗಾರಿಕೆಗಳಿಗೆ ಇದರ ವೆಚ್ಚವು ಹೊರೆಯಾಗಲಿದೆ. ಐಟಿ, ಬಿಟಿ ಕಂಪನಿಗಳಲ್ಲಿ ಕ್ಯಾಬ್ ಸೌಲಭ್ಯವಿರುತ್ತದೆ. ಆದರೆ ಸಣ್ಣ ಕೈಗಾರಿಕೆಗಳನ್ನು ನಡೆಸುವುದೇ ಕಷ್ಟವಾಗಿರುವಾಗ ಭದ್ರತೆ ಒದಗಿಸುವುದು ಅಸಾಧ್ಯ’ ಎಂದು ಅವರು ಹೇಳಿದರು.



ಎಸ್‌ಬಿಐ ಗ್ರೀನ್ ಮ್ಯಾರಥಾನ್ ಸೀಸನ್ 6ರ ಅಂಗವಾಗಿ ನಗರದಲ್ಲಿ ಭಾನುವಾರ ನಡೆದ 10 ಕಿ.ಮೀ ಓಟದಲ್ಲಿ ವಿಜೇತರಾದ ಮೂವರಿಗೆ ಬಹುಮಾನ ವಿತರಿಸಲಾಯಿತು. ವಿವಿಧ ಕ್ಷೇತ್ರಗಳ 5,500ಕ್ಕೂ ಹೆಚ್ಚು ಮಂದಿ 5ಕೆ, 10ಕೆ, 21ಕೆ ಹಾಫ್ ಮ್ಯಾರಥಾನ್ ಓಟದಲ್ಲಿ ಭಾಗಿಯಾಗಿದ್ದರು

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

ಕೆಟ್ಟುನಿಂತ ಲಿಫ್ಟ್



ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಎದುರು ಹಳೆ ಮದ್ರಾಸ್ ರಸ್ತೆ ದಾಟಲು ನಿರ್ಮಿಸಿರುವ ಪಾದಚಾರಿ ಮೇಲ್ಸೇತುವೆಯ ಲಿಫ್ಟ್ ಅನೇಕ ತಿಂಗಳಿಂದ ಕೆಟ್ಟು ನಿಂತಿದೆ. ಇದರಿಂದಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಹಿರಿಯ ನಾಗರಿಕರು ಹಾಗೂ ಮಕ್ಕಳು ಮೇಲ್ಸೇತುವೆಯ ಮೆಟ್ಟಿಲು ಹತ್ತಲಾರದೆ, ಸಂಚಾರ ದಟ್ಟಣೆ ಇರುವ ರಸ್ತೆಯನ್ನು ದಾಟಲು ಹರಸಾಹಸ ಪಡುತ್ತಿದ್ದಾರೆ. ವಾಹನಗಳು ವೇಗವಾಗಿ ಬರುವುದರಿಂದ ಇಲ್ಲಿ ರಸ್ತೆ ದಾಟುವುದು ಕಷ್ಟಸಾಧ್ಯವಾಗಿದ್ದು, ಜೀವಕ್ಕೆ ಅಪಾಯವನ್ನು ತಂದೊಡ್ಡುವ ಸಾಧ್ಯತೆಯಿದೆ. ಸಂಬಂಧಪಟ್ಟವರು ಆದಷ್ಟು ಬೇಗ ಲಿಫ್ಟ್ ಸರಿಪಡಿಸಬೇಕು.

ನಾಗಪ್ರಸಾದ್ ಎನ್.ಎಸ್., ಹಿರಿಯ ನಾಗರಿಕ

ಖಾಲಿ ನಿವೇಶನದಲ್ಲಿ ಕಸ



ಜೆ.ಸಿ.ನಗರದಲ್ಲಿರುವ ಮುನಿರೆಡ್ಡಿಪಾಳ್ಯದ ರಾಜಪ್ಪ ಬ್ಲಾಕ್‌ನ 1ನೇ ಕ್ರಾಸ್‌ನಲ್ಲಿರುವ ಖಾಲಿ ನಿವೇಶನದಲ್ಲಿ ಕಸ ಎಸೆಯಲಾಗುತ್ತಿದೆ. ದಿನದಿಂದ ದಿನಕ್ಕೆ ಇಲ್ಲಿ ಕಸ ಹೆಚ್ಚಾಗುತ್ತಿದೆ. ಇದರಿಂದಾಗಿ ಕಸದ ರಾಶಿಯಲ್ಲಿ ಇಲಿಗಳು ಸೇರಿಕೊಂಡಿದ್ದು, ಹಾವುಗಳು ಕೂಡ ಬರುತ್ತಿವೆ. ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

ಅ.ನಾ.ರಾವ್ ಜಾದವ್, ರಾಜಪ್ಪ ಬ್ಲಾಕ್

ಮುಖ್ಯರಸ್ತೆಯಲ್ಲೇ ಕಸ

ದೊಡ್ಡಕನ್ನೆಲ್ಲಿಯ ಎ.ಇ.ಟಿ. ಜಂಕ್ಷನ್ ರಸ್ತೆಯ ಇಕ್ಕೆಲಗಳಲ್ಲಿ ಕಸದ ರಾಶಿ ತುಂಬಿಕೊಂಡಿದೆ. ಸಮರ್ಪಕವಾಗಿ ಕಸ ವಿಲೇವಾರಿಯಾಗದ ಕಾರಣ ರಾಶಿ ಬೆಳೆಯುತ್ತಿದೆ. ಕಸ ತಂದು ಎಸೆಯುವವರ ಮೇಲೂ ಯಾವುದೇ ಕ್ರಮ ಕೈಗೊಳ್ಳುತಿಲ್ಲ. ಜನ ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯರ ಅಹವಾಲು ಕೇಳುವವರಿಲ್ಲವಾಗಿದೆ. ಪ್ರದೇಶದ ಸುತ್ತಮುತ್ತ ತ್ಯಾಜ್ಯ ಹರಡಿಕೊಂಡ ಪರಿಣಾಮ ಬೀದಿ ನಾಯಿಗಳ, ಬಿಡಾಡಿ ದನಗಳ ಉಪಟಳ ಹೆಚ್ಚಾಗಿದೆ. ರಾತ್ರಿಹೊತ್ತು ನಡೆದಾಡಲು, ದ್ವಿಚಕ್ರ ವಾಹನಗಳಲ್ಲಿ ಸಂಚರಿಸಲು ಭಯ ಪಡಬೇಕಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಬೇಕಿದೆ.

ವೆಂಕಟ್ರಮಣ ಭಟ್, ದೊಡ್ಡಕನ್ನೆಲ್ಲಿ



ಸಂಚಾರ ದುಸ್ತರ



ಮುದ್ದಿನಪಾಳ್ಯದಿಂದ ಜ್ಞಾನಭಾರತಿ ಆರ್‌ಟಿಒ, ಜಯಂತ್ ಕನ್ವೆನ್ಷನ್ ಹಾಲ್ ಹಾಗೂ ವಿದ್ಯಾನಿಕೇತನ ಶಾಲೆಗೆ ಹೋಗುವ ರಸ್ತೆಯ ಅರ್ಧಭಾಗ ಹಾಳಾಗಿದೆ. ರಸ್ತೆಯುದ್ದಕ್ಕೂ ಒಂದು ಕಡೆ ಮಾತ್ರ ಸಂಚಾರಯೋಗ್ಯವಾಗಿದ್ದು, ಇನ್ನೊಂದೆಡೆ ಡಾಂಬರ್ ಕಿತ್ತು ಹೋಗಿದೆ. ಕೆಲವೆಡೆ ರಸ್ತೆಯ ಅರ್ಧ ಭಾಗ ಕುಸಿತವಾಗಿ, ಸಂಚಾರ ಕಷ್ಟಸಾಧ್ಯವಾಗಿದೆ. ಮಾರುದ್ದದ ಗುಂಡಿಗಳು ಅಲ್ಲಲ್ಲಿ ಕಂಡು ಬರುತ್ತವೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಭಯದಲ್ಲೇ ಸಂಚರಿಸಬೇಕಾದ ದುಃಸ್ಥಿತಿ ಇದ್ದು, ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ. ಅಪಘಾತಗಳೂ ಹೆಚ್ಚುತ್ತಿವೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಆದಷ್ಟು ಬೇಗ ರಸ್ತೆ ದುರಸ್ತಿಗೆ ಗಮನಹರಿಸಬೇಕು.

ಸ್ಥಳೀಯ ನಿವಾಸಿಗಳು

ನಿಧನ ವಾರ್ತೆ

ಆಲಿಸ್ ಕೊಲಾಸೊ



ಬೆಂಗಳೂರು: ನಗರದ ಹಾಲಿವುಡ್ ಮತ್ತು ಸ್ವಿಸ್ ಟೌನ್ ನಿವಾಸಿ ಆಲಿಸ್ ಕೊಲಾಸೊ (97) ಅವರು ಶನಿವಾರ ನಿಧನರಾದರು. ಅವರಿಗೆ ಎನ್‌ಆರ್‌ಐ ಉದ್ಯಮಿ ರೊನಾಲ್ಡೊ ಕೊಲಾಸೊ ಸೇರಿ ಮೂವರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ.

ಬ್ರಿಗೇಡ್ ರಸ್ತೆಯಲ್ಲಿರುವ ಸೇಂಟ್ ಪ್ಯಾಟ್ರಿಕ್ ಚರ್ಚ್‌ನಲ್ಲಿ ಮೃತರ ಅಂತಿಮ ವಿಧಿ ವಿಧಾನಗಳು ಮಂಗಳವಾರ ಬೆಳಿಗ್ಗೆ 11ಕ್ಕೆ ನಡೆಯಲಿದೆ. ನಂತರ, ಶಾಂತಿನಗರದ ಲ್ಯಾಂಗ್‌ಫೋರ್ಡ್ ಟೌನ್‌ನಲ್ಲಿರುವ ಸೇಂಟ್ ಪ್ಯಾಟ್ರಿಕ್ ಚರ್ಚ್ ಸ್ಮಶಾನದಲ್ಲಿ ಅಂತ್ಯಕ್ರಿಯೆ (ಗೇಟ್ ನಂ.6) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಅಲ್ಲಮ ಜ್ಞಾನ, ಅಧ್ಯಾತ್ಮದ ಸಂಗಮ’

‘ಅಲ್ಲಮ ಕಥನ’ ಪುಸ್ತಕ ಜನಾರ್ಪಣೆಯಲ್ಲಿ ಶಿವರಾಜ ವಿ. ಪಾಟೀಲ ಅಭಿಮತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಲ್ಲೇಪುರಂ ಜಿ.ವೆಂಕಟೇಶ ರಚಿತ ಕೃತಿ ಜನಾರ್ಪಣೆ
- ನಾಲ್ವರಿಗೆ ‘ಅಲ್ಲಮ ಪುರಸ್ಕಾರ’ ಪ್ರದಾನ

ಬೆಂಗಳೂರು: ‘ಅಲ್ಲಮನು ಜ್ಞಾನ, ಅಧ್ಯಾತ್ಮ, ಸಾಹಿತ್ಯ, ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳ ಸಂಗಮ ಆಗಿದ್ದ. ಅದನ್ನು ಹೊಸ ತಲೆಮಾರಿಗೂ ದಾಟಿಸುವ ಕೆಲಸವನ್ನು ಮಲ್ಲೇಪುರಂ ಜಿ.ವೆಂಕಟೇಶ ಅವರು ಮಾಡಿದ್ದಾರೆ’ ಎಂದು ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರು ಹೇಳಿದರು.

ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ಮತ್ತು ಅಂಕಿತ ಪುಸ್ತಕ, ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ ‘ಅಲ್ಲಮ ಕಥನ’ ಪುಸ್ತಕ ಜನಾರ್ಪಣೆ ಮಾಡಿ ಅವರು ಮಾತನಾಡಿದರು.

‘ಅಲ್ಲಮನ ಮೌಲ್ಯಗಳಲ್ಲಿ ಮಿಂದೆದ್ದು, ವೆಂಕಟೇಶ ಅವರು ಈ ಕೃತಿ ರಚಿಸಿದ್ದಾರೆ. ತಾವು ಓದಿದ್ದನ್ನು, ಕಲಿತಿದ್ದನ್ನು ಹೊಸ ತಲೆಮಾರಿನವರಿಗೂ ತಿಳಿಯಲಿ ಎಂದು ಪುಸ್ತಕ ರೂಪಕ್ಕೆ ಇಳಿಸಿದ್ದಾರೆ’ ಎಂದರು.

ಪ್ರಭುಲಿಂಗ ಶಿಕ್ಷಣ ಸಂಸ್ಥೆಯು ಅಲ್ಲಮನ ವಚನಗಳ ಕುರಿತ ಅಧ್ಯಯನ ನಡೆಸಿದವರಿಗಾಗಿ ‘ಅಲ್ಲಮ ಪುರಸ್ಕಾರ’ ಸ್ಥಾಪಿಸಿದ್ದು, ನೀಲಗಿರಿ ತಳವಾರ, ವೀಣಾ ಬನ್ನಂಜೆ, ಟಿ.ಎನ್.ವಾಸುದೇವಮೂರ್ತಿ ಮತ್ತು ಪ್ರಕಾಶ ಗಿರಿಮಲ್ಲನವರ ಅವರಿಗೆ ಪ್ರದಾನ ಮಾಡಿತು. ಪ್ರಶಸ್ತಿಯು ಫಲಕ ಮತ್ತು ತಲಾ ₹10,000 ನಗದು ಒಳಗೊಂಡಿದೆ.

‘ಬಡಿದಾಟಕ್ಕೆ ಹಚ್ಚುವ ತುಂಡಾಸುರರು’

‘ಕೆಲವು ತುಂಡಾಸುರರು ವೀರಶೈವರು– ಲಿಂಗಾಯತರು ಪರಸ್ಪರ ಬಡಿದಾಡಿ-ಕೊಳ್ಳುವಂತೆ ಮಾಡುತ್ತಿದ್ದಾರೆ’ ಎಂದು ಪ್ರಾಧ್ಯಾಪಕ ಬಿ.ವಿ.ವಸಂತಕುಮಾರ್ ಹೇಳಿದರು.

‘ವೀರಶೈವರು ಬೇರೆ, ಲಿಂಗಾಯತರು ಬೇರೆ. ಆ ಲಿಂಗ ಬೇರೆ, ಈ ಲಿಂಗ ಬೇರೆ ಎಂದು ಹೇಳುತ್ತಿರುವ ಕಾಲವಿದು. ಆದರೆ ಅಲ್ಲಮನ ಪ್ರಣವ ಪ್ರಭೆಯ ಪರಂಜ್ಯೋತಿಯೇ ಲಿಂಗ. ಮಲ್ಲೇಪುರಂ ಜಿ. ವೆಂಕಟೇಶ ಅವರ ಈ ಕೃತಿ ಇದನ್ನೇ ಪ್ರತಿಪಾದಿಸುತ್ತಿದೆ. ಈ ಕೃತಿಯು ಅಲ್ಲಮ, ಶೈವ, ವೀರಶೈವ ಮತ್ತು ಶಾಕ್ತ್ಯ ಕಥನ. ಅಲ್ಲಮ ಯಾರು, ಅಲ್ಲಮ ಏತಕ್ಕೆ ಅಗತ್ಯ ಮತ್ತು ಅಲ್ಲಮ ಎಲ್ಲಿಯವರೆಗೆ ಬೇಕು ಎಂಬುದನ್ನು ಈ ಕೃತಿ ವಿವರಿಸುತ್ತಾ ಹೋಗುತ್ತದೆ’ ಎಂದರು.



ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಎಡದಿಂದ ಕುಳಿತವರು) ಪ್ರಕಾಶ್ ಗಿರಿಮಲ್ಲನವರ, ವೀಣಾ ಬನ್ನಂಜೆ, ನೀಲಗಿರಿ ತಳವಾರ ಮತ್ತು ಟಿ.ಎನ್. ವಾಸುದೇವಮೂರ್ತಿ ಅವರಿಗೆ ಅಲ್ಲಮ ಪುರಸ್ಕಾರ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಬಿ.ವಿ. ವಸಂತಕುಮಾರ್, ವಿಮರ್ಶಕ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಸಿದ್ಧಗಂಗಾ ಮಠದ ಪೀಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಮತ್ತು ಶಾಸಕ ಜಗದೀಶ್ ಗುಡಗುಂಟಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬಸ್‌ಗೆ ಡಿಕ್ಕಿ ಯುವಕ ಸಾವು

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ಮದುವೆಗೆಂದು ಹೋಗಿದ್ದ ತಾಲ್ಲೂಕಿನ ಯುವಕನೊಬ್ಬ ಅಪಘಾತದಲ್ಲಿ ಮೃತಪಟ್ಟ ಘಟನೆ ಭಾನುವಾರ ಬೆಳಗ್ಗೆ ಧರ್ಮಸ್ಥಳ ಸಮೀಪದ ನೆಲ್ಯಾಡಿ ಬಳಿ ನಡೆದಿದೆ.

ತಾಲ್ಲೂಕಿನ ದೊಡ್ಡಿಗಾನಹಳ್ಳಿ ಪಿ.ದೀಪಕ್ (24) ಮೃತರು.

ದೀಪಕ್ ಶನಿವಾರ ರಾತ್ರಿ ಧರ್ಮಸ್ಥಳ ಬಳಿ ಸ್ನೇಹಿತರೊಬ್ಬರ ಮದುವೆಗೆಂದು ಹೋಗಿದ್ದರು. ಅಲ್ಲಿ ದ್ವಿಚಕ್ರ ವಾಹನದಲ್ಲಿ ಬೆಂಗಳೂರು– ಧರ್ಮಸ್ಥಳ ರಸ್ತೆಯಲ್ಲಿ ಕಾರೊಂದನ್ನು ಹಿಂದಿಕ್ಕಲು ಹೋಗಿ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿ ಹೊಡೆದ ರಭಸಕ್ಕೆ ದೀಪಕ್ ಗಂಭೀರ ಗಾಯಗೊಂಡಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಝೇಂಕಾರ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು

ಕೆ.ಆರ್.ಪುರ: ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕ್ಯಾಲಸನಹಳ್ಳಿಯ ಪೂರ್ವ ಪಾಮ್ ಬೀಚ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕನ್ನಡ ಸಾಂಸ್ಕೃತಿಕ ಸಮಿತಿ ಝೇಂಕಾರ ತಂಡದಿಂದ 70ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಡೊಳ್ಳು ಕುಣಿತ, ಜನಪದ ನೃತ್ಯ, ಕನ್ನಡ ಭಾವಗೀತೆ, ಚಲನಚಿತ್ರ ಗೀತೆಗಳು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮಕ್ಕಳು, ಹಿರಿಯ ನಾಗರಿಕರು ಕಾರ್ಯಕ್ರಮದಲ್ಲಿ ಸಂಭ್ರಮಿಸಿದರು.

ಥೀಮ್ ನಾರಿಶಕ್ತಿ ಮಹಿಳೆಯರ ತಂಡ ಕಾರ್ಯಕ್ರಮ ನಡೆಸಿಕೊಟ್ಟಿದ್ದು ವಿಶೇಷವಾಗಿತ್ತು.

ಶಾಸಕ ಬೈರತಿ ಬಸವರಾಜ ಮಾತನಾಡಿ, ‘ಅಪಾರ್ಟ್‌ಮೆಂಟ್‌ನಲ್ಲಿ ಹಲವು ಭಾಷಿಕರಿದ್ದರೂ ಕನ್ನಡದ ಬಗ್ಗೆ ಅಪಾರ ಕಾಳಜಿ ಹೊಂದಿ ರಾಜ್ಯೋತ್ಸವ ಆಚರಿಸುತ್ತಿರುವುದು ಭಾಷಾಭಿಮಾನ ತೋರಿಸುತ್ತದೆ’ ಎಂದರು.

ಝೇಂಕಾರ ತಂಡದ ಸದಸ್ಯ ವಿಜಯಕುಮಾರ್ ಘನಶ್ಯಾಮ್ ಮಾತನಾಡಿ, ‘ಬೆಂಗಳೂರು ನಗರದಲ್ಲಿ ಪರಭಾಷಿಕರು ವಾಸಿಸುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಕನ್ನಡ ಭಾಷೆ ಕಲಿಸುವ ಯೋಜನೆ ರೂಪಿಸಿಕೊಂಡಿದ್ದೇವೆ’ ಎಂದರು.

ಕನ್ನಡ ಸಾಂಸ್ಕೃತಿಕ ಸಮಿತಿಯ ಸದಸ್ಯರಾದ ದೀಪಕ್ ಬೇಂಗ್ರೆ, ಶಿಲ್ಪಾ ಪಾಟೀಲ್, ಅಶ್ವಿನಿ ಕಿಶೋರ್, ದೀಪ್ತಿ ತರುಣ್, ಸೌಮ್ಯ, ಮಧು ಮನಮೋಹನ್, ಪ್ರೀತಿ ಬೇಂಗ್ರೆ, ಡಾ.ಸುದರ್ಶನ್, ಕರ್ಣ ನಾಟಿಕರ್, ಪ್ರದೀಪ್ ಉಪಸ್ಥಿತರಿದ್ದರು.

‘ಗುಂಪುಗಾರಿಕೆ ಮಾಡಿಲ್ಲ, ಬೆನ್ನಿಗೆ ಚೂರಿ ಹಾಕಲ್ಲ’

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಯಾವತ್ತೂ ಗುಂಪುಗಾರಿಕೆ ಮಾಡಿಲ್ಲ. ಬೆನ್ನಿಗೆ ಚೂರಿ ಹಾಕುವುದಿಲ್ಲ. ನೇರವಾಗಿ ಹೋರಾಟ ಮಾಡುವವನು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ನನ್ನ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾವು ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ’ ಎಂದರು.

‘ನಾನು ದೆಹಲಿಗೆ ಹೋದರೆ ಒಬ್ಬನೇ ಹೋಗುತ್ತೇನೆ. 8-10 ಶಾಸಕರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದು ದೊಡ್ಡ ವಿಚಾರವಲ್ಲ. ನಾನು ಅಧ್ಯಕ್ಷ ಸ್ಥಾನದಲ್ಲಿ ಇರುವಾಗ ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗಬೇಕು. 140 ಶಾಸಕರೂ ನಮ್ಮ ನಾಯಕರೇ. ಯಾರಿಗೂ ತಾರತಮ್ಯ ಮಾಡುವುದಿಲ್ಲ’ ಎಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಜೊತೆಗಿನ ಮಾತುಕತೆ ಬಗ್ಗೆ ಕೇಳಿದಾಗ, ‘ನಾನು ಎಲ್ಲರ ಜೊತೆ ಚರ್ಚೆ ಮಾಡಿದ್ದೇನೆ. ಏನು ಚರ್ಚೆ ಮಾಡಿದ್ದೇನೆಂದು ಮಾಧ್ಯಮಗಳ ಮುಂದೆ ಬಹಿರಂಗಪಡಿಸುವುದಿಲ್ಲ’ ಎಂದರು.


> ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ತಲೆದೋರಿದೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರು ಆಲ್ ಈಸ್ ವೆಲ್ ಎನ್ನುತ್ತಲೆ ಪರಸ್ಪರ ವೆಲ್‌ಗೆ (ಬಾವಿ) ನೂಕಲು ಪ್ರಯತ್ನಿಸುತ್ತಿದ್ದಾರೆ
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> ಬಿಜೆಪಿಗರಿಗೆ ರಾಜ್ಯದಲ್ಲಿ ಬೇಗ ಅಧಿಕಾರಕ್ಕೆ ಬರುವ ಆತುರವಿದೆ. ಕೇಂದ್ರದಲ್ಲೂ ಲೂಟಿ ಮಾಡುತ್ತಿದ್ದು, ರಾಜ್ಯದಲ್ಲೂ ಸರ್ಕಾರ ಬೀಳಿಸಿ ರಾಜ್ಯ ಲೂಟಿ ಮಾಡುವ ಯೋಚನೆಯಲ್ಲಿದ್ದಾರೆ
> **ಸಂತೋಷ್ ಲಾಡ್,** ಕಾರ್ಮಿಕ ಸಚಿವ

ನಿಷ್ಠೆ, ಆತ್ಮಸಾಕ್ಷಿ ದೇವರಿಗೆ ಗೊತ್ತು: ‘ಕುಮಾರಸ್ವಾಮಿ ಅವರ ಜತೆಯಲ್ಲೇ ನಾನು ನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಕುಮಾರಸ್ವಾಮಿ ಅದನ್ನು ಒಪ್ಪದೇ ಇರಬಹುದು. ನನ್ನ ನಿಷ್ಠೆ, ಆತ್ಮಸಾಕ್ಷಿ ಆ ದೇವರಿಗೆ ಗೊತ್ತಿದೆ. ಕುಮಾರಸ್ವಾಮಿ ಅವರ ಸರ್ಕಾರ ಉಳಿಸಲು ಕೊನೆ ದಿನದವರೆಗೂ ಎಷ್ಟು ಪ್ರಯತ್ನ ಮಾಡಿದ್ದೇನೆಂದು ಅವರ ತಂದೆಯವರಿಗೂ ಗೊತ್ತಿದೆ. ಅವರು ತಮ್ಮ ಆಸೆಗೆ ಏನಾದರೂ ಮಾತನಾಡಿಕೊಳ್ಳಲಿ, ನಾನು ಬೇಸರ ಮಾಡಿಕೊಳ್ಳುವುದಿಲ್ಲ’ ಎಂದರು.

ಅಪ್ಪ- ಮಗ ಭೇಟಿಗೆ ಅರ್ಜಿ ಹಾಕಿಕೊಳ್ಳಬೇಕೇ?: ಸಚಿವ ಪ್ರಿಯಾಂಕ್ ಖರ್ಗೆ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿರುವ ಬಗ್ಗೆ ಕೇಳಿದಾಗ, ‘ಅಪ್ಪ ಮಗನ ಭೇಟಿಗೂ ನೀವು (ಮಾಧ್ಯಮಗಳು) ಅರ್ಥ ಕಲ್ಪಿಸುತ್ತೀರಾ? ಅಪ್ಪ, ಮಕ್ಕಳ ಭೇಟಿಗೂ ಅರ್ಜಿ ಹಾಕಿಕೊಳ್ಳಬೇಕೇ’ ಎಂದು ಪ್ರಶ್ನಿಸಿದರು.

‘ಸ್ವಾಮೀಜಿ ಬೀದಿಗಿಳಿಯದಿದ್ದರೆ ದೇವೇಗೌಡರು ಸಿ.ಎಂ ಆಗುತ್ತಿದ್ದರೇ?’



ಶಿವಕುಮಾರ್

ಬೆಂಗಳೂರು: ‘ಕುಮಾರಸ್ವಾಮಿ ಬಹಳ ದೊಡ್ಡವರು. ಅವರು ಯಾರ ಬೆಂಬಲವನ್ನೂ ಪಡೆಯುವುದಿಲ್ಲ, ಒಕ್ಕಲಿಗರ ಮಠ, ಸಂಘ ಹಾಗೂ ಜಾತಿಯನ್ನು ಎಂದೂ ಉಪಯೋಗಿಸಿಕೊಂಡಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

‘ನಿಮ್ಮ ಪರವಾಗಿ ಸ್ವಾಮೀಜಿಗಳು ಧ್ವನಿ ಎತ್ತಿರುವುದಕ್ಕೆ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದಾರಲ್ಲ’ ಎಂದು ಸುದ್ದಿಗಾರರು ಪ್ರಸ್ತಾಪಿಸಿದಾಗ, ‘ಪಾಪ, ಕುಮಾರಣ್ಣನಿಗೆ ಒಕ್ಕಲಿಗರ ಎರಡನೇ ಮಠ ಹೇಗಾಯಿತು ಎಂಬುದು ಗೊತ್ತಿಲ್ಲವೇ? ಅದನ್ನು ಕಟ್ಟಿದವರು ಯಾರು? ಒಕ್ಕಲಿಗ ಮಠದ ಹಿರಿಯ ಸ್ವಾಮೀಜಿಗಳು ಇಲ್ಲದಿದ್ದರೆ ದೇವೇಗೌಡರು ಮುಖ್ಯಮಂತ್ರಿ ಆಗುತ್ತಿದ್ದರೇ’ ಎಂದು ಪ್ರಶ್ನಿಸಿದರು.

‘ದೇವೇಗೌಡರ ಪರ ಸ್ವಾಮೀಜಿಗಳು ರಸ್ತೆಗೆ ಇಳಿಯಲಿಲ್ಲವೇ? ಸದಾನಂದ ಗೌಡರಿಗೆ ತೊಂದರೆ ಆದಾಗ ಸ್ವಾಮೀಜಿಗಳು ಸುಮ್ಮನೆ ಕೂತಿದ್ದರಾ? ಕೆಲವು ಸಂದರ್ಭದಲ್ಲಿ ಸ್ವಾಮೀಜಿಗಳು ಮಾತನಾಡುತ್ತಾರೆ. ಅದರಲ್ಲಿ ತಪ್ಪೇನಿದೆ? ಬೇರೆ ಸಂದರ್ಭದಲ್ಲಿ ಸ್ವಾಮೀಜಿಗಳು ಮಾತನಾಡಿದಾಗ ನಾನು ಬೇಸರ ಮಾಡಿಕೊಂಡಿದ್ದೇನಾ?’ ಎಂದು ತಿರುಗೇಟು ನೀಡಿದರು.

‘ನಾನು ಸ್ವಾಮೀಜಿ ಬೆಂಬಲ ಕೇಳಿಲ್ಲ’ ಎಂಬ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಕೇಳಿದಾಗ, ‘ನಾನು ಕೇಳಿದ್ದೇನಾ? ನಾನು ಕೂಡ ಯಾರ ಬೆಂಬಲವನ್ನೂ ಕೇಳಿಲ್ಲ. ಅವರು ಪ್ರೀತಿಯಿಂದ ಮಾತನಾಡಿದರೆ ಬೇಡ ಎನ್ನಲು ಸಾಧ್ಯವೇ’ ಎಂದರು.

‘ನಾನು ಒಂದು ಸಮುದಾಯದಲ್ಲಿ ಹುಟ್ಟಿದ್ದರೂ ಎಲ್ಲ ಸಮುದಾಯಗಳನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ಬಾಳೆಹೊನ್ನೂರು ಸ್ವಾಮೀಜಿ, ಶ್ರೀಶೈಲ ಸ್ವಾಮೀಜಿ ಸೇರಿದಂತೆ ಸಾಕಷ್ಟು ಸ್ವಾಮೀಜಿಗಳು ನನ್ನ ಪರ ಮಾತನಾಡಿದ್ದಾರೆ. ನನ್ನ ಮೇಲೆ ಅವರಿಗೆ ಪ್ರೀತಿ, ವಿಶ್ವಾಸ ಇದೆ. ಜೈನ ಸ್ವಾಮೀಜಿಗಳು ಕೂಡ ದೊಡ್ಡ ಸಮಾವೇಶದಲ್ಲಿ ಬಹಿರಂಗವಾಗಿ ಆಶೀರ್ವಾದ ಮಾಡಿದ್ದಾರೆ. ಧರ್ಮಸ್ಥಳಕ್ಕೆ ಹೋದಾಗಲೂ ನನಗೆ ಬೆಂಬಲ ನೀಡಿದರು. ಅದನ್ನು ತಪ್ಪು ಎಂದು ಹೇಳಲು ಸಾಧ್ಯವೇ?’ ಎಂದು ಪ್ರಶ್ನಿಸಿದರು.

‘ಸ್ವಾಮೀಜಿಗಳು ಸಿಎಂ ಮಾಡಿರಲಿಲ್ಲ’



ಕುಮಾರಸ್ವಾಮಿ

ಶಿವಮೊಗ್ಗ: ‘ದೇವೇಗೌಡರನ್ನು ಯಾವುದೇ ಸ್ವಾಮೀಜಿ ಮುಖ್ಯಮಂತ್ರಿ ಮಾಡಿರಲಿಲ್ಲ. ಸ್ವಾಮೀಜಿಗಳನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಿದ್ದರೆ, ಅವರು 1972ರಲ್ಲಿಯೇ ಮುಖ್ಯಮಂತ್ರಿ ಆಗುತ್ತಿದ್ದರು. 1994ರವರೆಗೆ ಕಾಯುವ ಅಗತ್ಯ ಇರಲಿಲ್ಲ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ದೇವೇಗೌಡರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿನ ಶ್ರಮ ಯಾರೂ ಚರ್ಚೆ ಮಾಡುವಂತಹದ್ದಲ್ಲ’ ದೇವೇಗೌಡರನ್ನು ಮುಖ್ಯಮಂತ್ರಿ ಮಾಡಿ ಎಂದು ಯಾವ ಸ್ವಾಮೀಜಿ ಆಗ ಹೇಳಿಕೆ ನೀಡಿರಲಿಲ್ಲ. ಸಭೆ ಕೂಡ ಮಾಡಿರಲಿಲ್ಲ. ಪಾಪ ಈಗ ಅವರು (ಡಿ.ಕೆ.ಶಿವಕುಮಾರ್) ಹಾಗೆ ಹೇಳುತ್ತಿದ್ದಾರೆ’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

‘ಮುಖ್ಯಮಂತ್ರಿ ಸ್ಥಾನದ ಗುದ್ದಾಟದಲ್ಲಿ ಈ ಸರ್ಕಾರದ ಆಡಳಿತ ಸಂಪೂರ್ಣ ನಿಷ್ಕ್ರಿಯವಾಗಿದೆ. ತೆರಿಗೆ ಸಂಗ್ರಹದಲ್ಲಿ ಈ ಆರ್ಥಿಕ ವರ್ಷದಲ್ಲಿ ₹15,000 ಕೋಟಿ ಖೋತಾ ಆಗಿದೆ. ತುಂಗಭದ್ರಾ ಜಲಾಶಯದ ಗೇಟ್ ಅಳವಡಿಸಿದ್ದ ಗುತ್ತಿಗೆದಾರನಿಗೆ ಇನ್ನೂ ಹಣ ಪಾವತಿಸಿಲ್ಲ. ಖಾಸಗಿಯವರಿಂದ ಸಿಎಸ್‌ಆರ್ ನಿಧಿ ಸಂಗ್ರಹ ಮಾಡಿ ಕೆಪಿಎಸ್ ಶಾಲೆಗಳನ್ನು ನಿರ್ಮಿಸುವ ಸ್ಥಿತಿಗೆ ಸರ್ಕಾರ ತಲುಪಿದೆ’ ಎಂದು ಟೀಕಿಸಿದರು.

‘ಸಿದ್ದರಾಮಯ್ಯ 2013ರಲ್ಲಿ ಸಿ.ಎಂ ಆಗಿದ್ದಾಗ ಮೈಸೂರಿನಲ್ಲಿ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೇ ಸೇರಿ ಚಿನ್ನದ ವ್ಯಾಪಾರಿ ದರೋಡೆ ಮಾಡಿದ್ದರು. ಈಗ ಪರಪ್ಪನ ಅಗ್ರಹಾರ ಜೈಲಿನಿಂದಲೇ ಕೈದಿಗಳು ಡಿಸ್ಟಿಲರಿ ನಡೆಸುತ್ತಿದ್ದಾರೆ. ದಾವಣಗೆರೆಯಲ್ಲಿ ನಡೆದ ಚಿನ್ನದ ವ್ಯಾಪಾರಿಯ ದರೋಡೆ ಹಾಗೂ ಬೆಂಗಳೂರಿನಲ್ಲಿ ನಡೆದ ಬ್ಯಾಂಕ್ ದರೋಡೆಯ ನೇತೃತ್ವವನ್ನೂ ಪೊಲೀಸರೇ ವಹಿಸಿದ್ದಾರೆ. ಇದೆಲ್ಲವೂ ಸಿದ್ದರಾಮಯ್ಯ ಆಡಳಿತದ ವೈಖರಿಗೆ ಹಿಡಿದ ಕೈಗನ್ನಡಿ’ ಎಂದು ವಾಗ್ದಾಳಿ ನಡೆಸಿದರು.

ಸುದ್ದಿ 2 ನಿಮಿಷ


‘ಕೆಲವರು ಪಾಠ ಕಲಿಯುವುದಿಲ್ಲ’

ಇಂದೋರ್ (ಪಿಟಿಐ): ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಕರ್ನಾಟಕದಲ್ಲಿ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ಬಣ ರಾಜಕೀಯದ ವಿರುದ್ಧ ವಾಗ್ದಾಳಿ ನಡೆಸಿರುವ ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ, ‘ಸಾರ್ವಜನಿಕರು ಪದೇ ಪದೇ ಪಾಠ ಕಲಿಸುತ್ತಿದ್ದರೂ ಕೆಲವು ವಿದ್ಯಾರ್ಥಿಗಳು ಕಲಿಯಲು ಸಿದ್ಧರಿಲ್ಲ’ ಎಂದು ಹೇಳಿದ್ದಾರೆ.

‘ಯಾವ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿದೆಯೋ, ಆ ರಾಜ್ಯದಲ್ಲೇ ಮುಖ್ಯಮಂತ್ರಿ ಕುರ್ಚಿಗಾಗಿ ಕಾಳಗ ನಡೆಯುತ್ತಿದೆ. ಪ್ರತಿಸ್ಪರ್ಧಿ ಪಕ್ಷದ ಆಂತರಿಕ ವಿಷಯವೊಂದರ ಬಗ್ಗೆ ವಿಸ್ತೃತವಾಗಿ ಟೀಕೆ ಮಾಡಲು ನಾನು ಬಯಸುವುದಿಲ್ಲ. ಆದರೆ, ಈಗಾಗಲೇ ಜನರು ಕಾಂಗ್ರೆಸ್‌ನಿಂದ ದೂರವಾಗಿದ್ದಾರೆ. ಆ ಪಕ್ಷಕ್ಕೆ ಪಾಠ ಕಲಿಸುತ್ತಲೇ ಬಂದಿದ್ದಾರೆ. ಆದರೆ, ಕೆಲವು ವಿದ್ಯಾರ್ಥಿಗಳು ಇನ್ನೂ ಕಲಿತುಕೊಳ್ಳಲು ಸಿದ್ಧರಿಲ್ಲ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೇಶದಾದ್ಯಂತ ಜನರು ಬಿಜೆಪಿ ಬಾವುಟವನ್ನು ಇನ್ನಷ್ಟು ಎತ್ತರಕ್ಕೆ ಎತ್ತಿ ಹಿಡಿದಿದ್ದಾರೆ. ಜಾಗತಿಕ ಮಟ್ಟದಲ್ಲಿ ಭಾರತದ ಘನತೆಯನ್ನು ಹೆಚ್ಚಿಸುವಂತೆ ಅಭಿವೃದ್ಧಿ ಕೆಲಸಗಳು ನಡೆದಿವೆ’ ಎಂದರು.

‘ಸಂಪೂರ್ಣ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯಲು ತಮಗೆ ಜನಾದೇಶವಿದೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಆದರೆ, ಎರಡೂವರೆ ವರ್ಷದ ನಂತರ ತಮಗೆ ಸರದಿ ಪ್ರಕಾರ ಮುಖ್ಯಮಂತ್ರಿ ಹುದ್ದೆ ನೀಡುವುದಾಗಿ ವಾಗ್ದಾನ ಮಾಡಲಾಗಿತ್ತು ಎನ್ನುವುದು ಶಿವಕುಮಾರ್ ವಾದ. ಕಳೆದ ಎರಡು ತಿಂಗಳಿಂದ ನಾಯಕತ್ವ ಬದಲಾವಣೆಯ ಚರ್ಚೆ ನಡೆಯುತ್ತಿದೆ. ಆದರೆ, ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸಿದ ಬೆನ್ನಲ್ಲೇ, ನ.20ರಿಂದ ಸಮಸ್ಯೆ ಉಲ್ಬಣಗೊಂಡಿದೆ’ ಎಂದು ಸಿಂಧ್ಯಾ ಹೇಳಿದರು.



ಹಿಂದೂಗಳಿಂದ ಬಸವಣ್ಣನನ್ನು ಬೇರ್ಪಡಿಸಲು ಪ್ರಯತ್ನ –ಸ್ವಾಮೀಜಿ

ದಾವಣಗೆರೆ: ‘ವಚನಗಳು, ಬಸವ ತತ್ವವನ್ನು ಕೆಲವರು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿ, ಬಸವಣ್ಣನವರನ್ನು ಹಿಂದೂ ಧರ್ಮದಿಂದ ಬೇರ್ಪಡಿಸುವ ಪ್ರಯತ್ನ ಮಾಡುತ್ತಿದ್ದಾರೆ’ ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ಇಲ್ಲಿ ಹರ ಸಾಹಿತ್ಯ ಸಂಕುಲ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಂಶೋಧಕ ಡಿ.ಎ. ಉಪಾಧ್ಯ ಅವರ ‘ಬಸವಶೈವದಲ್ಲಿ ಹಿಂದುತ್ವ’ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಬಸವಣ್ಣನವರನ್ನು ನಾಸ್ತಿಕ ಎಂಬಂತೆ ಬಿಂಬಿಸಲಾಗುತ್ತಿದೆ. ಪಾಪ–ಪುಣ್ಯ, ಸ್ವರ್ಗ–ನರಕ ಅಲ್ಲಗಳೆದರೆಂದು ನಂಬಿಸಲಾಗುತ್ತಿದೆ. ಕರ್ಮ ಸಿದ್ಧಾಂತ ಟೀಕಿಸಿದ್ದಾರೆಂಬ ತಪ್ಪು ಭಾವನೆ ಮೂಡಿಸಲಾಗುತ್ತಿದೆ. ಬಸವಣ್ಣನವರು ಹೀಗೆ ಎಲ್ಲಿ ಹೇಳಿದ್ದಾರೆ ತೋರಿಸಿ?’ ಎಂದು ಸವಾಲು ಹಾಕಿದರು.

‘ಬಸವತತ್ವ ಪಾಲಿಸುವವರನ್ನು ನಾಸ್ತಿಕರನ್ನಾಗಿಸಲಾಗುತ್ತಿದೆ. ವೀರಶೈವ ಲಿಂಗಾಯತರು ಹಿಂದೂಗಳಲ್ಲ ಎಂದು ಪ್ರತಿಪಾದಿಸುವವರು ಮೊದಲು ಶಿವಯೋಗ ಸಾಧನೆ ಮಾಡಬೇಕು’ ಎಂದು ಹೇಳಿದರು.

ಚಿಟಿಕೆ ಸುದ್ದಿ

ಭೀಮ ನಡಿಗೆ: ತಾಲ್ಲೂಕಿನವರಿಗೆ ಮಾತ್ರ ಅನುಮತಿ

ಚಿತ್ತಾಪುರ (ಕಲಬುರಗಿ ಜಿಲ್ಲೆ): ‘ಪಟ್ಟಣದಲ್ಲಿ ಇಂದು (ಡಿಸೆಂಬರ್ 1) ಆಯೋಜಿಸಿರುವ ‘ಭೀಮ ನಡಿಗೆ’ ಪಥ ಸಂಚಲನದಲ್ಲಿ ಚಿತ್ತಾಪುರ ತಾಲ್ಲೂಕಿನವರು ಮಾತ್ರ ಭಾಗವಹಿಸಬೇಕು’ ಎಂಬ ಷರತ್ತು ವಿಧಿಸಿ ತಹಶೀಲ್ದಾರ್ ನಾಗಯ್ಯ ಹಿರೇಮಠ ಅವರು ನ. 30ರಂದು ಅನುಮತಿ ನೀಡಿದ್ದಾರೆ.

ಸಾರ್ವಜನಿಕ ಸ್ಥಳಗಳು, ಬೀದಿಗಳಲ್ಲಿ ಭಾಷಣ, ಕಾರ್ಯಕ್ರಮ ಆಯೋಜಿಸಬಾರದು. ರಾಜಕೀಯ ಭಾಷಣ ಮಾಡಬಾರದು, ಪ್ರಚೋದನಕಾರಿ ಭಾಷೆ, ಘೋಷಣೆ ಬಳಸಬಾರದು. ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗದಂತೆ ಮುಂಜಾಗ್ರತೆ ಕ್ರಮ ವಹಿಸಬೇಕು ಎಂದು ತಹಶೀಲ್ದಾರ್ ತಮ್ಮ ಆದೇಶದಲ್ಲಿ ಸೂಚಿಸಿದ್ದಾರೆ.

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನದ ದಿನವೇ ತಮಗೂ ಭೀಮನಡಿಗೆ ನಡೆಸಲು ಅನುಮತಿ ನೀಡುವಂತೆ ಕೋರಿ ವಿವಿಧ ದಲಿತ ಸಂಘಟನೆಗಳು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದವು. ಆದರೆ, ಭೀಮ ನಡಿಗೆಗೆ ಬೇರೆ ದಿನ ಅವಕಾಶ ನೀಡಲು ಹೈಕೋರ್ಟ್ ಸೂಚಿಸಿತ್ತು. ಆರ್‌ಎಸ್‌ಎಸ್ ಪಥಸಂಚಲನ ನ.16ರಂದು ನಡೆದಿತ್ತು.

ಅತ್ಯಾಚಾರ: ಅತಿಥಿ ಉಪನ್ಯಾಸಕ ಬಂಧನ

ಬೆಳಗಾವಿ: ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಇಲ್ಲಿನ ಖಾಸಗಿ ಕಾಲೇಜಿನ ಅತಿಥಿ ಉಪನ್ಯಾಸಕ, ಬಸವನ ಕುಡಚಿಯ ನಾಗೇಶ್ವರ ದೇಮಿನಕೊಪ್ಪ ಎಂಬುವರನ್ನು ಕ್ಯಾಂಪ್ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

‘ಆರೋಪಿ ಎರಡು ವರ್ಷಗಳಿಂದ ವಿದ್ಯಾರ್ಥಿನಿ ಮೇಲೆ ಆಗಾಗ್ಗೆ ಅತ್ಯಾಚಾರ ಎಸಗುತ್ತಿದ್ದ. ಈ ವಿಷಯ ಬಹಿರಂಗಪಡಿಸದಂತೆ ಜೀವ ಬೆದರಿಕೆ ಹಾಕಿದ್ದ. ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬಸ್ ಮಗುಚಿ ವಿದ್ಯಾರ್ಥಿ ಸಾವು

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಪ್ರವಾಸ ಬಂದಿದ್ದ ಮೈಸೂರಿನ ಶಾಲೆಯೊಂದರ ವಿದ್ಯಾರ್ಥಿಗಳಿದ್ದ ಬಸ್ ತಾಲ್ಲೂಕಿನ ಗೇರುಸೊಪ್ಪ ಸಮೀಪ ಸೂಳೆಮುರ್ಕಿ ಇಳಿಜಾರಿನ ತಿರುವಿನಲ್ಲಿ ಭಾನುವಾರ ಮಗುಚಿದ್ದು ವಿದ್ಯಾರ್ಥಿ ಮೃತಪಟ್ಟಿದ್ದಾನೆ. 35 ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಗಾಯಗೊಂಡಿದ್ದಾರೆ.

ಮೈಸೂರಿನ ಟಿ.ಕೆ.ಲೇಔಟ್‌ನ ತರಳಬಾಳು ಪ್ರೌಢಶಾಲೆಯ ಪವನ್ (16) ಮೃತ ವಿದ್ಯಾರ್ಥಿ.

ತಂಡ ಜೋಗ ಜಲಪಾತ ವೀಕ್ಷಿಸಿ ಗೋಕರ್ಣಕ್ಕೆ ಹೋಗುವಾಗ ಅಪಘಾತ ಸಂಭವಿಸಿದೆ. ಗಾಯಗೊಂಡ ವಿದ್ಯಾರ್ಥಿಗಳನ್ನು ವಿವಿಧ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಅಮೀನುಲ್ ವಿರುದ್ಧದ ದೇಶದ್ರೋಹ ಪ್ರಕರಣ ರದ್ದು

ಗುವಾಹಟಿ (ಪಿಟಿಐ): ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಏಪ್ರಿಲ್‌ನಲ್ಲಿ ಬಂಧಿಸಲಾಗಿದ್ದ ಎಐಯುಡಿಎಫ್ ಶಾಸಕ ಅಮೀನುಲ್ ಇಸ್ಲಾಂ ಅವರನ್ನು ಬಿಡುಗಡೆ ಮಾಡುವಂತೆ ಗುವಾಹಟಿ ಹೈಕೋರ್ಟ್ ಆದೇಶ ನೀಡಿದೆ. ಇಸ್ಲಾಂ ಅವರ ವಿರುದ್ಧ ಇದ್ದ ಪ್ರಕರಣವನ್ನು ನ್ಯಾಯಾಲಯ ರದ್ದು ಮಾಡಿತು.

ಅರೆಭಾಷೆ, ಸಂಸ್ಕೃತಿ ಉಳಿಸಿಕೊಳ್ಳಿ: ಸಿದ್ದರಾಮಯ್ಯ

ಅಕಾಡೆಮಿಯಿಂದ ಮೂವರಿಗೆ ಗೌರವ ಪ್ರಶಸ್ತಿ ಪ್ರದಾನ; ಸಮುದಾಯ ಭವನಕ್ಕೆ ಮತ್ತೆ ₹50 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡವನ್ನು ಶ್ರೀಮಂತಗೊಳಿಸಿರುವ 230 ಸಣ್ಣ ಭಾಷೆಗಳಿದ್ದು, ದಕ್ಷಿಣ ಕನ್ನಡ ಹಾಗೂ ಕೊಡಗು ಭಾಗದಲ್ಲಿ ಬಳಕೆಯಲ್ಲಿರುವ ಅರೆಭಾಷೆ ಹಾಗೂ ಸಂಸ್ಕೃತಿ ಉಳಿಸಿಕೊಳ್ಳಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 2024ನೇ ಸಾಲಿನ ಗೌರವ ಪ್ರಶಸ್ತಿ ಸಮಾರಂಭದಲ್ಲಿ ಅವರು ಮಾತನಾಡಿದರು.

‘147 ವರ್ಷದ ಹಿಂದೆ ಬರಗಾಲದಿಂದ ಹಾಸನ ಭಾಗದಿಂದ ಸುಳ್ಯ, ಕೊಡಗು ಭಾಗಕ್ಕೆ ಬಂದ ಗೌಡರು ತುಳು, ಕೊಡವ ಹಾಗೂ ಕೊಂಕಣಿ ಭಾಷೆಯ ಮಿಶ್ರ ಸಂಸ್ಕೃತಿಯಂತೆ ಅರೆಭಾಷೆ ರೂಢಿಸಿಕೊಂಡಿದ್ದಾರೆ. ಕನ್ನಡದ ಅಸ್ಮಿತೆಯಂತಿರುವ ಸಣ್ಣ ಭಾಷೆಗಳನ್ನು ಸಂರಕ್ಷಿಸಿಕೊಳ್ಳಬೇಕು’ ಎಂದು ಹೇಳಿದರು.

‘ಕೊಡಗಿನ ಭಾಗಮಂಡಲದಲ್ಲಿ ನಾಡಗೌಡರ ಸಮುದಾಯ ಭವನಕ್ಕೆ ಈಗಾಗಲೇ ₹ 1 ಕೋಟಿ ಒದಗಿಸಿದ್ದೇವೆ. ಇನ್ನೂ ₹50 ಲಕ್ಷ ಕೊಡುತ್ತೇವೆ. ಮಡಿಕೇರಿಯಲ್ಲಿ ಅರೆಭಾಷಿಕ ಗೌಡರಿಗೆ ಜಮೀನು ನೀಡುವ ಬೇಡಿಕೆಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅಂಗೀಕಾರ ನೀಡುತ್ತೇವೆ’ ಎಂದು ಭರವಸೆ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಕರ್ನಾಟಕದ ಒಂದೊಂದು ಭಾಗದಲ್ಲೂ ಕನ್ನಡವನ್ನು ವಿಭಿನ್ನವಾಗಿ ಮಾತನಾಡುತ್ತಾರೆ. ಹಾಗೆಯೇ ಅರೆಭಾಷಿಕರ ಭಾಷೆ, ಸಂಸ್ಕೃತಿಯೂ ವಿಭಿನ್ನವಾಗಿದೆ. ನಾನಾ ಕಾರಣಗಳಿಂದ ಬೆಂಗಳೂರು, ದೆಹಲಿ, ಹೊರದೇಶದಲ್ಲಿರುವ ಸಮುದಾಯವರು ತಮ್ಮ ಭಾಷೆಯನ್ನು ಎಂದಿಗೂ ಮರೆಯಬಾರದು. ಜಗತ್ತಿನ ಏಳು ಸಾವಿರ ಪ್ರಮುಖ ಭಾಷೆಗಳಲ್ಲಿ, 2,845 ಭಾಷೆಗಳು ಕಣ್ಮರೆಯಾಗಿವೆ. ಸಂಸ್ಕೃತಿಯೇ ಭಾರತದ ಆಸ್ತಿಯಾಗಿರುವುದರಿಂದ ಅದನ್ನು ಉಳಿಸಿಕೊಳ್ಳಬೇಕು’ ಎಂದು ಹೇಳಿದರು.

ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ‘ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳು ಹಲವು ಭಾಷೆಗಳ ಸಂಗಮ. ಬೇರೆ ಭಾಷೆ ದ್ವೇಷಿಸದೇ ಸಾಮರಸ್ಯ ಕಾಪಾಡಬೇಕು. ಸಮುದಾಯದ ಹೊಸ ತಲೆಮಾರಿನವರು ಅರೆಭಾಷೆಯಲ್ಲಿಯೇ ಮಾತನಾಡಬೇಕು’ ಎಂದು ಹೇಳಿದರು.



ಸಮಾರಂಭದಲ್ಲಿ ಕೆ.ಆರ್ ಗಂಗಾಧರ (ಸಾಹಿತ್ಯ), ಯು.ಪಿ ಶಿವಾನಂದ (ಪತ್ರಿಕೋದ್ಯಮ) ಮತ್ತು ಡಿ.ಎಸ್ ಆನಂದ (ಆಡಳಿತ ಸೇವೆ) ಅವರಿಗೆ 2024ನೇ ಸಾಲಿನ ಗೌರವ ಪ್ರಶಸ್ತಿಯನ್ನು ಸಿದ್ದರಾಮಯ್ಯ ಪ್ರದಾನ ಮಾಡಿದರು. ಟಿ.ಎಚ್.ಎಂ.ಕುಮಾರ್, ಸದಾನಂದ ಮಾವಜಿ, ಎ.ಎಸ್.ಪೊನ್ನಣ್ಣ, ಮಂತರ್ ಗೌಡ ಮತ್ತು ಬೈರತಿ ಸುರೇಶ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಭಾಷೆಗಳಿಗೆ ಮಾನ್ಯತೆ ನೀಡದಿರಲು ಯತ್ನ’

‘ಎಂಟನೇ ಪರಿಚ್ಛೇದದಡಿ ಹೊಸ ಭಾಷೆಗಳನ್ನು ಸೇರಿಸದಂತೆ ಸಂವಿಧಾನಕ್ಕೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಯೋಚಿಸುತ್ತಿದೆ. ಇದರಿಂದ ಮುಂದೆ ಯಾವುದೇ ಭಾಷೆಗೆ ಸಂವಿಧಾನದ ಮಾನ್ಯತೆ ಸಿಗುವುದಿಲ್ಲ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ ವ್ಯಕ್ತಪಡಿಸಿದರು.

‘ಭಾರತದಲ್ಲಿ 19,569 ಸಣ್ಣ ಹಾಗೂ ಅತಿ ಸಣ್ಣ ಭಾಷೆಗಳಿವೆ. ಇದರಲ್ಲಿ 22 ಭಾಷೆಗಳಿಗೆ ಮಾನ್ಯತೆ ಸಿಕ್ಕಿದೆ. ಕರ್ನಾಟಕದ ಅರೆಭಾಷೆಯೂ ಸೇರಿ 99 ಭಾಷೆ ಸೇರಿಸುವ ಪ್ರಸ್ತಾವನೆಗೆ ಒಪ್ಪಿಗೆ ದೊರೆತಿಲ್ಲ. ಪ್ರಾಧಿಕಾರವು ಕರ್ನಾಟಕದಲ್ಲಿ 230 ಸಣ್ಣ ಭಾಷೆಗಳ ಪಟ್ಟಿ ಮಾಡಿ ಸಬಲೀಕರಣಕ್ಕೆ ಮುಂದಾಗಿದೆ’ ಎಂದರು.

15 ಜಿಲ್ಲೆಗಳಲ್ಲಿ ಮಳೆ ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ, ಚಿತ್ರದುರ್ಗ, ಉಡುಪಿ, ದಕ್ಷಿಣ ಕನ್ನಡ, ಕೊಪ್ಪಳ, ಕಲಬುರಗಿ, ಬೀದರ್, ಯಾದಗಿರಿ, ಗದಗ, ರಾಯಚೂರು ಸಹಿತ ಹಲವು ಜಿಲ್ಲೆಗಳಲ್ಲಿ ‘ದಿತ್ವಾ’ ಚಂಡಮಾರುತದ ಪರಿಣಾಮ ಮುಂದಿನ ಆರು ದಿನ ತುಂತುರು ಮಳೆಯಾಗಲಿದೆ.

ದಕ್ಷಿಣ ಒಳನಾಡಿನ ಬಳ್ಳಾರಿ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಡಿ.1ರಂದು ನಿರಂತರ ಗಾಳಿಯೊಂದಿಗೆ ಲಘು ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಡಿ.2ರಂದು ರಾಮನಗರ, ಮಂಡ್ಯ, ದಾವಣಗೆರೆ, ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಲ್ಲೂ ಒಂದೆರಡು ಕಡೆ ಹಗುರ ಮಳೆಯಾಗುವ ಸೂಚನೆಯಿದೆ.

ಶಂಕರಾಚಾರ್ಯ, ಬಸವಣ್ಣ ಕೃಷ್ಣನ ಸ್ವರೂಪಿ

ಜಗತ್ತಿನ ಎಲ್ಲಾ ವಿಪ್ಲವಗಳಿಗೆ ಭಗವದ್ಗೀತೆಯಲ್ಲಿ ಉತ್ತರ; ಕೇರಳ ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಧರ್ಮಕ್ಕೆ ಹಿನ್ನಡೆ ಆದಾಗ ಅಧರ್ಮ ಅಳಿಸಿ ಧರ್ಮ ಸಂಸ್ಥಾಪಿಸಲು ಮತ್ತೆ ಹುಟ್ಟಿ ಬರುವುದಾಗಿ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮ ಹೇಳಿದ್ದರು. ಅದರಂತೆ ಧರ್ಮಕ್ಕೆ ಕುತ್ತು ಬಂದಾಗ ಕೇರಳದಲ್ಲಿ ಆದಿ ಶಂಕರಾಚಾರ್ಯ ಹಾಗೂ ಕರ್ನಾಟಕದಲ್ಲಿ ಬಸವೇಶ್ವರರ ರೂಪದಲ್ಲಿ ಜನಿಸಿದ್ದರು’ ಎಂದು ಕೇರಳ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಭಾನುವಾರ ಅಭಿಪ್ರಾಯಪಟ್ಟರು.

ಇಲ್ಲಿನ ಅಲ್ಲಮಪ್ರಭು ಮೈದಾನದಲ್ಲಿ ಶಿರಸಿಯ ಸ್ವರ್ಣರಶ್ಮೀ ಟ್ರಸ್ಟ್, ಭಗವದ್ಗೀತಾ ಅಭಿಯಾನ ನಿಮಿತ್ತ ಏರ್ಪಡಿಸಿದ್ದ ರಾಜ್ಯಮಟ್ಟದ ಮಹಾ ಸಮರ್ಪಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಭಗವದ್ಗೀತೆ ಸನಾತನ ಹಾಗೂ ನಿರಂತರ. ಜಗತ್ತಿನ ಎಲ್ಲ ವಿಪ್ಲವಗಳಿಗೂ ಅದರಲ್ಲಿ ಉತ್ತರ ಸಿಗುತ್ತದೆ. ಕುರುಕ್ಷೇತ್ರದಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಗೀತೆ ಬೋಧಿಸಿದ್ದರು. ಅಲ್ಲಿ ಅರ್ಜುನ ನಿಮಿತ್ತ ಮಾತ್ರ. ಅದು ಇಡೀ ಮಾನವ ಸಮಾಜಕ್ಕೆ ನೀಡಿದ ಸಂದೇಶ. ಹೀಗಾಗಿ ಭಗವದ್ಗೀತೆ ವಿಶ್ವಕ್ಕೆ ವಂದನೀಯ’ ಎಂದರು.

‘ಸಮಾಜದ ಬಹುಪಾಲು ಜನರು ಮಾನಸಿಕ ಖಿನ್ನತೆಯಿಂದ ಬಳಲಿ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ವ್ಯಕ್ತಿತ್ವದ ವಿಕಸನಕ್ಕೆ ಇಂಧನ ಪೂರೈಸುವ ಶಕ್ತಿಯನ್ನು ಭಗವದ್ಗೀತೆ ಹೊಂದಿದೆ’ ಎಂದು ಸೋಂದಾ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ತಿಳಿಸಿದರು.

‘ನೈತಿಕ ಪುನರುತ್ಥಾನ ಹಾಗೂ ಸಾಮಾಜಿಕ ಸಾಮರಸ್ಯದ ಮೂಲಕ ವಿಭಿನ್ನ ಧರ್ಮಗಳ ಹಾದಿಯನ್ನು ಏಕೋಭಾವದಲ್ಲಿ ಕೊಂಡೊಯ್ಯುವ ಕೆಲಸವನ್ನು ಭಗವದ್ಗೀತೆ ಮಾಡಲಿದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ಸೇರಿದಂತೆ 25 ಸಾವಿರ ಜನ ಏಕಕಾಲದಲ್ಲಿ ಭಗವದ್ಗೀತೆಯ 11ನೇ ಅಧ್ಯಾಯದ ಪಠಣ ಮಾಡಿದರು.

ಶಾಲಾ ಹಂತದಿಂದ ಭಗವದ್ಗೀತೆ ಬೋಧನೆಗೆ ಪ್ರಯತ್ನ; ಎಚ್‌ಡಿಕೆ

‘ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದ ಹಂತದವರೆಗೂ ಪಠ್ಯದಲ್ಲಿ ಭಗವದ್ಗೀತೆ ಕಲಿಸುವಂತಾಗಬೇಕು. ಇದಕ್ಕಾಗಿ ಕೇಂದ್ರದ ಮಟ್ಟದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಮನವಿಗೆ ಉತ್ತರಿಸಿದ ಅವರು, ‘ಭಗವದ್ಗೀತೆಯಲ್ಲಿನ ಶ್ರೀಕೃಷ್ಣನ ಸಂದೇಶಗಳನ್ನು ಚಿಕ್ಕ ವಯಸ್ಸಿನಲ್ಲೇ ಮಕ್ಕಳು ಅರಿತರೆ ಹಿಂಸೆ, ದ್ವೇಷ ಮುಕ್ತ ಸಮಾಜ ಕಟ್ಟಲು ಸಾಧ್ಯ. ಈಶ್ವರಪ್ಪನವರ ಈ ಬೇಡಿಕೆ ಈಡೇರಿಸುವ ಜವಾಬ್ದಾರಿ ನಮ್ಮದು (ಕೇಂದ್ರ ಸರ್ಕಾರ)’ ಎಂದು ಹೇಳಿದರು.




ಮಹಿಳೆಯರು ಭಗವದ್ಗೀತೆಯ 11ನೇ ಅಧ್ಯಾಯದ ಸಾಮೂಹಿಕ ಪಠಣ ಮಾಡಿದರು

ವಿಜಯನಗರ ಜಿಲ್ಲೆಯ ಕೆರೆ: ಯುರೋಪ್‌ನಿಂದ ವಲಸೆ ಬಂದ ಬಾನಾಡಿಗಳು

ಚಿಂತ್ರಪಳ್ಳಿ ಕೆರೆಯಲ್ಲಿ ‘ರೋಸಿ ಸ್ಟಾರ್ಲಿಂಗ್’ ಕಲರವ

• ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ಪಟ್ಟಣದ ಹೊರವಲಯದಲ್ಲಿ ಇರುವ ಚಿಂತ್ರಪಳ್ಳಿ ಕೆರೆಯಲ್ಲಿ ‘ರೋಸಿ ಸ್ಟಾರ್ಲಿಂಗ್’ (ಗುಲಾಬಿ ಕಬ್ಬಕ್ಕಿ) ಪಕ್ಷಿಗಳ ಕಲರವ ಮನೆಮಾಡಿದೆ. ನೋಡುಗರನ್ನು ಮುದಗೊಳಿಸುತ್ತಿವೆ.



ರೋಸಿ ಸ್ಟಾರ್ಲಿಂಗ್

ತಾಲ್ಲೂಕು ಕೇಂದ್ರದಿಂದ 15 ಕಿ.ಮೀ ದೂರದಲ್ಲಿರುವ ಹೆಸರಾಂತ ಅಂಕಸಮುದ್ರ ಪಕ್ಷಿಧಾಮದ ಹತ್ತಿರದಲ್ಲಿ, 275 ಎಕರೆ ವಿಸ್ತೀರ್ಣದ ಚಿಂತ್ರಪಳ್ಳಿ ಕೆರೆಗೆ ಸಾವಿರಾರು ಪಕ್ಷಿಗಳು ವಲಸೆ ಬಂದಿವೆ.

ಹರಪನಹಳ್ಳಿಯ ಪಾಳೇಗಾರನಾಗಿದ್ದ ಸೋಮಶೇಖರ ನಾಯಕ ಈ ಕೆರೆ ನಿರ್ಮಿಸಿದ್ದನೆಂದು ಇತಿಹಾಸ ಹೇಳುತ್ತದೆ. ಇಲ್ಲಿಗೆ ಆಹಾರ ಅರಸಿ ದೇಶ, ವಿದೇಶಗಳ ಹಕ್ಕಿಗಳು ವಲಸೆ ಬರುತ್ತಿವೆ. ಈ ವರ್ಷ ಮುಖ್ಯವಾಗಿ ಯುರೋಪ್‌ನಿಂದ ರೋಸಿ ಸ್ಟಾರ್ಲಿಂಗ್ ಪಕ್ಷಿಗಳು ಬಂದಿವೆ.

ಕೆರೆ ದಡದ ಗಿಡಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪಕ್ಷಿಗಳು ಕುಳಿತಾಗ ಮಲ್ಲಿಗೆ ಮೊಗ್ಗಿನ ಮಾಲೆಯಂತೆ ಭಾಸವಾಗುತ್ತದೆ. ಅವು ಪುರ್ರನೆ ಹಾರಿದಾಗ ಬಾನಿಗೆ ಬಲೆ ಬೀಸಿದಂತೆ ದೃಶ್ಯಕಾವ್ಯ ಮೂಡುತ್ತದೆ.

> ಚಿಂತ್ರಪಳ್ಳಿ ಕೆರೆಗೆ ವಿದೇಶಿ ಹಕ್ಕಿಗಳು ಬರುತ್ತಿರುವ ಕಾರಣ ಕೆರೆ ಸಂರಕ್ಷಣೆಯ ಜತೆಗೆ ಬೇಟೆಗಾರರಿಂದ ಹಕ್ಕಿಗಳನ್ನು ರಕ್ಷಿಸುವ ಕೆಲಸವೂ ಅಗತ್ಯವಾಗಿ ಆಗಬೇಕು
> **ಟಿ.ಕೊಟ್ರೇಶ್,** ಪಕ್ಷಿಪ್ರೇಮಿ, ಚಿಂತ್ರಪಳ್ಳಿ



ಚಿಂತ್ರಪಳ್ಳಿ ಕೆರೆಯ ಬಳಿ ರೋಸಿ ಸ್ಟಾರ್ಲಿಂಗ್ ಕಲರವ– ಪ್ರಜಾವಾಣಿ ಚಿತ್ರ

ಪಕ್ಷಿಧಾಮದ ಜತೆಗೆ ತುಂಗಭದ್ರಾ ಜಲಾಶಯದ ಹಿನ್ನೀರು ಪ್ರದೇಶ, ತಾಲ್ಲೂಕಿನ ಮಾಲವಿ ಜಲಾಶಯ, ತಿಗಳನ ಕೆರೆ, ಭೀಮನಕೆರೆ, ಓಬಳಾಪುರ ಕೆರೆಗಳಲ್ಲೂ ಕೆಲ ಅಪರೂಪದ ಬಾನಾಡಿಗಳು ವಾಸ್ತವ್ಯ ಹೂಡುತ್ತಿವೆ. ಹೀಗಾಗಿ ಹಗರಿಬೊಮ್ಮಮಹಳ್ಳಿ ತಾಲ್ಲೂಕು ವಿಶಾಲ ಪಕ್ಷಿಧಾಮದಂತೆಯೇ ಭಾಸವಾಗುತ್ತಿದೆ.

‘ಅಂಕಸಮುದ್ರ ಪಕ್ಷಿಧಾಮದ ಜತೆಗೆ ಇತರ ಕೆರೆಗಳತ್ತಲೂ ಹಕ್ಕಿಗಳು ವಲಸೆ ಬರುತ್ತಿರುವುದು ಉತ್ತಮ ಬೆಳವಣಿಗೆ. ಪರಿಸರ ಶುದ್ಧವಾಗಿದ್ದಷ್ಟೂ ಪಕ್ಷಿಗಳ ವಲಸೆ, ವಾಸ ನಿಶ್ಚಿತ’ ಎನ್ನುತ್ತಾರೆ ಬಾಂಬೆ ನ್ಯಾಚುರಲ್‌ಹಿಸ್ಟರಿ ಸೊಸೈಟಿ (ಬಿಎನ್‌ಎಚ್‌ಎಸ್) ಸಂಶೋಧಕ ಎಚ್.ರಮೇಶ್.

ಆಂಗಿಕದಿಂದಲೇ ನಗಿಸಬಲ್ಲ ಚತುರ

ನುಡಿ ನಮನ

• ಕೆ.ವಿ.ನಾಗರಾಜಮೂರ್ತಿ

ಅಶ್ಲೀಲ ಮಾತುಗಳನ್ನು ಆಡದೆ, ತಮ್ಮ ಆಂಗಿಕ ಅಭಿನಯದಿಂದ ನೋಡುಗರನ್ನು ನಗಿಸುವ ಸಾಮರ್ಥ್ಯ ಹೊಂದಿದ್ದ ಕೆಲವೇ ಹಾಸ್ಯ ನಟರಲ್ಲಿ ಉಮೇಶ್ ಒಬ್ಬರು. ಈ ಹೊತ್ತಿನಲ್ಲಿ ಅಂತಹ ಹಾಸ್ಯ ಕಲಾವಿದರನ್ನು ಕಾಣುವುದು ಸಾಧ್ಯವೇ ಇಲ್ಲ ಎಂಬಂತಹ ಸ್ಥಿತಿ ಇದೆ. ತಮ್ಮ ಅಭಿನಯ, ವಿಶಿಷ್ಟ ಮಾತುಗಾರಿಕೆ, ಆಂಗಿಕದಿಂದಲೇ ನೋಡುಗರ ಸೆಳೆಯುತ್ತಿದ್ದರು.

ಹೊಸ ತಲೆಮಾರಿನವರಿಗೆ ಅವರೊಬ್ಬ ಹಾಸ್ಯನಟ ಎಂದಷ್ಟೇ ಕಾಣುತ್ತದೆ. ಆದರೆ ಅವರೊಬ್ಬ ಅದ್ಭುತ ಸೃಜನಶೀಲ ನಟರಾಗಿದ್ದರು. ‘ಮಕ್ಕಳ ರಾಜ್ಯ’ ಸಿನಿಮಾದಲ್ಲಿ ಬಾಲನಟರಾಗಿ ಅವರು ತಮ್ಮ ಅಭಿಯನಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದಿದ್ದರು. ನವರಸಗಳನ್ನೂ ಬಹಳ ಅಚ್ಚುಕಟ್ಟಾಗಿ ನಟನೆಯಲ್ಲಿ ತರಬಲ್ಲವರಾಗಿದ್ದರು. ತಮಗೆ ವಹಿಸಿದ ಪಾತ್ರಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಅಭಿನಯಿಸುವುದರ ಜತೆಗೆ, ಆ ಪಾತ್ರಕ್ಕೆ ಒಂದು ಛಾಪು ಮೂಡಿಸುವಂತೆ ಅವುಗಳಿಗೆ ಜೀವ ತುಂಬುತ್ತಿದ್ದರು.

ಬಾಲನಟನಾಗಿ ಅವರು ರಂಗಭೂಮಿ ಮತ್ತು ಸಿನಿಮಾರಂಗ ಎರಡನ್ನೂ ಪ್ರವೇಶಿಸಿದ್ದರು ಎಂಬುದು ಬಹಳ ಮಂದಿಗೆ ತಿಳಿದಿರಲಾರದು. ಮಾಸ್ಟರ್ ಹಿರಣ್ಣಯ್ಯ ಅವರ ನಾಟಕ ಕಂಪನಿಯಿಂದ ರಂಗಪಯಣ ಆರಂಭಿಸಿದರೂ ಅವರು ಹೆಚ್ಚು ಕೆಲಸ ಮಾಡಿದ್ದು ಗುಬ್ಬಿ ವೀರಣ್ಣ ನಾಟಕ ಕಂಪನಿಯಲ್ಲಿ.

ಗುಬ್ಬಿ ವೀರಣ್ಣ ಅವರ ಕಂಪನಿಯಲ್ಲಿ ರಾಜ್ ಕುಮಾರ್, ಬಾಲಕೃಷ್ಣ ಅವರಂತಹ ನಟರ ಜತೆಗೆ ಪಳಗಿದ ಅನುಭವ ಅವರಿಗಿತ್ತು. ಅವರ ರಂಗಜೀವನದಲ್ಲಿ 20ಕ್ಕೂ ಹೆಚ್ಚು ನಾಟಕ ಕಂಪನಿಗಳಲ್ಲಿ ಅವರು ನಟಿಸಿದ್ದರು. ಅವರ ಧ್ವನಿ ಅದ್ಭುತವಾಗಿತ್ತು, ಅವರು ಉತ್ತಮ ಹಾಡುಗಾರರೂ ಆಗಿದ್ದರು. ಇವೆಲ್ಲವೂ ಅವರನ್ನು ವೃತ್ತಿರಂಗಭೂಮಿಗೆ ಹೇಳಿ ಮಾಡಿಸಿದ ನಟನನ್ನಾಗಿಸಿತ್ತು. 35ಕ್ಕೂ ಹೆಚ್ಚು ನಾಟಕ ಕಂಪನಿಗಳಲ್ಲಿ ಅತಿಥಿ ನಟರಾಗಿಯೂ ಅಭಿನಯಿಸಿದ್ದರು.

ಉಮೇಶ್ ಅವರು ಈವರೆಗೆ 800ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದರು ಎಂಬುದೇ ಅವರು ಎಂತಹ ಕಲಾವಿದ ಎಂಬುದನ್ನು ತೋರಿಸುತ್ತದೆ. ಅಂತಹ ಕಲಾವಿದರೂ ತಮ್ಮ ಬದುಕಿನ ಕೊನೆಗಾಲದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರು ಎಂಬುದು ಬಹಳ ಬೇಸರದ ಸಂಗತಿ. ಆದರೆ ಹಲವು ಕಲಾವಿದರ ಮನವಿಯ ನಂತರ ರಾಜ್ಯ ಸರ್ಕಾರವು ಉಮೇಶ್ ಅವರ ಚಿಕಿತ್ಸೆಯ ವೆಚ್ಚ ಭರಿಸಿತು. ಉಮೇಶ್ ಅವರ ಅಗಲಿಕೆ ಕನ್ನಡ ರಂಗಭೂಮಿಗೆ, ಚಿತ್ರರಂಗಕ್ಕೆ ದೊಡ್ಡ ನಷ್ಟ.

ಲೇಖಕ: ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇಡಲಾಗಿದ್ದ ಎಂ.ಎಸ್. ಉಮೇಶ್ ಅವರ ಪಾರ್ಥಿವ ಶರೀರಕ್ಕೆ ಮಗಳು ಜಯಲಕ್ಷ್ಮಿ, ಕಲಾವಿದರಾದ ಗಿರಿಜಾ ಲೋಕೇಶ್, ಡಿಂಗ್ರಿ ನಾಗರಾಜ್, ಕೆ.ವಿ.ನಾಗರಾಜಮೂರ್ತಿ ಅಂತಿಮ ನಮನ ಸಲ್ಲಿಸಿದರು

‘ಬರಹಕ್ಕೂ ಹಚ್ಚಿದ್ದೆ...’

ಉಮೇಶ್ ಅವರು ಒಳ್ಳೆಯ ಬರಹಗಾರರೂ ಆಗಿದ್ದರು. ಅವರನ್ನು ಬರಹಕ್ಕೆ ಹಚ್ಚುವ ಅವಕಾಶ ನನಗೆ ಒದಗಿತ್ತು. ಅವರೊಂದಿಗೆ ಕೂತು ಚರ್ಚಿಸಿ, ಒತ್ತಡ ಹೇರಿ ಬರೆಸುತ್ತಿದ್ದೆ. ‘ಮಲ್ಲಿಗೆ’, ‘ತುಷಾರ’ ನಿಯತಕಾಲಿಕಗಳಲ್ಲಿ ಅವರಿಂದ ಬಹಳ ಲೇಖನಗಳನ್ನು ಬರೆಸಿದೆ. ಅವರಿಂದ ಬಹಳಷ್ಟು ಸಂದರ್ಶನಗಳನ್ನು ಮಾಡಿಸಿದ್ದೆ. ನಿಧಾನವಾಗಿ ಅವರೊಳಗಿನ ಬರಹಗಾರ ಹೊರಬಂದ. ಬರವಣಿಗೆಯಲ್ಲಿನ ಜೀವಂತಿಕೆ ಅವರ ಆತ್ಮಕತೆ ‘ಗಂಟೆ’ಯಲ್ಲಿ ಓದುಗರ ಅನುಭವಕ್ಕೆ ಬರುತ್ತದೆ.

ವಿಜಯಾ, ಲೇಖಕಿ

ನಟ ಎಂ.ಎಸ್. ಉಮೇಶ್ ಇನ್ನಿಲ್ಲ

ಒಂದನೇ ಪುಟದಿಂದ...

ಅವರಿಗೆ ಪತ್ನಿ, ಮಗಳು ಇದ್ದಾರೆ. ಉಮೇಶ್ ಅವರ ಪುತ್ರ ಕೆಲ ವರ್ಷಗಳ ಹಿಂದೆ ಅಪಘಾತದಲ್ಲಿ ತೀರಿಕೊಂಡಿದ್ದಾರೆ.

ಕೆ.ಹಿರಣ್ಣಯ್ಯ ಮಿತ್ರ ಮಂಡಲಿ ಹಾಗೂ ಗುಬ್ಬಿ ಕಂಪನಿಯಲ್ಲಿ ರಂಗಭೂಮಿ ಕಲಾವಿದರಾಗಿದ್ದ ಉಮೇಶ್, ಪುಟ್ಟಣ್ಣ ಕಣಗಾಲ್ ಅವರ ಮೂಲಕ 1960–61ರಲ್ಲಿ ‘ಮಕ್ಕಳ ರಾಜ್ಯ’ ಸಿನಿಮಾದ ಬಾಲನಟನಾಗಿ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು.

ಈ ಸಿನಿಮಾ ಕನ್ನಡ, ತಮಿಳು ಭಾಷೆಯಲ್ಲಿ ತೆರೆಕಂಡಿತ್ತು. 1976ರಲ್ಲಿ ತೆರೆಕಂಡ ಮೂರು ಕಥೆಗಳನ್ನೊಳಗೊಂಡ ‘ಕಥಾಸಂಗಮ’ ಸಿನಿಮಾದಲ್ಲಿ ‘ಮುನಿತಾಯಿ’ ಎನ್ನುವ ಕಥೆಯ ಪಾತ್ರವೊಂದರಲ್ಲಿ ಉಮೇಶ್ ಕಾಣಿಸಿಕೊಂಡಿದ್ದರು.

ಅನುಪಮಾ, ಭಾಗ್ಯವಂತರು, ಕಿಲಾಡಿ ಜೋಡಿ, ಗುರು ಶಿಷ್ಯರು, ಭೂಮಿಗೆ ಬಂದ ಭಗವಂತ, ಹಾಲುಜೇನು, ಕಾಮನಬಿಲ್ಲು, ಅಪೂರ್ವ ಸಂಗಮ, ಶೃತಿ ಸೇರಿದಾಗ, ಮೇಘ ಮಂದಾರ, ಆಕಸ್ಮಿಕ, ಸರ್ವರ್ ಸೋಮಣ್ಣ, ಮೇಘಮಾಲೆ, ನನ್ನಾಸೆಯ ಹೂವೆ, ಜಾಕಿ, ರ್‍ಯಾಂಬೊ, ಮುಸ್ಸಂಜೆ ಮಾತು, ಗೋಲ್‌ಮಾಲ್ ರಾಧಾಕೃಷ್ಣ, ಡೇರ್ ಡೆವಿಲ್ ಮುಸ್ತಫಾ, ಹಗಲುವೇಷ ಸೇರಿ 350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದು, ಉಮೇಶ್ ಕನ್ನಡಿಗರ ಮೆಚ್ಚುಗೆ ಗಳಿಸಿದ್ದರು.

ರಮೇಶ್ ಅರವಿಂದ ನಟನೆಯ ‘ವೆಂಕಟ ಇನ್ ಸಂಕಟ’ ಸಿನಿಮಾದಲ್ಲಿ ಹಳೆಯ ಕಾಲದ ಸಂಪ್ರದಾಯಬದ್ಧ ಅಜ್ಜಿಯ ಪಾತ್ರದಲ್ಲಿ ಉಮೇಶ್ ಚಿತ್ರಪ್ರೇಕ್ಷಕರನ್ನು ರಂಜಿಸಿದ್ದರು.

2025ರ ಜೂನ್‌ನಲ್ಲಿ ‘ಪ್ರಜಾವಾಣಿ’ ಸಿನಿ ಸಮ್ಮಾನ ಕಾರ್ಯಕ್ರಮದಲ್ಲೂ ಭಾಗಿಯಾಗಿದ್ದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಮೇಶ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

‘ಒಬ್ಬ ವ್ಯಕ್ತಿಯ ಪ್ರತಿಷ್ಠೆಗೆ ಸುರಂಗ ರಸ್ತೆ’

ಈ ಯೋಜನೆ ಕೈಬಿಡಿ, ಸಾರ್ವಜನಿಕ ಸಾರಿಗೆ ಬಲಗೊಳಿಸಿ: ಜನ ಸಮಾವೇಶದಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಬ್ಬ ವ್ಯಕ್ತಿಯ ಪ್ರತಿಷ್ಠೆಗಾಗಿ ಸುರಂಗ ರಸ್ತೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಲವೇ ಕೆಲವರಿಗೆ ಉಪಯೋಗವಾಗುವ ಈ ಯೋಜನೆಯಿಂದ ನಗರದ ವಾಹನ ದಟ್ಟಣೆ ಕಡಿಮೆಯಾಗದು. ಈ ಯೋಜನೆ ಕೈಬಿಡಬೇಕು. ಸಾರ್ವಜನಿಕ ಸಾರಿಗೆಯನ್ನು ಬಲಪಡಿಸಬೇಕು..’

ಬೆಂಗಳೂರು ಉಳಿಸಿ ಸಮಿತಿಯು ಸುರಂಗ ರಸ್ತೆಯನ್ನು ವಿರೋಧಿಸಿ ಭಾನುವಾರ ಹಮ್ಮಿಕೊಂಡಿದ್ದ ಜನ ಸಮಾವೇಶದಲ್ಲಿ ವ್ಯಕ್ತವಾದ ಅಭಿಪ್ರಾಯವಿದು.

‘ಕೇಂದ್ರ ರೇಷ್ಮೆ ಮಂಡಳಿಯಿಂದ ಹೆಬ್ಬಾಳವರೆಗೆ ಸುರಂಗ ರಸ್ತೆ ನಿರ್ಮಿಸಿದರೆ ಕಾರು ಮಾಲೀಕರಿಗಷ್ಟೇ ಉಪಯೋಗವಾಗಲಿದೆ. 2030ರ ಹೊತ್ತಿಗೆ ನಗರದ ಶೇ 70ರಷ್ಟು ಜನರು ಸಾರ್ವಜನಿಕ ಸಾರಿಗೆಯನ್ನು ಬಳಸಬೇಕು ಎಂಬ ಉದ್ದೇಶಕ್ಕೆ ಸುರಂಗ ರಸ್ತೆ ಯೋಜನೆ ಅಡ್ಡಿಯಾಗಲಿದೆ. ಲಾಲ್‌ಬಾಗ್, ಹೆಬ್ಬಾಳ ಕೆರೆ, ಸ್ಯಾಂಕಿ ಕೆರೆಗಳಿಗೆ ಹಾನಿಯಾಗಲಿದೆ. ನಗರದ ಅಂತರ್ಜಲ ಕುಸಿಯಲಿದೆ’ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದರು.

‘ಸುರಂಗ ರಸ್ತೆಯ ಯೋಜನೆ ಪೂರ್ಣಗೊಳ್ಳುವ ಹೊತ್ತಿಗೆ ವೆಚ್ಚವು ₹70 ಸಾವಿರ ಕೋಟಿಗೆ ತಲುಪಲಿದೆ. ಜನರು 40 ವರ್ಷ ಟೋಲ್ ಹೊರೆ ಹೊರಬೇಕಾಗುತ್ತದೆ. ಇಲ್ಲಿ ಗಂಟೆಗೆ 1,800 ಕಾರು ಪ್ರಯಾಣಿಕರು ಸಂಚರಿಸಬಹುದು. ಅದೇ ಸಮಯದಲ್ಲಿ ಮೆಟ್ರೊದಲ್ಲಿ 69,000, ಬಿಎಂಟಿಸಿ ಬಸ್‌ಗಳಲ್ಲಿ 1.75 ಲಕ್ಷ ಪ್ರಯಾಣಿಕರು ಸಂಚರಿಸಬಹುದು’ ಎಂದು ಬೆಂಗಳೂರು ಉಳಿಸಿ ಸಮಿತಿ ಸಂಚಾಲಕ ಜಿ. ಶಶಿಕುಮಾರ್ ಮಾಹಿತಿ ನೀಡಿದರು.



ಸುರಂಗ ರಸ್ತೆ ಯೋಜನೆ ವಿರೋಧಿಸಿ ಹಮ್ಮಿಕೊಂಡಿದ್ದ ಜನ ಸಮಾವೇಶದಲ್ಲಿ ಟಿ.ವಿ. ರಾಮಚಂದ್ರ, ಸಿ.ಪಿ. ರಾಜೇಂದ್ರನ್, ಎಂ.ಎನ್. ಶ್ರೀಹರಿ, ಜಿ. ಶಶಿಕುಮಾರ್, ಸುಧಾ ಕಾಮತ್, ಕಾತ್ಯಾಯಿನಿ ಚಾಮರಾಜ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದ ನಿಕಟಪೂರ್ವ ಮುಖ್ಯಸ್ಥ ರೇಣುಕಾ ಪ್ರಸಾದ್, ವಕೀಲ ರವಿವರ್ಮ ಕುಮಾರ್, ಸಂಧಿವಾತ ತಜ್ಞ ಧರ್ಮಾನಂದ್, ಭೂವಿಜ್ಞಾನ ಪ್ರಾಧ್ಯಾಪಕ ಶ್ರೀನಿವಾಸ್, ವೈದ್ಯೆ ಸುಧಾ ಕಾಮತ್, ಬೆಂಗಳೂರು ಉಳಿಸಿ ಸಮಿತಿ ಸದಸ್ಯ ರಾಜೇಶ್ ಭಟ್ ಮಾತನಾಡಿದರು.

ಯಾರು ಏನಂದರು?

ಸುರಂಗ ರಸ್ತೆ ಯೋಜನೆಯು ಪ್ರತಿ ಟ್ರಿಪ್‌ಗೆ ₹300ರವರೆಗೆ ಸುಂಕವನ್ನು ವಿಧಿಸುತ್ತದೆ. ಅಂದರೆ ಶ್ರೀಮಂತರು ಮಾತ್ರ ಉಪಯೋಗಿಸಬಲ್ಲ ಯೋಜನೆಯಾಗಲಿದೆ. ಪ್ರವಾಹ ಉಂಟಾಗಲೂ ಕಾರಣವಾಗಲಿದೆ. ಪರಿಸರಕ್ಕೆ ತೀವ್ರ ಹಾನಿ ಉಂಟುಮಾಡಲಿದೆ.
ಆಶೀಶ್ ವರ್ಮಾ, ಭಾರತೀಯ ವಿಜ್ಞಾನ ಸಂಸ್ಥೆಯ ಐಎಸ್‌ಟಿ ಲ್ಯಾಬ್ ಸಂಚಾಲಕ

ಬೆಂಗಳೂರು ಈಗಾಗಲೇ ಶೇ 87ರಷ್ಟು ಕಾಂಕ್ರೀಟ್ ನಗರವಾಗಿದೆ. ಶೇ 79ರಷ್ಟು ಕೆರೆಗಳು ಇಲ್ಲವಾಗಿವೆ. ಅಷ್ಟೇ ಪ್ರಮಾಣದಲ್ಲಿ ಮರಗಳು ನಾಶವಾಗಿವೆ. ಸುರಂಗ ಕೊರೆಯುವ ಮೂಲಕ ಅಂತರ್ಜಲಕ್ಕೂ ಕೊಡಲಿಪೆಟ್ಟು ಬೀಳಲಿದೆ. ಮುಂದಿನ ಪೀಳಿಗೆ ಬೆಂಗಳೂರಿನಲ್ಲಿ ಬದುಕುವುದೇ ದುಸ್ತರವಾಗಲಿದೆ.
ಟಿ.ವಿ. ರಾಮಚಂದ್ರ, ಪರಿಸರ ವಿಜ್ಞಾನಿ, ಐಐಎಸ್‌ಸಿ

ದೇಶ, ರಾಜ್ಯವನ್ನು ಪರೋಕ್ಷವಾಗಿ ಗುತ್ತಿಗೆದಾರರೇ ಆಳುತ್ತಿದ್ದಾರೆ. ಅವರಿಗೆ ಬೇಕಾದ ಹಾಗೆ ಯೋಜನೆ ಹಮ್ಮಿಕೊಳ್ಳಲಾಗುತ್ತದೆ. ಬೆಂಗಳೂರಿಗೆ ಏನು ಬೇಕು ಎಂದು ಜನರ ಬದಲು ಗುತ್ತಿಗೆದಾರರು ನಿರ್ಧರಿಸುತ್ತಾರೆ. ಜನಪ್ರತಿನಿಧಿಗಳು ಅದಕ್ಕೆ ಪೂರಕವಾಗಿದ್ದಾರೆ.
ಸಿ.ಪಿ. ರಾಜೇಂದ್ರನ್, ಪ್ರಾಧ್ಯಾಪಕ, ಎನ್‌ಐಎಎಸ್

ಸಮುದ್ರ ತೀರಗಳನ್ನು ಹೊಂದಿರುವಂತಹ ಚೆನ್ನೈ, ಮುಂಬೈ ಹಾಗೂ ಕೋಲ್ಕತ್ತದಂಥ ನಗರಗಳಲ್ಲಿ ಸುರಂಗ ರಸ್ತೆ ನಿರ್ಮಿಸಬಹುದೇ ಹೊರತು ಬೆಂಗಳೂರಿಗೆ ಅದು ಸೂಕ್ತವಲ್ಲ. ದುಡ್ಡು ಹೂಡುವ ಮತ್ತು ದುಡ್ಡು ಮಾಡುವ ಈ ಯೋಜನೆಯನ್ನು ಕೂಡಲೇ ಕೈಬಿಡಬೇಕು.
ಎಂ.ಎನ್. ಶ್ರೀಹರಿ, ಸ್ವತಂತ್ರ ನಗರ ಸಾರಿಗೆ ಯೋಜನಾ ತಜ್ಞ

ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯನ್ನು ದೇವರೇ ಬಂದರೂ ಸರಿಮಾಡಲು ಸಾಧ್ಯವಿಲ್ಲ ಎಂದು ಡಿ.ಕೆ. ಶಿವಕುಮಾರ್ ಎರಡೂವರೆ ವರ್ಷಗಳ ಹಿಂದೆ ಹೇಳಿದ್ದರು. ಈಗ ದೇವರೇ ಬಂದು ಹೇಳುವವರೆಗೆ ಯೋಜನೆ ನಿಲ್ಲಲ್ಲ ಎನ್ನುತ್ತಿದ್ದಾರೆ. ದೇವರಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳು ಹೇಳುತ್ತಿದ್ದಾರೆ, ಈ ಯೋಜನೆ ನಿಲ್ಲಿಸಿ.
ಕಾತ್ಯಾಯಿನಿ ಚಾಮರಾಜ್, ಸಿವಿಕ್ ಸಂಸ್ಥಾಪಕಿ

ಜನಮನ ಸೆಳೆದ ಪುಷ್ಪಲೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ನಡೆಯುತ್ತಿರುವ ಹೂವುಗಳ ಹಬ್ಬಕ್ಕೆ ಗುರುವಾರದಿಂದ ಭಾನುವಾರದವರೆಗೆ ಎರಡು ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ.

ಉದ್ಘಾಟನೆಯ ದಿನವಾದ ಗುರುವಾರ 33,500 ಮಂದಿ ಭೇಟಿ ನೀಡಿದ್ದರೆ, ಶುಕ್ರವಾರ 43,500 ಜನರು ಪುಷ್ಪಲೋಕ ವೀಕ್ಷಿಸಿದ್ದರು. ಶನಿವಾರ 75,084 ಆಸಕ್ತರು ಹೂವುಗಳಲ್ಲಿ ಅರಳಿದ ಕಲೆಗಳನ್ನು ಕಣ್ತುಂಬಿಕೊಂಡರು. ಭಾನುವಾರ ಬೆಳಿಗ್ಗೆಯಿಂದಲೇ ತಣ್ಣಗೆ ಮಳೆ ಬಂದಿದ್ದರಿಂದ ವೀಕ್ಷಕರ ಸಂಖ್ಯೆ ಸ್ವಲ್ಪ ಕಡಿಮೆಯಾಗಿತ್ತು. 64,410 ಜನರು ಭೇಟಿ ನೀಡಿದರು.

ಹೂವುಗಳಲ್ಲಿ ಅರಳಿದ ಹಂಪಿಯ ಕಲ್ಲಿನ ರಥ, ಹಾಗಲಕಾಯಿ ಹಾಗೂ ಕ್ಯಾಪ್ಸಿಕಮ್‌ನಲ್ಲಿ ರಚಿಸಿದ ಆನೆಯ ಕಲಾಕೃತಿಗಳು, ಹಳದಿ ಮತ್ತು ಕೆಂಪು ಬಣ್ಣದ ಹೂವುಗಳಲ್ಲಿ ಮೂಡಿಬಂದಿರುವ ಕರ್ನಾಟಕದ ನಕ್ಷೆಯ ಮಾದರಿ, ಅಲ್ಲಲ್ಲಿ ಜೋಡಿಸಿ ಇಟ್ಟಿರುವ ಹೂವಿನ ಕುಂಡಗಳನ್ನು ನೋಡಿ ಮಕ್ಕಳು, ಹಿರಿಯರು ಸಂಭ್ರಮಿಸಿದರು.

ಹೂವುಗಳಲ್ಲೇ ಮೂಡಿದ ಜಿಂಕೆ, ಅನಾನಸು, ಸೇಬು ಹಣ್ಣು, ಸೂರ್ಯಕಾಂತಿ ಹೂವಿನ ದೊಡ್ಡ ಮಾದರಿಗಳ ಮುಂದೆ ನಿಂತು ಫೋಟೊ ತೆಗೆಸಿಕೊಂಡು, ಸೆಲ್ಫಿ ತೆಗೆದುಕೊಂಡು ಖುಷಿಪಟ್ಟರು. ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿರುವ ಕಾರಂಜಿಯಲ್ಲಿ ಹೂವಿನ ಡಾಲ್ಫಿನ್, ಟ್ರ್ಯಾಕ್ಟರ್, ಕೋಳಿಗಳೂ ಗಮನಸೆಳೆದವು.


ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನದಲ್ಲಿ ‘ಹೂವುಗಳ ಹಬ್ಬ’ಕ್ಕೆ ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದರು ಚಿತ್ರಗಳು: ರಂಜು ಪಿ


ಹೂವಿನಲ್ಲಿ ಅರಳಿದ ಚಿಟ್ಟೆಯನ್ನು ಜನರು ಕುತೂಹಲದಿಂದ ವೀಕ್ಷಿಸಿದರು

ಇಲ್ಲಿವರೆಗೆ ಟಿಕೆಟ್‌ನಿಂದ ₹10,72,820 ಸಂಗ್ರಹವಾಗಿದೆ. ಡಿ.7ರವರೆಗೆ ಹೂವುಗಳ ಹಬ್ಬ ಇರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ದಂಡು ಪ್ರದೇಶ: ಕನ್ನಡ ಅಭಿಮಾನಕ್ಕೆ ಕೊರತೆಯಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ದಂಡು ಪ್ರದೇಶದಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆ ಇರಬಹುದು. ಕನ್ನಡ ಅಭಿಮಾನಕ್ಕೆ ಕೊರತೆಯಿಲ್ಲ ಎಂದು ರಾಜ್ಯಸಭೆ ಮಾಜಿ ಸದಸ್ಯ ಕೆ.ಸಿ. ರಾಮಮೂರ್ತಿ ಹೇಳಿದರು.

ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ, ಬೈರವೇಶ್ವರ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ಕನ್ನಡ ಸಾಂಸ್ಕೃತಿಕ ಜಾಗೃತಿ ಸಂಭ್ರಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.


ಹೆಣ್ಣೂರಿನಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಂಸ್ಕೃತಿಕ ಜಾಗೃತಿ ಸಂಭ್ರಮ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು

‘ಇಂದಿನ ಪೀಳಿಗೆಯು ಕನ್ನಡ ಮಾತನಾಡುವುದಕ್ಕಷ್ಟೇ ಸೀಮಿತವಾಗಬಾರದು. ಬರವಣಿಗೆ ಅಭ್ಯಾಸ ಮಾಡಬೇಕು. ಸಾಹಿತ್ಯ ಪರಿಚಯ ಮಾಡಿಕೊಳ್ಳಬೇಕು. ಆಗ ಕನ್ನಡದ ಬಗೆಗಿನ ಜ್ಞಾನ ಹೆಚ್ಚುತ್ತದೆ’ ಎಂದರು.

ಜನಪದ ಕಲಾತಂಡಗಳ ಜಾಗೃತಿ ಮೆರವಣಿಗೆಗೆ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ) ಅಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ಅವರು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು. ಸುಧಾ ಬರಗೂರು ಹಾಸ್ಯ ಭಾಷಣ ಮಾಡಿದರು.

ಶ್ರುತಿಕಾ ವುಮೆನ್ಸ್ ಆ್ಯಂಡ್ ಚಿಲ್ಡ್ರನ್ಸ್ ವೆಲ್ಫೇರ್ ಟ್ರಸ್ಟ್‌ಗೆ 75 ಕೆ.ಜಿ. ಅಕ್ಕಿ, 15 ಕೆ.ಜಿ. ಗೋಧಿ ಹಿಟ್ಟು, 5 ಕೆ.ಜಿ. ಅಡುಗೆ ಎಣ್ಣೆ ಹಸ್ತಾಂತರಿಸಲಾಯಿತು. ಲಯನ್ಸ್ ಕ್ಲಬ್ ವತಿಯಿಂದ ಕೇರ್ ಶೆಲ್ಟರ್ ಪಬ್ಲಿಕ್ ಚಾರಿಟಬಲ್ ಟ್ರಸ್ಟ್‌ಗೆ ಆರ್ಥಿಕ ಸಹಾಯ ನೀಡಲಾಯಿತು.

ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕ ಮತ್ತು ಕಲಾವಿದೆ ಬಿ.ಸರೋಜದೇವಿ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಸಾಧಕರನ್ನು ಗೌರವಿಸಲಾಯಿತು.

ಖೇಲೋ ಇಂಡಿಯಾ: ಬಿಸಿಯು ವಿದ್ಯಾರ್ಥಿನಿಗೆ 4 ಪದಕ

ಬೆಂಗಳೂರು: ರಾಜಸ್ಥಾನದಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ವ್ಯಾಪ್ತಿಯ ಸೇಂಟ್ ಜೋಸೆಫ್ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿನಿ ನೈಶಾ ಶೆಟ್ಟಿ ನಾಲ್ಕು ರಜತ ಪದಕ ಪಡೆದುಕೊಂಡಿದ್ದಾರೆ.

ಮಹಿಳೆಯರ 100 ಮೀಟರ್ ಬಟರ್ ಫ್ಲೈ, 50 ಮೀಟರ್ ಬಟರ್ ಫ್ಲೈ, 100 ಮೀಟರ್ ಫ್ರೀಸ್ಟೈಲ್ ಮತ್ತು 100 ಮೀಟರ್ ಬ್ಯಾಕ್ ಸ್ಟ್ರೋಕ್ ಈಜು ಸ್ಪರ್ಧೆಗಳಲ್ಲಿ ಈ ಸಾಧನೆ ಮಾಡಿದ್ದಾರೆ.

‘ಫೆನ್ಸಿಂಗ್ ಫಾಯಿಲ್ ಮಹಿಳಾ ತಂಡ ಕಂಚಿನ ಪದಕ ಗಳಿಸಿದೆ. ಉತ್ತಮ ಸಾಧನೆಯ ನಿರೀಕ್ಷೆಯಲ್ಲಿರುವ ಬಿಸಿಯು ಹಾಕಿ ತಂಡ ಸೆಮಿಫೈನಲ್ ಹಂತವನ್ನು ತಲುಪಿದೆ. ಬಿಸಿಯು ಕ್ರೀಡಾ ಸಮನ್ವಯಾಧಿಕಾರಿ ಮಹಮ್ಮದ್ ಸಿಬಗತ್ ಉಲ್ಲಾ ಅವರು 35 ಸದಸ್ಯರ ತಂಡವನ್ನು ಮುನ್ನಡೆಸುತ್ತಿದ್ದಾರೆ’ ಎಂದು ಬಿಸಿಯು ಪ್ರಭಾರ ಕ್ರೀಡಾ ನಿರ್ದೇಶಕ ಕೆ. ಶಿವಶಂಕರ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಿಶ್ವ ಏಡ್ಸ್ ದಿನ: ಉದ್ಘಾಟನೆ: ಜಗದೀಶ್ ಜಿ., ಅಧ್ಯಕ್ಷತೆ: ಡಾ.ಬಿ. ದಿನೇಶ್, ಅತಿಥಿಗಳು: ಯತೀಶ್ ಆರ್., ಜಿ. ಮೋಹನ್, ರವೀಂದ್ರನಾಥ ಎಂ. ಮೇಟಿ, ಡಾ.ಸುರೇಶ್, ಸರೋಜ, ಸರಸ್ವತಿ, ಆಯೋಜನೆ: ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಸ್ಥಳ: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಜಯನಗರ, ಬೆಳಿಗ್ಗೆ 11

ವಿಶ್ವ ಏಡ್ಸ್ ದಿನದ ಪ್ರಯುಕ್ತ ಜಾಗೃತಿ ಜಾಥಾ, ಬೀದಿ ನಾಟಕ: ಉದ್ಘಾಟನೆ: ಪ್ರೊ. ರಮೇಶ್ ಬಿ., ನವೀನ್ ಜೋಸೆಫ್, ರಮೇಶ್ ಬಿ. ಕುಡೇನಟ್ಟಿ, ಅಧ್ಯಕ್ಷತೆ: ರಿತಿಕಾ ಸಿನ್ಹಾ, ಆಯೋಜನೆ: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಜಾಥಾ ಸ್ಥಳ: ಸೆಂಟ್ರಲ್ ಕಾಲೇಜು ಮೆಟ್ರೊ ನಿಲ್ದಾಣದ ಗೇಟ್ ಎ ಇಂದ ಕ್ಲಾಕ್ ಟವರ್, ಮಧ್ಯಾಹ್ನ 12.45

ಹೂಗಳ ಹಬ್ಬ: ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಪುಷ್ಪ ಪ್ರದರ್ಶನ, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 6ರಿಂದ ಸಂಜೆ 7

ಗಾಂಧಿ ಗ್ರಾಮ ಪುರಸ್ಕಾರ ಮತ್ತು ಇ-ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ: ಸಿದ್ದರಾಮಯ್ಯ ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಅಧ್ಯಕ್ಷತೆ: ಪ್ರಿಯಾಂಕ್ ಖರ್ಗೆ, ಆಯೋಜನೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಮಾನವ ಹಕ್ಕುಗಳ ದಿನಾಚರಣೆ: ಉದ್ಘಾಟನೆ: ಅಶೋಕ್ ಹಿಂಚಿಗೇರಿ, ಅಧ್ಯಕ್ಷತೆ: ಸೆಲ್ವರಾಜ್ ಅರುಳನಾಥನ್, ಭಾಷಣ: ವಿ.ಎಸ್. ಎಲಿಜಬೆತ್, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್, ಮಧ್ಯಾಹ್ನ 3

ನೃತ್ಯಾರ್ಚನೆ ನೃತ್ಯ ಹಬ್ಬ: ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ಉಮೇಶ್ ಸಿ.ಎನ್., ಪದ್ಮಜಾ ಜಯರಾಂ, ಕಾಮಾಕ್ಷಿ, ಗೌರಿ ವಿಶ್ವನಾಥ, ಆಯೋಜನೆ: ನಾಟ್ಯ ಭೈರವಿ ಕಲಾ ಕುಟೀರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4

ಗೀತಾ ಜಯಂತ್ಯುತ್ಸವ ಆಚರಣೆ: ಉದ್ಘಾಟನೆ: ಭೀಮೇಶ್ವರ ಜೋಶಿ, ಪ್ರಸ್ತಾವನೆ: ಪಾವಗಡ ಪ್ರಕಾಶ್ ರಾವ್, ಅತಿಥಿಗಳು: ಕೆ.ವಿ. ನರಸಿಂಹನ್, ವೂಡೇ ಪಿ. ಕೃಷ್ಣ, ಭಗವದ್ಗೀತೆ ಬಗ್ಗೆ ವಿಶೇಷ ಉಪನ್ಯಾಸ: ಶ್ರೀಶಾನಂದ, ಅಧ್ಯಕ್ಷತೆ: ಬಿ.ಎಸ್. ದ್ವಾರಕನಾಥ್, ಆಯೋಜನೆ: ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ಕೃಷ್ಣ ಪ್ರವಚನ ಮಂದಿರ, ವೇಣುಗೋಪಾಲಸ್ವಾಮಿ ದೇವಸ್ಥಾನ, ಮಲ್ಲೇಶ್ವರ 11ನೇ ಅಡ್ಡರಸ್ತೆ, ಸಂಜೆ 5

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ರಹಮತ್ ತರೀಕೆರೆ, ಅಧ್ಯಕ್ಷತೆ: ಎಸ್.ವಿ. ಸುರೇಶ್, ಗಾಯನ: ಹರ್ಷ ಎಂ.ಆರ್., ಆಯೋಜನೆ: ಕೃಷಿ ವಿಶ್ವವಿದ್ಯಾಲಯ ಕನ್ನಡ ಸಂಘ, ಸ್ಥಳ: ಕುವೆಂಪು ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಳಿಗ್ಗೆ 10.30

‘ಶ್ರೀನಿವಾಸ ಕಲ್ಯಾಣ’ ಪ್ರವಚನ: ಚಂದ್ರಶೇಖರ ಆಚಾರ್ಯ,ಆಯೋಜನೆ: ಪ್ರವಚನ ಬಳಗ, ಸ್ಥಳ: ಭೀಮನಕಟ್ಟೆ ರಾಘವೇಂದ್ರ ಸ್ವಾಮಿಗಳ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

‘ಅಮೀರ್‌ಬಾಯಿ ಕರ್ನಾಟಕಿ’ ನಾಟಕ ಪ್ರದರ್ಶನ: ನಿರ್ದೇಶನ: ಬೇಲೂರು ರಘುನಂದನ್, ರಚನೆ: ರಹಮತ್ ತರೀಕೆರೆ, ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ರಂಗ ಬದುಕು ಟ್ರಸ್ಟ್, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

‘ಮಹಾಭಾರತ’ ಧಾರ್ಮಿಕ ಪ್ರವಚನ: ಜಗನ್ನಾಥಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in


ರೈಲ್ವೆಯ ನೌಕರರು ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳಾದ ಪ್ರಿಯಾ, ವನಜಾಕ್ಷಿ, ಜ್ಯೋತಿ ಲಖವನ್, ಹರ್ಷಿತಾ ಅವರನ್ನು ಸನ್ಮಾನಿಸಲಾಯಿತು

ರೈಲ್ವೆ ಮಹಿಳಾ ಸಾಧಕ ಕ್ರೀಡಾಪಟುಗಳಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡಾ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ನಾಲ್ವರು ರೈಲ್ವೆ ಮಹಿಳಾ ಕ್ರೀಡಾಪಟುಗಳನ್ನು ಅಖಿಲ ಭಾರತ ಹಿಂದುಳಿದ ವರ್ಗಗಳ ರೈಲ್ವೆ ನೌಕರರ ಸಂಘವು (ಎಐಒಬಿಸಿ) ನಗರದಲ್ಲಿ ಸನ್ಮಾನಿಸಿದೆ.

ಎಐಒಬಿಸಿ ನವೀಕರಿಸಲಾದ ಕಚೇರಿಯ ಉದ್ಘಾಟನೆ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ರಿಲೇ ಓಟಗಾರ್ತಿ ಪ್ರಿಯಾ, ಬಹುವಿಭಾಗದ ಆಟಗಾರ್ತಿ ವನಜಾಕ್ಷಿ, ಹೈಜಂಪ್ ಆಟಗಾರ್ತಿ ಜ್ಯೋತಿ ಲಖವನ್, ಓಟಗಾರ್ತಿ ಹರ್ಷಿತಾ ಅವರು ಸನ್ಮಾನ ಸ್ವೀಕರಿಸಿದರು.

ಬೆಂಗಳೂರು ವಿಭಾಗೀಯ ಹೆಚ್ಚುವರಿ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್‌ಪುರಿಯಾ ಮಾತನಾಡಿ, ‘ನೌಕರರ ಸಬಲೀಕರಣ, ಸಮುದಾಯದ ಪ್ರಗತಿಗಾಗಿ ಎಐಒಬಿಸಿ ಕೆಲಸ ಮಾಡುತ್ತಿರುವುದು ಉತ್ತಮ ಕಾರ್ಯ’ ಎಂದು ಶ್ಲಾಘಿಸಿದರು.

ಹಣಕಾಸು ಸಲಹೆಗಾರ್ತಿ ಮತ್ತು ಮುಖ್ಯ ಲೆಕ್ಕಪತ್ರ ಅಧಿಕಾರಿ ಕುಸುಮಾ ಹರಿಪ್ರಸಾದ್ ಮಾತನಾಡಿ, ‘ಕ್ರೀಡೆಯಲ್ಲಿ ಸಾಧನೆ ಮಾಡಿದ ನಮ್ಮ ನೌಕರರನ್ನು ಸನ್ಮಾನಿಸುವ ಮೂಲಕ ಅವರಿಗೆ ಬೆಂಬಲ ನೀಡಲಾಗಿದೆ. ಇದು ಎಲ್ಲ ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುವ ಕಾರ್ಯ’ ಎಂದು ಹೇಳಿದರು.

ಬೆಂಗಳೂರು ವಿಭಾಗೀಯ ಹೆಚ್ಚುವರಿ ರೈಲ್ವೆ ವ್ಯವಸ್ಥಾಪಕ ಪ್ರವೀಣ್ ಕಟರಕಿ, ಎಐಒಬಿಸಿ ಪೋಷಕ ನೆ.ಲ. ನರೇಂದ್ರ ಬಾಬು, ಎಐಒಬಿಸಿ ಪ್ರಧಾನ ಕಾರ್ಯದರ್ಶಿ ಗೋವರ್ಧನ್ ವೈ, ವಲಯ ಅಧ್ಯಕ್ಷ ಪೆಮ್ಮಡಿ ರಾಜೇಶ್, ವಿಭಾಗೀಯ ಅಧ್ಯಕ್ಷ ಶ್ರೀನಿವಾಸ್ ಕೆ.ಎಸ್., ಕಾರ್ಯದರ್ಶಿ ಉಮೇಶ್, ರೈಲ್ವೆ ಅಧಿಕಾರಿಗಳಾದ ಕೃಷ್ಣಚೈತನ್ಯ, ಉಮಾ ಶರ್ಮಾ, ಪ್ರಿಯಾ ಭಾಗವಹಿಸಿದ್ದರು.



ಆರು ವಲಯಗಳಲ್ಲಿ ಸ್ಪರ್ಧೆ

‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಷಿಪ್’ನಲ್ಲಿ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಯು ಮೊದಲ ಹಂತದಲ್ಲಿ ಆರು ವಲಯಗಳಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿ, ಬಾಗಲಕೋಟೆ, ಬೀದರ್, ದಾವಣಗೆರೆ ಮತ್ತು ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿದವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ. ನೋಂದಣಿ ಉಚಿತವಾಗಿದ್ದು, ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ‘ಪ್ರಜಾವಾಣಿ– ರಸಪ್ರಶ್ನೆ ಚಾಂಪಿಯನ್‌ಷಿಪ್’ಗೆ ನೋಂದಾಯಿಸಿಕೊಳ್ಳಬಹುದು.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಸೇಲ್ಸ್ ಆ್ಯಂಡ್ ಔಟ್‌ರೀಚ್ (ಎಸ್‌ಆ್ಯಂಡ್‌ಒ): ನಯೇಪಂಖ್ ಫೌಂಡೇಷನ್ ಮನೆಯಿಂದಲೇ ಕೆಲಸ ಮಾಡಬಲ್ಲ ಸೇಲ್ಸ್ ಆ್ಯಂಡ್ ಔಟ್‌ರೀಚ್ (ಎಸ್‌ಆ್ಯಂಡ್‌ಒ) ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಅಡ್ವಾನ್ಸ್ಡ್ ಎಕ್ಸೆಲ್, ಕಂಟೆಂಟ್ ಮಾರ್ಕೆಟಿಂಗ್, ಡಿಜಿಟಲ್ ಮಾರ್ಕೆಟಿಂಗ್, ಪರಿಣಾಮಕಾರಿ ಸಂವಹನ, ಇಂಗ್ಲಿಷ್‌ನಲ್ಲಿ ಬರವಣಿಗೆ ಸಾಮರ್ಥ್ಯ, ಮಾರ್ಕೆಟಿಂಗ್ ಕಾರ್ಯತಂತ್ರಗಳು, ಎಂಎಸ್ ಎಕ್ಸೆಲ್, ಎಂಎಸ್ ವರ್ಡ್, ಸೇಲ್ಸ್ ಮತ್ತು ಸಮಯ ನಿರ್ವಹಣೆಯ ಜ್ಞಾನ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಡಿಸೆಂಬರ್ 18 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್: ಒಟ್ಟು ಮೊತ್ತ ₹ 1,500–15,000. ಸಂಪರ್ಕ: https://shorturl.at/bh4RM.

ಕಂಟೆಂಟ್ ರೈಟಿಂಗ್: ವೇರ್‌ವಿ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ (Warewe Consultancy Private Limited) ಕಂಟೆಂಟ್ ಬರವಣಿಗೆ ಸಾಮರ್ಥ್ಯ ಇರುವ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಬ್ಲಾಗಿಂಗ್, ಸೃಜನಾತ್ಮಕ ಬರವಣಿಗೆ, ಇಂಗ್ಲಿಷ್‌ನಲ್ಲಿ ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ, ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ), ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್, ಟೆಕ್ನಿಕಲ್ ರೈಟಿಂಗ್ ಮತ್ತು ವರ್ಡ್‌ಪ್ರೆಸ್ ಬಗ್ಗೆ ಜ್ಞಾನ ಉಳ್ಳವರು ಡಿಸೆಂಬರ್ 19ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್: ತಿಂಗಳಿಗೆ ₹ 4,000–6,000. ಸಂಪರ್ಕ: https://shorturl.at/F4VOF.

ಮಾರ್ಕೆಟಿಂಗ್, ಕಮ್ಯುನಿಟಿ ವೆಬಿನಾರ್ ಆಪರೇಷನ್ಸ್: ಎಲಿವೇಟೆಡ್ ಲೀಡರ್ಸ್ ಕ್ಲಬ್ ಮನೆಯಿಂದ ಕೆಲಸ ಮಾಡಬಲ್ಲ ಮಾರ್ಕೆಟಿಂಗ್, ಕಮ್ಯುನಿಟಿ & ವೆಬಿನಾರ್ ಆಪರೇಷನ್ಸ್ ಇಂಟರ್ನಿಗಳನ್ನು ನಿಯೋಜನೆ ಮಾಡಿಕೊಳ್ಳಲಿದೆ. ಕ್ಯಾನ್ವಾ, ಇಂಗ್ಲಿಷ್‌ನಲ್ಲಿ ಸಂವಹನ ಮತ್ತು ಬರಹ ಸಾಮರ್ಥ್ಯ, ಗೂಗಲ್ ಡಾಕ್ಸ್, ಗೂಗಲ್ ಶೀಟ್ಸ್, ಇಂಟರ್‌ಪರ್ಸನಲ್ ಸ್ಕಿಲ್ಸ್, ಎಂಎಸ್ ಎಕ್ಸೆಲ್, ಎಂಎಸ್ ವರ್ಡ್, ಸೇಲ್ಸ್ ಸಪೋರ್ಟ್ ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಡಿಸೆಂಬರ್ 25 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 4,000–5,000. ಸಂಪರ್ಕ– https://shorturl.at/qtFlz.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಕಾಪಿರೈಟಿಂಗ್: ಪ್ಲ್ಯಾಟಿನಂಆರ್‌ಎಕ್ಸ್.ಇನ್ (PlatinumRx.in) ಕಾಪಿರೈಟಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಕಾಪಿರೈಟಿಂಗ್, ಸೃಜನಾತ್ಮಕ ಬರವಣಿಗೆ, ಇಂಗ್ಲಿಷ್‌ನಲ್ಲಿ ಬರೆಯುವ ಸಾಮರ್ಥ್ಯ, ಸ್ಕ್ರಿಪ್ಟ್ ರೈಟಿಂಗ್ ಮತ್ತು ಸ್ಟೋರಿ ಟೆಲ್ಲಿಂಗ್‌ನಲ್ಲಿ ಜ್ಞಾನ ಉಳ್ಳವರು ಡಿಸೆಂಬರ್ 11ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 10,000–15,000. ಸಂಪರ್ಕ: https://shorturl.at/T2ghg.

ಮಾನವ ಸಂಪನ್ಮೂಲ ವಿಭಾಗ: ಆದಿಲಕ್ಷ್ಮಿ ಇ–ಕಾಮರ್ಸ್ ಪ್ರೈವೇಟ್ ಲಿಮಿಟೆಡ್, ಮಾನವ ಸಂಪನ್ಮೂಲ ವಿಭಾಗಕ್ಕೆ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯ, ಎಂಎಸ್ ಎಕ್ಸೆಲ್ ಮತ್ತು ಎಂಎಸ್ ವರ್ಡ್‌ನಲ್ಲಿ ಜ್ಞಾನ ಉಳ್ಳವರು ಅರ್ಜಿ ಸಲ್ಲಿಸಬಹುದು. ಡಿಸೆಂಬರ್ 12 ಅರ್ಜಿ ಸಲ್ಲಿಸಲು ಕೊನೆಯ ದಿನ. ಸ್ಟೈಪೆಂಡ್– ತಿಂಗಳಿಗೆ ₹ 7,500–10,000. ಸಂಪರ್ಕ: https://shorturl.at/yrBeh.

ಯುಎಕ್ಸ್/ಯುಐ ಡಿಸೈನ್: ಬ್ರ್ಯಾಂಡ್‌ಶಾರ್ಕ್ ಸಂಸ್ಥೆಯು ಯುಎಕ್ಸ್/ಯುಐ ಡಿಸೈನ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಯುಐ ಮತ್ತು ಯುಎಕ್ಸ್ ಡಿಸೈನ್, ಅಡೋಬ್ ಎಕ್ಸ್‌ಡಿ, ಇಲಸ್ಟ್ರೇಟರ್ ಮತ್ತು ಫೋಟೊಶಾಪ್ ಬಗ್ಗೆ ಅರಿತಿರುವ ವಿದ್ಯಾರ್ಥಿಗಳು ಡಿಸೆಂಬರ್ 25ರೊಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 10,000, ಸಂಪರ್ಕ: https://shorturl.at/ejXBD.

ರಸಪ್ರಶ್ನೆ ಸ್ಪರ್ಧೆ ಎದ್ದೇಳಿ, ಸಿದ್ಧರಾಗಿ

ಪ್ರಜಾವಾಣಿ QUIZ CHAMPIONSHIP

• ವರುಣ ಹೆಗಡೆ

ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನು ಒರೆಗೆ ಹಚ್ಚಿ, ಜ್ಞಾನದ ಮಟ್ಟವನ್ನು ಪರೀಕ್ಷಿಸಲು ರಸಪ್ರಶ್ನೆ (ಕ್ವಿಜ್) ಸಹಕಾರಿ. ಇದು ಕೇವಲ ಸ್ಪರ್ಧೆಯಾಗಿರದೆ, ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿ. ಕಲಿಕಾ ಸಾಮರ್ಥ್ಯವನ್ನು ವಿಸ್ತರಿಸಲು ನೆರವಾಗುವ ಈ ರಸಪ್ರಶ್ನೆ ಕಾರ್ಯಕ್ರಮಗಳಿಗೆ ಕ್ವಿಜ್ ಮಾಸ್ಟರ್‌ಗಳೇ ಸಾರಥಿಗಳು. ಸ್ಪರ್ಧೆಯಲ್ಲಿ ಕುತೂಹಲ ಕಾಯ್ದುಕೊಂಡು, ರಸವತ್ತಾಗಿ ನಡೆಸಿಕೊಡುವವರಿಗೆ ವಿಪುಲ ಅವಕಾಶಗಳಿದ್ದು, ಈಗ ವೃತ್ತಿಯಾಗಿ ಈ ಕ್ಷೇತ್ರವನ್ನು ಸ್ವೀಕರಿಸುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಈಗಾಗಲೇ ಈ ಕ್ಷೇತ್ರದಲ್ಲಿ ಛಾಪು ಮೂಡಿಸಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದವರು ‘ಕ್ಯೂರಿಯಾಸಿಟಿ ನಾಲೆಜ್ ಸಲ್ಯೂಷನ್ಸ್’ ಕಂಪನಿಯ ಸಂಸ್ಥಾಪಕಿ ಮೇಘವಿ ಮಂಜುನಾಥ್. ‘ಪ್ರಜಾವಾಣಿ– ರಸಪ್ರಶ್ನೆ ಚಾಂಪಿಯನ್‌ಷಿಪ್’ ಮುನ್ನಡೆಸುತ್ತಿರುವ ಅವರ ಜತೆಗಿನ ಸಂದರ್ಶನ ಇಲ್ಲಿದೆ:


ಮೇಘವಿ ಮಂಜುನಾಥ್

• ನೀವು ರಸಪ್ರಶ್ನೆಯನ್ನು ಹೇಗೆ ಅರ್ಥೈಸುತ್ತೀರಿ, ನಿಮ್ಮ ಪ್ರಕಾರ ಕ್ವಿಜ್ ಎಂದರೆ ಏನು?

ಮಕ್ಕಳಲ್ಲಿನ ಅಪಾರ ಕುತೂಹಲವನ್ನು ತಣಿಸುವ ಕೆಲಸ ಮಾಡುವ ರಸಪ್ರಶ್ನೆ ಸ್ಪರ್ಧೆಯು ಅವರಲ್ಲಿ ನಾಯಕತ್ವ ಗುಣ, ಗುಂಪಿನೊಂದಿಗೆ ಹೊಂದಾಣಿಕೆ, ಸ್ವಕಲಿಕಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುತ್ತದೆ. ಗುಂಪಿನಲ್ಲಿ ಇದ್ದುಕೊಂಡು ಹೇಗೆ ಕೆಲಸ ಮಾಡಬೇಕು, ಎಲ್ಲರೊಂದಿಗೆ ಹೇಗೆ ಸಮನ್ವಯ ಸಾಧಿಸಬೇಕೆಂಬ ಕೌಶಲ ವೃದ್ಧಿಸುವುದು ರಸಪ್ರಶ್ನೆ ಕಾರ್ಯಕ್ರಮಗಳ ಮುಖ್ಯ ಉದ್ದೇಶ. ಒಬ್ಬೊಬ್ಬರಲ್ಲೂ ಒಂದೊಂದು ರೀತಿಯ ಜ್ಞಾನ, ಮಾಹಿತಿ ಇರುತ್ತದೆ. ಅದನ್ನು ಹೇಗೆ ಸಮಗ್ರವಾಗಿ ಪ್ರಸ್ತುತಪಡಿಸಬೇಕು ಎಂಬುದನ್ನು, ಸಮಸ್ಯೆಗಳನ್ನು ಬಗೆಹರಿಸುವ ಕೌಶಲವನ್ನು ಮಕ್ಕಳು ಕಲಿಯುತ್ತಾರೆ.

• ರಸಪ್ರಶ್ನೆಯಲ್ಲಿ ಭಾಗವಹಿಸಲು ಇಚ್ಛಿಸುವ ಮಕ್ಕಳ ತಯಾರಿ ಯಾವ ರೀತಿ ಇರಬೇಕು?

ಸಾಮಾನ್ಯ ಜ್ಞಾನವೇ ರಸಪ್ರಶ್ನೆ ಸ್ಪರ್ಧೆಯ ಕೇಂದ್ರಬಿಂದು. ಇಲ್ಲಿ ತರಗತಿಗಳಲ್ಲಿ ಇದ್ದಂತೆ ನಿರ್ದಿಷ್ಟ ಸ್ವರೂಪದ ಪಠ್ಯವಾಗಲೀ ವಿಷಯವಾಗಲೀ ಇರುವುದಿಲ್ಲ. ಮಕ್ಕಳು ಪ್ರತಿನಿತ್ಯ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಏನು ನೋಡುತ್ತಾರೋ ಓದುತ್ತಾರೋ ಅದಕ್ಕೆ ಸಂಬಂಧಿಸಿದ ವಿಷಯಗಳೇ ಇರುತ್ತವೆ. ಆದ್ದರಿಂದ ವಿವಿಧ ಪುಸ್ತಕಗಳು, ದಿನಪತ್ರಿಕೆಗಳು, ವಾರ–ಮಾಸ ಪತ್ರಿಕೆಗಳನ್ನು ಓದಬೇಕು. ವಿವಿಧ ಮೂಲಗಳಿಂದ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು. ಬರವಣಿಗೆ, ಸಂಶೋಧನೆಯೂ ಮುಖ್ಯವಾಗುತ್ತವೆ. ಕೌತುಕವನ್ನು ಉಳಿಸಿಕೊಳ್ಳಬೇಕು.

• ರಸಪ್ರಶ್ನೆಗೆ ಸಂಬಂಧಿಸಿದಂತೆ ಹುಟ್ಟುಹಾಕಿದ ನಿಮ್ಮ ‘ಕ್ಯೂರಿಯಾಸಿಟಿ ನಾಲೆಜ್ ಸಲ್ಯೂಷನ್ಸ್’ ಕಂಪನಿ ಬಗ್ಗೆ ಹೇಳುವುದಾದರೆ...

ನಮ್ಮದು ಬೆಂಗಳೂರು ಮೂಲದ ಕಂಪನಿಯಾಗಿದ್ದು, ಹತ್ತು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಶಾಲಾ ಮಟ್ಟದ ಕ್ವಿಜ್‌ನಿಂದ ಪ್ರಾರಂಭವಾದ ಈ ಸಂಸ್ಥೆ, ಈಗ ಕೇಂದ್ರ ಸರ್ಕಾರದ ಹಲವು ಪ್ರಾಜೆಕ್ಟ್‌ಗಳನ್ನು ನಿರ್ವಹಣೆ ಮಾಡುತ್ತಿದೆ. ರಸಪ್ರಶ್ನೆಗೆ ಸಂಬಂಧಿಸಿದಂತೆ ನಾವು ಸಿದ್ಧಪಡಿಸಿದ ವಿಷಯವಸ್ತುಗಳು 160ಕ್ಕೂ ಅಧಿಕ ದೇಶಗಳನ್ನು ತಲುಪಿವೆ. ರಸಪ್ರಶ್ನೆಯನ್ನು ವೃತ್ತಿಪರವಾಗಿ ಸ್ವೀಕರಿಸಿದ ದೇಶದ ಪ್ರಥಮ ಮಹಿಳಾ ಕ್ವಿಜ್ ಮಾಸ್ಟರ್ ಎಂಬ ಹಿರಿಮೆ ಕೂಡ ನನ್ನದಾಗಿದೆ.

• ನೀವು ಈವರೆಗೆ ಎಷ್ಟು ರಸಪ್ರಶ್ನೆ ಕಾರ್ಯಕ್ರಮಗಳನ್ನು ನಿರ್ವಹಣೆ ಮಾಡಿರುವಿರಿ?

ರಾಜ್ಯಮಟ್ಟದ ಎರಡು ಸಾವಿರಕ್ಕೂ ಅಧಿಕ ರಸಪ್ರಶ್ನೆ ಕಾರ್ಯಕ್ರಮಗಳನ್ನು ನಿರ್ವಹಣೆ ಮಾಡಿದ್ದೇನೆ. ವಿವಿಧ ಟಿ.ವಿ. ಚಾನೆಲ್‌ಗಳಲ್ಲಿ 200 ಗಂಟೆಗಳ ಕಾರ್ಯಕ್ರಮ ನೀಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಆನ್‌ಲೈನ್ ಸ್ಪರ್ಧೆಯನ್ನೂ ಹಮ್ಮಿಕೊಂಡಿದ್ದೆವು. ಕ್ವಿಜ್ ಆ್ಯಪ್‌ಗಳಿಗೆ ಒಂದು ಲಕ್ಷಕ್ಕೂ ಅಧಿಕ ಪ್ರಶ್ನೆಗಳನ್ನು ಸಿದ್ಧಪಡಿಸಿ ಒದಗಿಸಿದ್ದೇವೆ.

• ಕ್ವಿಜ್ ಮಾಸ್ಟರ್‌ಗಳಿಗೆ ಈಗ ಯಾವ ರೀತಿಯ ಅವಕಾಶವಿದೆ? ಇದನ್ನೇ ವೃತ್ತಿಯಾಗಿ ಸ್ವೀಕರಿಸಬಹುದೆ?

ರಸಪ್ರಶ್ನೆ ನಿರ್ವಹಣೆಯನ್ನೂ ವೃತ್ತಿಯಾಗಿ ತೆಗೆದುಕೊಳ್ಳಬಹುದು ಎಂಬ ಬಗ್ಗೆ ಈ ಹಿಂದೆ ಜನರಿಗೆ ಅರಿವಿರಲಿಲ್ಲ. ಶಾಲೆಗಳಲ್ಲಿ ಶಿಕ್ಷಕರು ನಡೆಸಿಕೊಡುವ ಸ್ಪರ್ಧೆಯೆಂದು ಹಲವರು ತಪ್ಪಾಗಿ ಭಾವಿಸಿದ್ದರು. ಇದನ್ನೂ ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳಬಹುದು ಎಂಬುದು ಈಗ ಅರಿವಿಗೆ ಬರುತ್ತಿದೆ. ಇತ್ತೀಚೆಗೆ ಈ ಕ್ಷೇತ್ರಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಅವಕಾಶಗಳೂ ಬಹಳಷ್ಟಿವೆ. 2010ರ ನಂತರ ದೇಶದಲ್ಲಿ ಈ ಕ್ಷೇತ್ರ ವಿಸ್ತರಿಸಿಕೊಂಡಿದೆ. ಕಂಪನಿಗಳು, ಶಾಲಾ–ಕಾಲೇಜುಗಳು, ಪಬ್‌ಗಳು, ಸ್ವಯಂಸೇವಾ ಸಂಸ್ಥೆಗಳು ಸೇರಿ ವಿವಿಧೆಡೆ ರಸಪ್ರಶ್ನೆ ಸ್ಪರ್ಧೆಗಳು ನಡೆಯುತ್ತಿವೆ.

• ಕ್ವಿಜ್ ಮಾಸ್ಟರ್ ಆಗುವವರ ತಯಾರಿ ಹೇಗಿರಬೇಕು? ಏನೆಲ್ಲ ಕೌಶಲ ಅಗತ್ಯ?

ಮೊದಲನೆಯದಾಗಿ, ಕುತೂಹಲ ಇರಬೇಕು. ಸುತ್ತಮುತ್ತಲಿನ ವಿಷಯಗಳನ್ನು ತಿಳಿದುಕೊಳ್ಳುವ ಆಸಕ್ತಿ, ಪ್ರಶ್ನಿಸಿ ಅರಿಯುವ ಮನೋಭಾವ ಇರಬೇಕು. ಸಂಶೋಧನೆ, ಸಂವಹನ ಕಲೆ ಕೂಡ ಮುಖ್ಯವಾಗುತ್ತವೆ. ಒಳ್ಳೆಯ ಸಂಶೋಧಕರಾದರೆ ಉತ್ತಮ ಕ್ವಿಜ್ ಮಾಸ್ಟರ್ ಆಗಲು ಸಾಧ್ಯ. ಪ್ರೇಕ್ಷಕರಿಗೆ ಬೇಸರವಾಗದಂತೆ ಗಂಟೆಗಟ್ಟಲೆ ಅವರನ್ನು ಹಿಡಿದಿಟ್ಟುಕೊಳ್ಳುವ ಕಲೆ ಕರಗತವಾಗಿರಬೇಕು. ಭಾಷೆ ಅಷ್ಟಾಗಿ ಮುಖ್ಯವಾಗದಿದ್ದರೂ ಪ್ರೇಕ್ಷಕರ ಜತೆಗೆ ಸಂವಹನ ಸಾಧಿಸುವ ಸಾಮರ್ಥ್ಯ ಇರಬೇಕು. ಓದುವ ಹವ್ಯಾಸವನ್ನು ರೂಢಿಸಿಕೊಂಡಿರಬೇಕು.

• ರಾಜ್ಯದಲ್ಲಿ ರಸಪ್ರಶ್ನೆ ಚಟುವಟಿಕೆಗಳು ಹೇಗೆ ನಡೆಯುತ್ತಿವೆ?

ರಾಜ್ಯದಲ್ಲಿ ರಸಪ್ರಶ್ನೆ ಕಾರ್ಯಕ್ರಮಗಳು ಹೆಚ್ಚುತ್ತಿವೆ. ಬೆಂಗಳೂರಿನಲ್ಲಿ ಕ್ವಿಜ್ ಜನಪ್ರಿಯವಾಗುತ್ತಿದೆ. ಉಳಿದ ನಗರಗಳಲ್ಲಿಯೂ ಕ್ವಿಜ್ ಚಟುವಟಿಕೆಯನ್ನು ಇತ್ತೀಚೆಗೆ ನೋಡಬಹುದಾಗಿದೆ. ಶಾಲಾ–ಕಾಲೇಜುಗಳಲ್ಲಿ ಕ್ವಿಜ್‌ಗೆ ಒತ್ತು ನೀಡಬೇಕಿದೆ. ಸರ್ಕಾರವು ಇದಕ್ಕೆ ಆದ್ಯತೆ ನೀಡಿ, ಇಲಾಖಾವಾರು ಸ್ಪರ್ಧೆಗಳನ್ನು ನಡೆಸಬೇಕಿದೆ.

• ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಷಿಪ್ ಬಗ್ಗೆ ಹೇಳುವುದಾದರೆ...

ರಾಜ್ಯದಲ್ಲಿ ರಸಪ್ರಶ್ನೆಯ ಸಂಸ್ಕೃತಿ ಬೆಳೆಸಲು ‘ಪ್ರಜಾವಾಣಿ ಕ್ವಿಜ್ ಚಾಂಪಿಯನ್‌ಷಿಪ್’ ಸಹಕಾರಿಯಾಗಿದೆ. ಈ ಚಾಂಪಿಯನ್‌ಷಿಪ್ ಯಾವಾಗ ಮತ್ತೆ ಬರಲಿದೆ ಎಂಬ ಕುತೂಹಲವನ್ನು ಕಾಯ್ದುಕೊಂಡಿದೆ. ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶದ ವಿದ್ಯಾರ್ಥಿಗಳನ್ನು ಸಮರ್ಪಕವಾಗಿ ತಲುಪಿದೆ. ಜ್ಞಾನದ ಜತೆಗೆ ಬುದ್ಧಿವಂತಿಕೆಯನ್ನೂ ಒರೆಗೆ ಹಚ್ಚಲು ಇದು ಸಹಕಾರಿಯಾಗಿದೆ. ಕರ್ನಾಟಕದಲ್ಲಿ ಒಂದು ಮೈಲಿಗಲ್ಲು ಸ್ಥಾಪಿಸಿದೆ. ❖

‘ಅಪ್ಪನ ಒತ್ತಾಯಕ್ಕೆ ಓದಿದೆ ನನ್ನ ಇಷ್ಟಕ್ಕೆ ಬೆಲೆ ಎಲ್ಲಿದೆ?’



ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• ನನಗೆ ವಿಜ್ಞಾನ ಓದುವುದಕ್ಕೆ ಇಷ್ಟ ಇರಲಿಲ್ಲ. ಆದರೂ ಅಪ್ಪನ ಒತ್ತಾಯಕ್ಕೆ ಓದಿದೆ. ನಂತರ ವೈದ್ಯಕೀಯ ಓದುವುದಕ್ಕಂತೂ ಸ್ವಲ್ಪವೂ ಮನಸ್ಸಿರಲಿಲ್ಲ. ಆಗಲೂ ಅಪ್ಪ ದಬಾಯಿಸಿ, ವೈದ್ಯಕೀಯಕ್ಕೆ ಸೇರಿಸಿದರು. ಬಹಳ ಕಷ್ಟಪಟ್ಟು ಓದಿ, ಡಾಕ್ಟರ್ ಆದೆ. ಈಗ ಅವರು ಹೇಳಿದ ಹುಡುಗನನ್ನೇ ಮದುವೆಯಾಗು ಅನ್ನುತ್ತಿದ್ದಾರೆ. ನಾನು ಇಷ್ಟಪಟ್ಟವನನ್ನೇ ಮದುವೆಯಾಗಬೇಕು. ಅದನ್ನು ಅಪ್ಪ– ಅಮ್ಮನಿಗೆ ಹೇಳಲು ಭಯವಾಗುತ್ತಿದೆ. ಅವರಿಗೆ ವಿಷಯ ಗೊತ್ತಾದರೆ ಪ್ರಳಯವಾಗುತ್ತದೆ. ನನ್ನನ್ನು ಹಿಂಸಿಸುತ್ತಾರೆ ಅಥವಾ ಅವರೇ ಸಾಯ್ತೀನಿ ಎಂದೆಲ್ಲ ಹೇಳುತ್ತಾರೆ. ನನಗೆ ಜುಗುಪ್ಸೆಯಾಗಿದೆ, ಏನು ಮಾಡಲಿ?
–ಡಾ. ಅನಘಾ ರಾಘವೇಂದ್ರ, ಹಾಸನ

ಬಹಳ ಪಾಲಕರು ತಮ್ಮ ಮಕ್ಕಳಿಂದ ಅತಿಯಾದದ್ದನ್ನು ನಿರೀಕ್ಷಿಸುತ್ತಾರೆ. ತಾವು ಹೇಳಿದಂತೆಯೇ ತಮ್ಮ ಮಕ್ಕಳು ಕೇಳಬೇಕು, ಅದರಿಂದ ಒಳ್ಳೆಯದಾಗುತ್ತದೆ ಎಂದು ನಂಬಿರುತ್ತಾರೆ. ಅವರ ಕಾಳಜಿ ಅಥವಾ ಪ್ರೀತಿ ತಪ್ಪು ಅಂತಲ್ಲ. ಅದು ಸರಿಯಂತೂ ಅಲ್ಲ.

ನಮ್ಮ ಕನಸುಗಳನ್ನು ನಾವು ನನಸು ಮಾಡಿಕೊಳ್ಳಬೇಕು. ನಮ್ಮ ಕನಸುಗಳನ್ನು ನನಸು ಮಾಡುವಂತೆ ಮಕ್ಕಳನ್ನು ಒತ್ತಾಯಿಸುವುದು ತಪ್ಪು. ಅವರ ಹುಟ್ಟಿನ ಕಾಲ, ಪರಿಸರ, ಬೆಳವಣಿಗೆ ಎಲ್ಲವೂ ಪಾಲಕರಿಗಿಂತ ಭಿನ್ನವಾಗಿರುತ್ತವೆ. ಹಾಗಾಗಿ, ನಮ್ಮ ಮಕ್ಕಳು ಸ್ವತಂತ್ರ ವ್ಯಕ್ತಿಗಳಾಗುವಂತೆ ಅವಕಾಶವನ್ನು ಕೊಡಬೇಕು. ಜೀವಜಗತ್ತಿನ ಎಲ್ಲ ಪ್ರಾಣಿಗಳು ಸಹ ತಮ್ಮ ಮರಿಗಳನ್ನು ಒಂದು ಹಂತದವರೆಗೆ ಕಾಳಜಿಯಿಂದ ಬೆಳೆಸುತ್ತವೆ. ನಂತರ ಅವುಗಳ ಪಾಡಿಗೆ ಅವುಗಳನ್ನು ಸ್ವತಂತ್ರವಾಗಿ ಬಿಡುತ್ತವೆ. ಮನುಷ್ಯರು ಅದನ್ನು ಗಮನಿಸಬೇಕು. ಮಕ್ಕಳ ಮೇಲೆ ಅತಿಯಾದ ಪ್ರೀತಿಯನ್ನು, ಅವಲಂಬನೆಯನ್ನು ಹೊಂದಿರಬಾರದು. ಮಕ್ಕಳನ್ನು ತಮ್ಮಂತೆಯೇ, ತಮ್ಮ ನಿರೀಕ್ಷೆಯಂತೆಯೇ ಬೆಳೆಸಲು ಪ್ರಯತ್ನಿಸುವ ಪಾಲಕರು ಗೆಲ್ಲುವುದು ಕಡಿಮೆ. ಅದರಿಂದ ಪಾಲಕರು ಮತ್ತು ಮಕ್ಕಳ ಮಧ್ಯೆ ವಿಷಾದ, ಬೇಸರ, ಕೋಪ, ದ್ವೇಷ ಬೆಳೆದು ಬದುಕನ್ನು ನರಕವಾಗಿಸುತ್ತದೆ.

ನೀವು ಕೂಡ ಪಾಲಕರ ಒತ್ತಾಸೆಯಂತೆ ಇಷ್ಟವಿಲ್ಲದ ವಿಷಯಗಳನ್ನು ಕಷ್ಟಪಟ್ಟು ಓದಿದ್ದೀರಿ. ನಿಮಗೆ ಅಭಿನಂದನೆಗಳು. ನೀವೀಗ ನಿಮ್ಮ ತಂದೆ– ತಾಯಿಯೊಂದಿಗೆ ಕುಳಿತು ಮಾತನಾಡುವಷ್ಟು ಪ್ರಬುದ್ಧರಾಗಿದ್ದೀರಿ. ಅವರೂ ಈಗ ನಿಮ್ಮನ್ನು ಪ್ರಬುದ್ಧರಂತೆ ಕಾಣುವ ಸಾಧ್ಯತೆ ಇದೆ. ಅದರ ಬಗ್ಗೆ ವಿಶ್ವಾಸದಿಂದ ಮಾತನಾಡಿರಿ. ನಿಮ್ಮ ಜೀವನದಲ್ಲಿ ಪಾಲಕರ ಮಹತ್ವ ಹಾಗೂ ನೀವು ಅವರನ್ನು ಅದೆಷ್ಟು ಪ್ರೀತಿಸುತ್ತೀರಿ ಎನ್ನುವುದನ್ನು ಹೇಳಿಕೊಳ್ಳಿ. ನಿಮ್ಮ ಜೀವನದಲ್ಲಿ ನಿಮ್ಮ ಆಯ್ಕೆ ಮತ್ತು ನಿಮ್ಮ ಬದುಕಿನ ಗಮ್ಯದ ಬಗ್ಗೆ ವಿವರಿಸಿ. ಇಷ್ಟವಿಲ್ಲದವರ ಜೊತೆಗೆ ಬದುಕುವ ಕಷ್ಟಕ್ಕಿಂತಲೂ ಇಷ್ಟ ಇರುವವರ ಜೊತೆಗೆ ಬದುಕುತ್ತಾ, ಆ ಹಾದಿಯಲ್ಲಿ ಬರುವ ಕಷ್ಟವನ್ನು ಎದುರಿಸುವುದು ಸುಲಭ ಎನ್ನುವುದನ್ನು ತಿಳಿಸಿರಿ.

ಇಷ್ಟೆಲ್ಲವೂ ಸಾಧ್ಯವಿಲ್ಲ ಎನ್ನಿಸಿದರೆ, ನಿಮ್ಮ ಕುಟುಂಬದ ಹಿತೈಷಿ, ಹಿರಿಯರ ಸಹಾಯ ಪಡೆದುಕೊಳ್ಳಿ. ಅವರೊಂದಿಗೆ ನೀವೆಲ್ಲರೂ ಕುಳಿತು ಮಾತನಾಡಿ, ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ ಹೆಚ್ಚುವಂತೆ ಮಾಡುವುದು ಅಗತ್ಯ. ಇವೆಲ್ಲವೂ ಕಷ್ಟಸಾಧ್ಯ ಎನ್ನಿಸಿದರೆ ಕೌಟುಂಬಿಕ ಸಮಾಲೋಚಕರನ್ನು ಭೇಟಿ ಮಾಡಿ ಪರಿಹಾರ ಕಂಡುಕೊಳ್ಳುವುದು ಉತ್ತಮ.

ವಿದ್ಯಾರ್ಥಿ ವೇತನ ಕೈಪಿಡಿ

ಜಿಎಸ್‌ಕೆ ವಿದ್ಯಾರ್ಥಿವೇತನ

ಆರ್ಥಿಕವಾಗಿ ಹಿಂದುಳಿದ, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಥಮ ವರ್ಷದ ಎಂಬಿಬಿಎಸ್ ಕಲಿಯುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹತೆ: ಭಾರತೀಯ ಪ್ರಜೆಗಳಾಗಿರಬೇಕು. ಮೊದಲ ವರ್ಷದ ಎಂಬಿಬಿಎಸ್‌ಗೆ ದಾಖಲಾಗಿರಬೇಕು. 12ನೇ ತರಗತಿಯಲ್ಲಿ ಕನಿಷ್ಠ ಶೇ 65 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ವಾರ್ಷಿಕ ಕುಟುಂಬ ಆದಾಯವು ಎಲ್ಲಾ ಮೂಲಗಳಿಂದ ₹ 6 ಲಕ್ಷಕ್ಕಿಂತ ಕಡಿಮೆ ಇರಬೇಕು.

ಆರ್ಥಿಕ ಸಹಾಯ: ವರ್ಷಕ್ಕೆ ₹ 1 ಲಕ್ಷದವರೆಗೆ

ಅರ್ಜಿ ಸಲ್ಲಿಸಲು ಕೊನೇ ದಿನ: 11-01-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಅರ್ಜಿಗಳು ಮಾತ್ರ

ಹೆಚ್ಚಿನ ಮಾಹಿತಿಗೆ: www.b4s.in/pjvi/GSKP6

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

22) ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಕುರಿತು ಬರೆಯಿರಿ

ಉತ್ತರ: (.....ಹಿಂದಿನ ಸಂಚಿಕೆಯಿಂದ)

ಹೀಗಾಗಿ ಟಿಪ್ಪು ಮಂಗಳೂರು ಮತ್ತು ಕರಾವಳಿ ತೀರ ಪ್ರದೇಶದ ಮೇಲೆ ಹತೋಟಿ ಸಾಧಿಸುವುದು ಸೂಕ್ತವೆಂದು ಯೋಚಿಸಿ ಮಂಗಳೂರಿನತ್ತ ಮುನ್ನಡೆದು ಬ್ರಿಟಿಷರ ಸೈನ್ಯವನ್ನು ಸೋಲಿಸಿದನು. ಕೊನೆಗೆ 1784ರ ‘ಮಂಗಳೂರು ಒಪ್ಪಂದ’ದ ಮೂಲಕ ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಕೊನೆಗೊಂಡಿತು.

23) ಯಾಕೆ ಬ್ರಿಟಿಷರು ಟಿಪ್ಪುವಿನ ವಿರುದ್ಧ ದ್ವೇಷ ಭಾವನೆಗಳನ್ನು ಮೂಡಿಸಿಕೊಳ್ಳುತ್ತಾರೆ?

ಉತ್ತರ:– ಟಿಪ್ಪು ಸುಲ್ತಾನನು ಬ್ರಿಟಿಷರನ್ನು ತನ್ನ ರಾಜ್ಯ ವಿಸ್ತರಣೆಯ ನೀತಿಗೆ ಅಡ್ಡಪಡಿಸುತ್ತಿರುವ ಶತ್ರುಗಳು ಎಂದು ಭಾವಿಸಿ ಅವರನ್ನು ಓಡಿಸುವ ಗಂಭೀರ ಪ್ರಯತ್ನಗಳನ್ನು ಮಾಡಿದನು. ತಮ್ಮ ಕುಟೀಲ ನೀತಿಯಿಂದ ಭಾರತೀಯ ರಾಜ್ಯಗಳನ್ನು ಕಬಳಿಸುತ್ತಿದ್ದ ಬ್ರಿಟಿಷರನ್ನು ಪರಮ ವೈರಿಗಳು ಎಂದು ತಿಳಿದ ಅವನು ಅವರನ್ನು ಭಾರತದಿಂದ ಓಡಿಸುವುದು ತನ್ನ ಆದ್ಯ ಕರ್ತವ್ಯವೆಂದು ತಿಳಿದಿದ್ದನು. ತನ್ನ 17 ವರ್ಷಗಳ ಆಳ್ವಿಕೆಯಲ್ಲಿ ನಿರಂತರವಾಗಿ ಬ್ರಿಟಿಷರೊಂದಿಗೆ ಹೋರಾಡಿದನು. ಅವನು ಬ್ರಿಟಿಷರ ಸಾಮರ್ಥ್ಯ, ತಂತ್ರ, ಕುತಂತ್ರ ಮತ್ತು ಚಾಣಾಕ್ಷ ನೀತಿಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದನು. ಬ್ರಿಟಿಷರಿಗೆ ವ್ಯಾಪಾರದಲ್ಲಿ ನಷ್ಟವಾದಲ್ಲಿ ಅದು ಅವರ ರಾಜಕೀಯ ಸ್ವಾಮ್ಯವನ್ನು ಕುಂದಿಸುತ್ತದೆ ಎಂದೂ ಅರಿತಿದ್ದ ಅವನು ಬ್ರಿಟಿಷರನ್ನು ವಿರೋಧಿಸುತ್ತಿದ್ದವರನ್ನು ಸಂಘಟಿಸುವ ಮತ್ತು ಅವರ ನೆರವನ್ನು ಅಪೇಕ್ಷಿಸಲು ಪ್ರಯತ್ನಿಸಿದನು. ಅವರಿಗೆ ವ್ಯಾಪಾರದಲ್ಲಿ ಲಾಭವಾಗದಂತೆ ನೋಡಿಕೊಳ್ಳುವ ಮೂಲಕ ವ್ಯಾಪಾರದ ಮೇಲೆ ಅವರು ಸಾಧಿಸಿದ್ದ ಏಕಸ್ವಾಮ್ಯವನ್ನು ಮುರಿಯುವ ಪ್ರಯತ್ನಗಳನ್ನು ನಡೆಸಿದನು. ಇವು ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ಮತ್ತಷ್ಟು ದ್ವೇಷ ಭಾವನೆಗಳನ್ನು ಮೂಡಲು ಕಾರಣವಾದವು.

24) ಹೈದರಾಲಿ ಮತ್ತು ಟಿಪ್ಪು ಸುಲ್ತಾನರು ಆರ್ಥಿಕವಾಗಿ ಸಬಲರಾಗಲು ಏನನ್ನೆಲ್ಲಾ ಮಾಡಿದರು? ಮತ್ತು ಯಾಕೆ?

ಉತ್ತರ:– ಹೈದರಾಲಿಯ ಕಣ್ಣೆದುರಿಗೆ ಕರ್ನಾಟಕ ಪ್ರದೇಶದಲ್ಲಿದ್ದ ನವಾಬರು ದಿವಾಳಿಯಾಗಿದ್ದರು. ಇದನ್ನು ಕಂಡ ಹೈದರಾಲಿ ಮತ್ತು ಟಿಪ್ಪು ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸಲು ಅನೇಕ ನೀತಿ–ನಿಯಮಗಳನ್ನು ರೂಪಿಸಿದ್ದರು. ಶ್ರೀಗಂಧ ಮತ್ತು ತಂಬಾಕು ಮತ್ತಿತರ ಪದಾರ್ಥಗಳನ್ನು ರಾಜ್ಯದ ಏಕಸ್ವಾಮ್ಯದಡಿಗೆ ತಂದಿದ್ದರು. ಫ್ರೆಂಚ್ ತಂತ್ರಜ್ಞರನ್ನು ಕರೆಯಿಸಿ ಮೈಸೂರಿನ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆಗಳನ್ನು ವೃದ್ಧಿಸುವ ಯೋಜನೆಯಲ್ಲಿದ್ದರು.

25) ಮೂರನೆಯ ಆಂಗ್ಲೋ–ಮೈಸೂರು ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಮೂರನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ನೇರ ಕಾರಣ ಯಾವುದೆಂದರೆ ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ. ಆ ರಾಜ್ಯದ ರಾಜ ನೆರೆಯ ಕೊಚ್ಚಿ ಸಂಸ್ಥಾನದಲ್ಲಿ ಬ್ರಿಟಿಷರ ಬೆಂಬಲದಿಂದ ಕೋಟೆಯನ್ನು ನಿರ್ಮಿಸಿದನು ಮತ್ತು ಆತನು ಡಚ್ಚರಿಂದ ಆಯಕೋಟಾ ಮತ್ತು ಕಾಂಗನೂರು ಕೋಟೆಗಳನ್ನು ಪಡೆದುಕೊಂಡಿದ್ದನು. ಇದು ಮಂಗಳೂರು ಒಪ್ಪಂದದ ಷರತ್ತುಗಳ ಉಲ್ಲಂಘನೆಯಾಗಿತ್ತು. ಬ್ರಿಟಿಷರು ಜನರಲ್ ಮೆಡೋಸನ ನಾಯಕತ್ವದಲ್ಲಿ ಕಾರವಾರ, ಕೊಯಮತ್ತೂರು, ದಿಂಡಿಗಲ್ ಮೊದಲಾದವುಗಳನ್ನು ವಶಪಡಿಸಿಕೊಂಡರು. ಇದಕ್ಕೆ ವಿರುದ್ಧವಾಗಿ ಟಿಪ್ಪು ಬಾರಾಮಹಲ್ ಪ್ರಾಂತ್ಯವನ್ನು ಮುತ್ತಿ ಸತ್ಯಮಂಗಲವನ್ನು ವಶಪಡಿಸಿಕೊಂಡನು. ತಿರುಚನಾಪಳ್ಳಿಯನ್ನು ಮುತ್ತಿ ಅದನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಆತನು ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದನಾದರೂ ಅದು ಫಲ ನೀಡಲಿಲ್ಲ.

ಈ ಸಮಯದಲ್ಲಿ ಲಾರ್ಡ್ ಕಾರ್ನ್‌ವಾಲೀಸ್ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡನು. ಇದು ಯುದ್ಧದ ಗತಿಯನ್ನು ಬದಲಾಯಿಸಿತು, ಬ್ರಿಟಿಷ್ ಸೈನ್ಯ ಕಾರ್ನ್‌ವಾಲೀಸನ ನೇತೃತ್ವದಲ್ಲಿ ಕೋಲಾರ ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡು ಬೆಂಗಳೂರಿನತ್ತ ಮುನ್ನುಗ್ಗಿತು. ಬೆಂಗಳೂರನ್ನು ವಶಪಡಿಸಿಕೊಂಡು ಕೋಟೆಯನ್ನು ಹಾಳುಗೆಡವಿತು. ಬೆಂಗಳೂರನ್ನು ವಶಪಡಿಸಿಕೊಂಡ ಕಾರ್ನ್‌ವಾಲೀಸ್ ಟಿಪ್ಪುವಿನ ನಿರ್ನಾಮಕ್ಕಾಗಿ ನಿಜಾಮ ಮತ್ತು ಮರಾಠರ ನೆರವನ್ನು ಕೋರಿದನು. ನಿಜಾಮ ಮತ್ತು ಮರಾಠರ ಸಂಘಟಿತ ಸೈನ್ಯ ಬ್ರಿಟಿಷರೊಂದಿಗೆ ಸೇರುವುದರೊಂದಿಗೆ ಯುದ್ಧ ತಿರುವನ್ನು ಪಡೆದುಕೊಂಡಿತು. ಮರಾಠರು ಸವಣೂರು, ಗಜೇಂದ್ರಗಡ, ಲಕ್ಷ್ಮೇಶ್ವರ, ಹುಬ್ಬಳ್ಳಿ ಮೊದಲಾದವುಗಳನ್ನು ವಶಪಡಿಸಿಕೊಂಡರು. 1792ರಲ್ಲಿ ಸಂಘಟಿತ ಸೈನ್ಯ ಒಂದೊಂದಾಗಿ ಕೋಟೆಗಳನ್ನು ವಶಪಡಿಸಿಕೊಂಡು ಶ್ರೀರಂಗಪಟ್ಟಣದ ಕಡೆ ಸಾಗಿತು. ರಾತ್ರಿ ವೇಳೆಯಲ್ಲಿ ಕೋಟೆಯನ್ನು ಹಾಳುಗೆಡವಲಾಯಿತು. ಇದರಿಂದ ವಿಚಲಿತಗೊಂಡ ಟಿಪ್ಪು ಬ್ರಿಟಿಷರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ನಿರ್ಧರಿಸಿದನು. ಇದು ಆತನಿಗೆ ಅನಿವಾರ್ಯವೂ ಆಗಿತ್ತು. 1792ರಲ್ಲಿ ಅಸಮಾನ ಷರತ್ತುಗಳನ್ನು ಹೊಂದಿದ್ದ ‘ಶ್ರೀರಂಗಪಟ್ಟಣ ಒಪ್ಪಂದ’ಕ್ಕೆ ಟಿಪ್ಪು ಸಹಿ ಹಾಕುವ ಮೂಲಕ ಯುದ್ಧಕ್ಕೆ ತೆರೆಯಾಯಿತು. ಈ ಒಪ್ಪಂದದನ್ವಯ ಮೂರನೇ ಆಂಗ್ಲೋ–ಮೈಸೂರು ಯುದ್ಧ ಕೊನೆಗೊಂಡಿತು. ಟಿಪ್ಪುವನ್ನು ಮಣಿಸಲು ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದಲ್ಲಿ ಅಸಮಾನ ಷರತ್ತುಗಳು ಇರುವಂತೆ ನೋಡಿಕೊಂಡರು. ಆ ಷರತ್ತುಗಳೆಂದರೆ ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು, ಮೂರು ಕೋಟಿ ರೂಪಾಯಿಗಳನ್ನು ಯುದ್ಧ ನಷ್ಟ ಭರ್ತಿಯಾಗಿ ಕೊಡುವುದು, ಯುದ್ಧ ನಷ್ಟ ಭರ್ತಿಗೆ ಗ್ಯಾರಂಟಿಯಾಗಿ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು, ಮತ್ತು ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆಗೊಳಿಸುವುದು. ಇದರನ್ವಯ ಶ್ರೀರಂಗಪಟ್ಟಣದಿಂದ ಬ್ರಿಟಿಷರ ನೇತೃತ್ವದಲ್ಲಿನ ಸಂಘಟಿತ ಸೈನ್ಯ ಹಿಂತೆಗೆಯಿತು.

26) ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ಕುರಿತು ಬರೆಯಿರಿ

ಉತ್ತರ: ಟಿಪ್ಪು ಮೂರನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿನ ಸೋಲನ್ನು ವೈಯಕ್ತಿಕವಾಗಿ ಸ್ವೀಕರಿಸಿ ಅದನ್ನು ಒಂದು ಪ್ರಮುಖ ಸವಾಲೆಂದೇ ಪರಿಗಣಿಸಿದನು. ಒಪ್ಪಂದದನ್ವಯ ಬ್ರಿಟಿಷರ ನೇತೃತ್ವದಲ್ಲಿನ ಮಿತ್ರಕೂಟಕ್ಕೆ ನೀಡಬೇಕಾದ ಭೂಪ್ರದೇಶಗಳು ಮತ್ತು ಹಣವನ್ನು ಚಾಚೂ ತಪ್ಪದೆ ಸಲ್ಲಿಸಿ ಒತ್ತೆಯಾಳಾಗಿ ಕಳುಹಿಸಿಕೊಟ್ಟಿದ್ದ ತನ್ನ ಇಬ್ಬರು ಮಕ್ಕಳನ್ನು ಹಿಂದಕ್ಕೆ ಕರೆಯಿಸಿಕೊಂಡನು ಟಿಪ್ಪು ಬ್ರಿಟಿಷರ ಅಧೀನದಲ್ಲಿದ್ದ ಮಲೆಯಾಳಂ ಮಾತನಾಡುವ ಭೂಪ್ರದೇಶಗಳು ನ್ಯಾಯಯುತವಾಗಿ ತನಗೇ ಸೇರಬೇಕೆಂದು ವಾದಿಸಿದನು. ಆದರೆ ಬ್ರಿಟಿಷರು ಅದನ್ನು ಪುಷ್ಟೀಕರಿಸಲಿಲ್ಲ. ಲಾರ್ಡ್ ವೆಲ್ಲೆಸ್ಲಿ 1798ರಲ್ಲಿ ಭಾರತದ ಗವರ್ನರ್ ಜನರಲ್‌ನಾಗಿ ನೇಮಕಗೊಂಡ ಬಳಿಕವಂತೂ ಟಿಪ್ಪುವಿನ ವಿರೋಧಿ ರಾಜಕೀಯ ಚಟುವಟಿಕೆಗಳು ಚುರುಕುಗೊಂಡವು. (ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

CURRENT ELECTRICITY

32. Manganin or Eureka is used for making standard resistance coils. Why?

Ans:- Manganin or Eureka has very high resistivity. Therefore, a smaller length of the wire of such a material is required to prepare the coil of given resistance. Also, the variation of resistance of such materials with temperature is very small. That is why they are used for making standard resistance coils.

Kirchoff's Network

1. **What is a network?**

Ans:- An electrical network is a combination of the various circuit elements and sources connected together.

2. **What is a node?**

Ans:- A node in an electrical network is a point at which more than two conductors meet.

3. Define a loop in an electrical network.

Ans:- A loop also called mesh in an electrical network is a closed path for current.

4. Can the Kirchoff's laws be applied to the AC circuits?

Ans:- Yes, Kirchoff's laws can be applied to the AC circuits.

5. What is a wheatstone's network?

Ans:- The wheatstone's network is the arrangement of resistances used for measuring one of them in terms of the other three. The meter bridge is based on this principle.

The condition for the balance of the wheatstone's network is $\frac{P}{Q} = \frac{R}{S}$

6. Why are the metal strips in the meter bridge made thick?

Ans:- The metal strips in the meter bridge are made thick in order to reduce their resistances.

7. How is the meter bridge checked for the proper connections?

Ans:- When the sliding contact is made to touch the bridge wire at the two ends one after the other, the deflections produced in the galvanometer must be in opposite directions – this is the check for the proper connections in the meter bridge.

8. What is the balancing length in the metre bridge when the resistances in the two gaps are equal?

Ans:- When the resistances in the two gaps are equal the balancing length in the metre bridge will be 0.5m.

9. In any experiment with the metre bridge, the resistances in the two gaps should be comparable, why?

Ans:- The resistances in the two gaps is not comparable the value of the balancing length may be too small or too large. As a result measurement of resistance will not be accurate. The error due to non uniformity of the bridge wire will be minimum when the resistances in the two gaps are comparable.

10. Why is the slide wire bridge also called a metre bridge?

Ans:- The slide wire bridge is also called a metre bridge because the length of the wire in it is of one metre.

11. Name the device used for measuring the emf of a cell.

Ans:- Potentiometer.

12. Of which material is potentiometer normally made of?

Ans:- The potentiometer is normally made of alloy like eureka or manganin because they have a high value of resistivity and low value of temperature coefficient of the resistance.

13. Explain the significance of Kirchoff's laws.

Ans:- The ohm's law can be used only to analyse simple electrical circuits. When the circuit contains more than one source emf and the distribution of current in various branches of the circuit is quite complicated, then one is unable to analyse such a circuit by making use of Ohm's law. In such a case, Kirchoff's laws are used to analyse the circuit.

14. State the Kirchoff's I law?

Ans:- Kirchoff's I law called the current law or even junction rule signifies the law of conservation of charges.

It states that – "In any electrical network the algebraic sum of the currents at a node is equal to zero"

That is., $\boxed{\Sigma I = 0}$

15. State the Kirchoff's II law?

Ans:- Kirchoff's II law also called the voltage law or even loop rule signifies the law of conservation of energy.

It states that – "In a current loop of an electrical network the algebraic sum of the emfs is equal to the algebraic sum of the products of current and resistance in different parts of that loop."

That is., $\boxed{\Sigma E = \Sigma IR}$

16. Explain the significance of Kirchoff's laws.

Ans:- The ohm's law can be used only to analyse simple electrical circuits. When the circuit contains more than one source emf and the distribution of current in various branches of the circuit is quite complicated, then one is unable to analyse such a circuit by making use of Ohm's law. In such a case, Kirchoff's laws are used to analyse the circuit.

ಎಸ್‌ಐಆರ್: ಗಡುವು ವಿಸ್ತರಣೆ

9 ರಾಜ್ಯ, 3 ಕೇಂದ್ರಾಡಳಿತ ಪ್ರದೇಶ: ಮತದಾರರ ಪಟ್ಟಿ ಫೆ.14ರಂದು ಪ್ರಕಟ

ನವದೆಹಲಿ (ಪಿಟಿಐ): ದೇಶದ ಒಂಬತ್ತು ರಾಜ್ಯ ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯ ವಿವಿಧ ಹಂತಗಳ ಅಂತಿಮ ಗಡುವನ್ನು ಕೇಂದ್ರ ಚುನಾವಣಾ ಆಯೋಗವು ಒಂದು ವಾರ ವಿಸ್ತರಿಸಿದೆ.

ಅತ್ಯಂತ ಕಡಿಮೆ ಸಮಯ ನಿಗದಿಪಡಿಸಿದ ಕಾರಣ, ತಳಮಟ್ಟದ ಅಧಿಕಾರಿಗಳಿಗೆ ಸಮಸ್ಯೆಯಾಗುತ್ತಿದೆ ಎಂದು ವಿರೋಧ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ ಬೆನ್ನಲ್ಲೇ, ಈ ಕ್ರಮ ಕೈಗೊಂಡಿದೆ.

‘ಪಟ್ಟಿಗೆ ಹೆಸರು ಸೇರ್ಪಡೆಯ ಅರ್ಜಿ ನಮೂನೆ ವಿತರಣೆ ಗಡುವನ್ನು ಡಿಸೆಂಬರ್ 4ರ ಬದಲಾಗಿ 11ರವರೆಗೂ ವಿಸ್ತರಿಸಿದೆ. ಡಿಸೆಂಬರ್ 9ಕ್ಕೆ ನಿಗದಿಯಾಗಿದ್ದ ಮತದಾರರ ಪಟ್ಟಿ ಪ್ರಕಟಣೆಯನ್ನು ಡಿಸೆಂಬರ್ 16ಕ್ಕೆ ಮುಂದೂಡಲಾಗಿದೆ. ಅಂತಿಮ ಮತದಾರರ ಪಟ್ಟಿಯನ್ನು 2026ರ ಫೆಬ್ರುವರಿ 7ರ ಬದಲಾಗಿ, ಫೆಬ್ರುವರಿ 14ರಂದು ಪ್ರಕಟಿಸಲಾಗುವುದು’ ಎಂದು ಚುನಾವಣಾ ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

‘ವಿವಿಧ ರಾಜ್ಯಗಳಲ್ಲಿ ಈಗಾಗಲೇ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಕುರಿತಂತೆ ಸಂಬಂಧಿಸಿದ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳ ಜೊತೆಗೆ ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಸಭೆ ನಡೆಸಿದ ಬಳಿಕ ಈ ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮುಖ್ಯಾಂಶಗಳು
- ಡಿ. 4ರ ಬದಲು ಡಿ.11ರ ವರೆಗೆ ಗಡವು ವಿಸ್ತರಣೆ
- ಎಸ್‌ಐಆರ್ ವ್ಯಾಪ್ತಿಗೆ 51 ಕೋಟಿ ಮತದಾರರು
- ಎಸ್‌ಐಆರ್ ಒತ್ತಡಕ್ಕೆ 40 ಅಧಿಕಾರಿಗಳು ಸಾವು: ಆರೋಪ



ಚುನಾವಣಾ ಆಯೋಗವು ನಿಗದಿಪಡಿಸಿದ ಸಮಯವು ಪ್ರಾಯೋಗಿಕವಾಗಿರಲಿಲ್ಲ ಎಂಬುದಕ್ಕೆ ಗಡುವು ವಿಸ್ತರಣೆಯೇ ಸಾಕ್ಷಿ
ಪ್ರಮೋದ್ ತಿವಾರಿ
ಕಾಂಗ್ರೆಸ್ ನಾಯಕ

ಎಸ್‌ಐಆರ್ ಪ್ರಕ್ರಿಯೆಯ ಗಡುವು ಕಡಿಮೆ ಇರುವ ಕಾರಣದಿಂದ ಒತ್ತಡಕ್ಕೆ ಒಳಗಾಗಿ ವಿವಿಧ ರಾಜ್ಯಗಳಲ್ಲಿ ಮತಗಟ್ಟೆ ಮಟ್ಟದ 40 ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಅಲ್ಲದೇ, ಕಡಿಮೆ ಸಮಯ ನಿಗದಿ ಮಾಡಿರುವ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದವು.

ಆದರೆ, ಈ ಆರೋಪಗಳನ್ನು ತಿರಸ್ಕರಿಸಿದ್ದ ಆಯೋಗವು, ಇಡೀ ಪ್ರಕ್ರಿಯೆಯು ಸುಗಮವಾಗಿ ನಡೆಯುತ್ತಿದೆ ಎಂದು ತಿಳಿಸಿತ್ತು.

ಸೋಮವಾರದಿಂದ ಆರಂಭವಾಗುವ ಸಂಸತ್ತಿನ ಚಳಿಗಾಲದ ಅಧಿವೇಶನದ ಮುನ್ನಾದಿನವೇ ಎಸ್‌ಐಆರ್ ಪ್ರಕ್ರಿಯೆಯ ಗಡುವು ವಿಸ್ತರಿಸುವ ನಿರ್ಧಾರವನ್ನು ತೆಗೆದುಕೊಂಡಿದೆ. ಬಿಹಾರದಲ್ಲಿ ನಡೆದಿದ್ದ ಎಸ್‌ಐಆರ್ ಕುರಿತು ವಿಸ್ತೃತ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೋರಿ ವಿರೋಧ ಪಕ್ಷಗಳು ಪ್ರತಿಭಟಿಸಿದ ಕಾರಣ, ಸಂಸತ್‌ನ ಹಿಂದಿನ ಅಧಿವೇಶನ ಸರಿಯಾಗಿ ನಡೆದಿರಲಿಲ್ಲ.

9 ರಾಜ್ಯಗಳು ಹಾಗೂ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆಯಲಿದೆ ಎಂದು ಚುನಾವಣಾ ಆಯೋಗವು ಅ.27ರಂದು ಪ್ರಕಟಿಸಿತ್ತು. ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಷ್ಕರಿಸುತ್ತಿದ್ದು, 51 ಕೋಟಿ ಮತದಾರರನ್ನು ಪರಿಗಣನೆಗೆ ತೆಗೆದುಕೊಳ್ಳಲಿದೆ.

ಎಲ್ಲೆಲ್ಲಿ ಎಸ್‌ಐಆರ್: ಅಂಡಮಾನ್ ನಿಕೋಬಾರ್ ದ್ವೀಪ, ಲಕ್ಷದ್ವೀಪ, ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರಪ್ರದೇಶ, ಪಶ್ಚಿಮ ಬಂಗಾಳ.

ತಮಿಳುನಾಡು, ಪುದುಚೇರಿ, ಕೇರಳ, ಪಶ್ಚಿಮ ಬಂಗಾಳದಲ್ಲಿ 2026ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಅಸ್ಸಾಂನಲ್ಲಿಯೂ ಕೂಡ ಮುಂದಿನ ವರ್ಷ ಚುನಾವಣೆ ನಡೆಯಲಿದೆ. ಅಲ್ಲಿನ ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಪ್ರತ್ಯೇಕವಾಗಿ ಘೋಷಿಸಲಾಗಿತ್ತು.

‘ಸಮಸ್ಯೆ ಆಯೋಗಕ್ಕೆ ಅರ್ಥವಾಗಿದೆ’

ನವದೆಹಲಿ (ಪಿಟಿಐ): ಎಸ್‌ಐಆರ್ ಪ್ರಕ್ರಿಯೆಯನ್ನು ಅಲ್ಪ ಕಾಲಾವಧಿಯಲ್ಲಿ ಮುಗಿಸಲು ಸಾಧ್ಯವಿಲ್ಲ ಎಂಬುದು ಚುನಾವಣಾ ಆಯೋಗಕ್ಕೆ ಅರ್ಥವಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ಆಯೋಗವು ಅಹಂ ಬದಿಗೊತ್ತಿ 2003ರಲ್ಲಿ ನಿಗದಿಪಡಿಸಿದಂತೆ ಎಸ್‌ಐಆರ್ ಪ್ರಕ್ರಿಯೆ ನಡೆಸಬೇಕು ಎಂದು ಕಾಂಗ್ರೆಸ್ ಮುಖಂಡ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ಉಪ ನಾಯಕ ಪ್ರಮೋದ್ ತಿವಾರಿ ಆಗ್ರಹಿಸಿದ್ದಾರೆ.

‘ಎಸ್‌ಐಆರ್ ಕುರಿತು ಚರ್ಚಿಸಲು ಅವಕಾಶವಿಲ್ಲ ಎಂದಾದರೆ, ಸಂಸತ್ ಅಧಿವೇಶನ ನಡೆಯುವುದನ್ನು ಸರ್ಕಾರ ಬಯಸುತ್ತಿಲ್ಲ ಎಂದು ವಿರೋಧ ಪಕ್ಷಗಳು ಭಾವಿಸುತ್ತವೆ’ ಎಂದು ಹೇಳಿದ್ದಾರೆ.

ಪೊಲೀಸರ ಬಗೆಗಿನ ಗ್ರಹಿಕೆ ಬದಲಾಗಬೇಕು: ಪ್ರಧಾನಿ

ರಾಯಪುರ (ಪಿಟಿಐ): ‘ಪೊಲೀಸರ ಕುರಿತು ಜನರಲ್ಲಿ ಪ್ರಮುಖವಾಗಿ ಯುವಕರಲ್ಲಿರುವ ಗ್ರಹಿಕೆ ಬದಲಾಗಬೇಕು. ವೃತ್ತಿಪರತೆ, ಸೂಕ್ಷ್ಮತೆ ಮತ್ತು ಜನರೊಂದಿಗೆ ಬೆರೆಯುವ, ಸ್ಪಂದಿಸುವ ನಡವಳಿಕೆಗಳಿಂದ ಮಾತ್ರವೇ ಗ್ರಹಿಕೆ ಬದಲಾವಣೆ ಸಾಧ್ಯ’ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.

ಇಲ್ಲಿ ನಡೆದ 60ನೇ ಅಖಿಲ ಭಾರತ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ (ಡಿಜಿ–ಐಜಿಪಿ) ಸಮ್ಮೇಳನದಲ್ಲಿ ಅವರು ಭಾನುವಾರ ಮಾತನಾಡಿದರು. ‘ವಿಕಸಿತ ಭಾರತ: ಭದ್ರತಾ ಆಯಾಮಗಳು’ ಎಂಬುದು ಈ ಬಾರಿಯ ವಿಷಯವಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಭಾಗವಹಿಸಿದ್ದರು.

ನಿಷೇಧಿತ ಸಂಘಟನೆಗಳ ಮೇಲೆ ನಿಗಾ ವಹಿಸುವುದು, ನಕ್ಸಲ್ ಮುಕ್ತ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಯನ್ನು ಖಾತರಿಪಡಿಸುವುದು ಮತ್ತು ಕರಾವಳಿ ಭದ್ರತೆಗಾಗಿ ಹೊಸ ಮಾದರಿಗಳನ್ನು ಅನುಸರಿಸುವುದು ಸೇರಿ ಹಲವು ವಿಚಾರಗಳ ಬಗ್ಗೆ ಪ್ರಧಾನಿ ಪೊಲೀಸರಿಗೆ ಕಿವಿ ಮಾತು ಹೇಳಿದರು.

‘ಮನುಷ್ಯರು ವಾಸವಿಲ್ಲದ ದ್ವೀಪಗಳ ಮಾಹಿತಿಗಳೂ ಸೇರಿ ದೇಶದ ಎಲ್ಲ ಪ್ರದೇಶಗಳ ಮಾಹಿತಿ ಗಳಿರುವ ರಾಷ್ಟ್ರೀಯ ಗುಪ್ತಚರ ಗ್ರಿಡ್ (ನ್ಯಾಟ್‌ಗ್ರಿಡ್: ನ್ಯಾಷನಲ್ ಇಂಟೆಲಿಜೆನ್ಸ್ ಗ್ರಿಡ್) ಡಾಟಾಬೇಸ್‌ಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ತುರ್ತಿನ ಸಂದರ್ಭಗಳಲ್ಲಿ ಈ ಮಾಹಿತಿಗಳನ್ನು ಸುಲಭದಲ್ಲಿ ವರ್ಗೀಕರಿಸಿ, ಸಂಗ್ರಹಿಸಿ ಕೊಡುವಂತೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಬೇಕು’ ಎಂದರು.

‘ನಗರ ಪ್ರದೇಶಗಳಲ್ಲಿನ ಪೊಲೀಸರ ಕಾರ್ಯವೈಖರಿಯನ್ನು ಶಕ್ತಿಯುತಗೊಳಿಸಬೇಕಾದ ಅಗತ್ಯವಿದೆ. ಜೊತೆಗೆ, ಪ್ರವಾಸಿಗರ ಭದ್ರತೆಗಾಗಿ ಇರುವ ಪೊಲೀಸ್ ಪಡೆಗೆ ಹೊಸ ಜೀವ ನೀಡಬೇಕಿದೆ’ ಎಂದರು.

ಉತ್ತಮವಾಗಿ ಕಾರ್ಯನಿರ್ವಹಿಸಿದ ಗುಪ್ತಚರ ವಿಭಾಗದ ಅಧಿಕಾರಿಗಳಿಗೆ ಪ್ರಧಾನಿ ಮೋದಿ ಅವರು ರಾಷ್ಟ್ರಪತಿ ಪದಕಗಳನ್ನು ವಿತರಿಸಿದರು. ಕಾನೂನು ಸುವ್ಯವಸ್ಥೆಯು ಉತ್ತಮ ರೀತಿಯಲ್ಲಿದ್ದ ನಗರಗಳನ್ನು ಗುರುತಿಸುವ, ಆ ನಗರಕ್ಕೆ ಪ್ರಶಸ್ತಿ ನೀಡುವ ಪರಿಪಾಟ ಆರಂಭವಾಗಿದ್ದು, ಮೊದಲ ಮೂರು ನಗರಗಳಿಗೆ ಪ್ರಧಾನಿ ಮೋದಿ ಅವರು ಇದೇ ವೇಳೆ ಪ್ರಶಸ್ತಿ ವಿತರಿಸಿದರು.

ದೇಶದಾದ್ಯಂತ ಇರುವ ಎಲ್ಲ ಡಿಜಿ–ಐಜಿಪಿಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಮತ್ತು ಕೇಂದ್ರ ಪೊಲೀಸ್ ಸಂಸ್ಥೆಗಳ ಮುಖ್ಯಸ್ಥರು ಸಮ್ಮೇಳನದಲ್ಲಿ ಹಾಜರಿದ್ದರು. 700ಕ್ಕೂ ಹೆಚ್ಚು ಅಧಿಕಾರಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗವಹಿಸಿದ್ದರು.

2047ರ ವಿಕಸಿತ ಭಾರತದತ್ತ ನೋಟ

- ಭಯೋತ್ಪಾದನೆ ನಿಗ್ರಹ, ಮಹಿಳೆಯರ ಸುರಕ್ಷತೆಗಾಗಿ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುವುದು, ದೇಶದಲ್ಲಿ ಅಪರಾಧ ಮಾಡಿ, ವಿದೇಶಗಳಿಗೆ ಪಲಾಯನ ಮಾಡಿರುವವರನ್ನು ವಾಪಸು ಕರೆತರುವ ಬಗ್ಗೆ ಚರ್ಚೆ ನಡೆಯಿತು. 2047ರ ವಿಕಸಿತ ಭಾರತ ನಿರ್ಮಾಣಕ್ಕಾಗಿ ಪೊಲೀಸ್ ಇಲಾಖೆ ಕೈಗೊಳ್ಳಬೇಕಾದ ಕಾರ್ಯಗಳ ಮಾರ್ಗಸೂಚಿಯ ಬಗ್ಗೆ ಚರ್ಚೆ
- ಮಾದಕವಸ್ತು ಬಳಕೆ ತಡೆ, ಚಂಡಮಾರುತ, ಪ್ರವಾಹ ಸೇರಿದಂತೆ ನೈಸರ್ಗಿಕ ವಿಪತ್ತು ನಿರ್ವಹಣೆಯಲ್ಲಿ ಪೊಲೀಸ್ ಮುಖ್ಯಸ್ಥರು ಸನ್ನದ್ಧರಾಗಿರಬೇಕು. ಇಂಥ ಸಂದರ್ಭಗಳಲ್ಲಿ ಸರ್ಕಾರದ ಎಲ್ಲ ಸಂಸ್ಥೆಗಳೊಂದಿಗೆ ಸಮನ್ವಯದಿಂದ ಕೆಲಸ ಮಾಡಬೇಕು. ಜೊತೆಗೆ, ವಿಪತ್ತಿನ ಸಂದರ್ಭಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ಕಾರ್ಯವಿಧಾನಗಳನ್ನು ಬಳಕೆ ಮಾಡಿಕೊಳ್ಳಬೇಕು

ಅತ್ಯಾಚಾರ ಪ್ರಕರಣ ಕಾಂಗ್ರೆಸ್ ಶಾಸಕನ ಮನೆಯಲ್ಲಿ ಶೋಧ

ಪಾಲಕ್ಕಾಡ್ (ಕೇರಳ) (ಪಿಟಿಐ): ಅತ್ಯಾಚಾರದ ಆರೋಪ ಎದುರಿಸುತ್ತಿರುವ ಕಾರಣದಿಂದ ಅಮಾನತಿಗೊಳಗಾಗಿರುವ ಕಾಂಗ್ರೆಸ್ ಶಾಸಕ ರಾಹುಲ್ ಮಾಂಕೂಟತ್ತಿಲ್ ಅವರ ಅಪಾರ್ಟ್‌ಮೆಂಟ್‌ನಲ್ಲಿ ಪೊಲೀಸರ ತಂಡ ಸಾಕ್ಷ್ಯಗಳನ್ನು ಸಂಗ್ರಹಿಸಲು ಭಾನುವಾರ ಶೋಧ ನಡೆಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ರಾಹುಲ್

ಮೇ ತಿಂಗಳ ಕೊನೆಯ ವಾರದಲ್ಲಿ ಎರಡು ದಿನ ಶಾಸಕ ಮಾಂಕೂಟತ್ತಿಲ್ ಅವರು ಗರ್ಭಿಣಿ ಮೇಲೆ ಈ ಅಪಾರ್ಟ್‌ಮೆಂಟ್‌ನಲ್ಲಿ ಅತ್ಯಾಚಾರ ಎಸಗಿದ್ದಾರೆ ಎಂದು ನವೆಂಬರ್ 28ರಂದು ದಾಖಲಾಗಿರುವ ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ದೂರುದಾರ ಮಹಿಳೆ ಸ್ಥಳಕ್ಕೆ ಭೇಟಿ ನೀಡಿದ್ದರೇ ಎಂಬುದನ್ನು ಪರಿಶೀಲಿಸಲು ಅಪಾರ್ಟ್‌ಮೆಂಟ್‌ನ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಾಂಕೂಟತ್ತಿಲ್ ನಿರೀಕ್ಷಣಾ ಜಾಮೀನು ಕೋರಿ ತಿರುವನಂತಪುರದ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಅದರ ವಿಚಾರಣೆ ಬುಧವಾರ ನಡೆಯಲಿದೆ.

ಕಾಂಗ್ರೆಸ್–ಆರ್‌ಜೆಡಿ ನಡುವೆ ವಾಕ್ಸಮರ

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು: ಆರೋಪ– ಪ್ರತ್ಯಾರೋಪ

ಪಟ್ನಾ (ಪಿಟಿಐ): ಇತ್ತೀಚೆಗೆ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ‘ಮಹಾಘಟಬಂಧನ’ವು ಹೀನಾಯವಾಗಿ ಸೋಲುಂಡ ಬೆನ್ನಲ್ಲೇ, ಕಾಂಗ್ರೆಸ್ ಹಾಗೂ ಆರ್‌ಜೆಡಿ ಪಕ್ಷಗಳ ಮುಖಂಡರ ನಡುವೆ ಆರೋಪ– ಪ್ರತ್ಯಾರೋಪಗಳು ಶುರುವಾಗಿವೆ.

‘ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಬೇಕಿತ್ತು’ ಎಂದು ಕಾಂಗ್ರೆಸ್‌ನ ಮುಖಂಡರು ತಿಳಿಸಿದ್ದರೆ, ‘ನಮ್ಮ ಕೃಪೆಯಿಂದಲೇ ಕಾಂಗ್ರೆಸ್‌ಗೆ ಅಷ್ಟೊಂದು ಮತಗಳು ಸಿಕ್ಕಿವೆ’ ಎಂದು ಆರ್‌ಜೆಡಿ ಮುಖಂಡರು ತಿರುಗೇಟು ನೀಡಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣೆಯಲ್ಲಿ 243 ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟವು 202 ಕ್ಷೇತ್ರಗಳಲ್ಲಿ ಗೆಲುವು ಪಡೆದಿದೆ. ಮಹಾ ಘಟಬಂಧನವು 35 ಕ್ಷೇತ್ರಗಳಲ್ಲಿ ಜಯ ಗಳಿಸಿದೆ. ಆರ್‌ಜೆಡಿಯು 25 ಹಾಗೂ ಕಾಂಗ್ರೆಸ್‌ನ ಆರು ಅಭ್ಯರ್ಥಿಗಳು ಗೆದ್ದಿದ್ದಾರೆ.


‘ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸಬೇಕಿತ್ತು’ ಎಂದು ಸೋಲಿನ ಕುರಿತು ಪರಾಮರ್ಶೆ ನಡೆಸಲು ಹೈಕಮಾಂಡ್ ಕರೆದಿದ್ದ ಸಭೆಯಲ್ಲಿ ಕಾಂಗ್ರೆಸ್‌ನ ಕೆಲವು ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

‘ನಾವು ಆರ್‌ಜೆಡಿಯ ಜೊತೆಗೆ ಮೈತ್ರಿ ಮಾಡಿಕೊಳ್ಳದಿದ್ದರೆ, ಚುನಾವಣೆಯಲ್ಲಿ ಇದಕ್ಕಿಂತ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಿತ್ತು. ಚುನಾವಣೆಯಲ್ಲಿ ಸ್ಪರ್ಧಿಸಿದ್ದ 61 ಅಭ್ಯರ್ಥಿಗಳ ಅಭಿಪ್ರಾಯವೂ ಇದೇ ಆಗಿದೆ. ಭವಿಷ್ಯದ ಕಾರ್ಯತಂತ್ರಗಳ ಕುರಿತು ಪಕ್ಷದ ಹೈಕಮಾಂಡ್ ನಿರ್ಧರಿಸಬೇಕು’ ಎಂದು ಕಾಂಗ್ರೆಸ್ ಮುಖಂಡ ಶಕೀಲ್ ಅಹಮ್ಮದ್ ಖಾನ್ ತಿಳಿಸಿದ್ದಾರೆ.

ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿಯೂ ಕೆಲಸ ಮಾಡಿ ಅನುಭವ ಹೊಂದಿದ್ದ ಶಕೀಲ್ ಅವರು ಕಡ್ವಾ ವಿಧಾನಸಭಾ ಕ್ಷೇತ್ರದಿಂದ ಸತತ ಮೂರನೇ ಅವಧಿಗೆ ಆಯ್ಕೆಯಾಗುವ ವಿಶ್ವಾಸದಲ್ಲಿದ್ದರು. ಜೆಡಿಯುನ ದುಲಾಲ್ ಚಂದ್ರ ಗೋಸ್ವಾಮಿ ವಿರುದ್ಧ 18 ಸಾವಿರ ಮತಗಳಿಂದ ಸೋಲುಂಡರು.

ಆರ್‌ಜೆಡಿ ಆಡಳಿತದ ಅವಧಿಯಲ್ಲಿ ಕಾನೂನು– ಸುವ್ಯವಸ್ಥೆ ಹದಗೆಟ್ಟು, ‘ಜಂಗಲ್ ರಾಜ್’ ಸೃಷ್ಟಿಯಾಗಿದ್ದನ್ನು ಜನಸಾಮಾನ್ಯರಿಗೆ ಎನ್‌ಡಿಎ ಮೈತ್ರಿಕೂಟವು ಜಾಗೃತಿ ಮೂಡಿಸಿದ್ದರಿಂದಲೇ ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿಗೂ ಕಾರಣವಾಯಿತು ಎಂದು ಸಭೆಯಲ್ಲಿ ಭಾಗವಹಿಸಿದ ಹಲವು ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಮಂಡಲ್ ರಾಜಕಾರಣದಲ್ಲಿ ಮುಂಚೂಣಿಗೆ ಬಂದಿದ್ದ ಲಾಲೂ ಪ್ರಸಾದ್ ಆಡಳಿತದ ಅವಧಿಯಲ್ಲಿ ಮೇಲ್ಜಾತಿಯ ಮತದಾರರು ಕಾಂಗ್ರೆಸ್ ಕಡೆಗೆ ವಾಲಿದ್ದರು. ಆರ್‌ಜೆಡಿ ಜೊತೆಗೆ ಪಕ್ಷ ಮೈತ್ರಿ ಮಾಡಿಕೊಂಡ ಕಾರಣ ಅವರೆಲ್ಲರೂ ಬಿಜೆಪಿ ಕಡೆಗೆ ವಾಲಿದ್ದಾರೆ ಎಂದು ಕೆಲವು ಮುಖಂಡರು ಸಭೆಯಲ್ಲಿ ತಿಳಿಸಿದ್ದಾರೆ.



ಬಿಹಾರದ ನಳಂದ ಜಿಲ್ಲೆಯಲ್ಲಿ ಕಲ್ಯಾಣ್ ಬಿಘ ಗ್ರಾಮದಲ್ಲಿರುವ ತಮ್ಮ ತಂದೆ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕವಿರಾಜ್ ರಾಮ್‌ಲಖನ್ ಸಿಂಗ್ ಅವರ ಪ್ರತಿಮೆಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಪುಷ್ಪ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ಚುನಾವಣೆ ವೇಳೆ ಆರ್‌ಜೆಡಿ–ಕಾಂಗ್ರೆಸ್ ಹೋರಾಡುತ್ತಿದ್ದವು, ಈಗಲೂ ಮುಂದುವರಿದಿದೆ. ಮೈತ್ರಿ ಕೂಟಕ್ಕೆ ಸೈದ್ಧಾಂತಿಕ ಹಿನ್ನೆಲೆ ಇಲ್ಲ
ಸೈಯದ್ ಶಹನವಾಜ್ ಹುಸೇನ್
ಬಿಜೆಪಿ ರಾಷ್ಟ್ರೀಯ ವಕ್ತಾರ

ಕಾಂಗ್ರೆಸ್‌ಗೆ ಆರ್‌ಜೆಡಿ ತಿರುಗೇಟು

‘ಕಾಂಗ್ರೆಸ್ ಏಕಾಂಗಿಯಾಗಿ ಸ್ಪರ್ಧಿಸಲು ಮುಂದಾದರೆ, ಎಲ್ಲ ರೀತಿಯಿಂದಲೂ ಅದೇ ರೀತಿ ಮಾಡಬೇಕು. ಆಗಲೇ, ಅದರ ನಿಜವಾದ ಮೌಲ್ಯ (ಔಕಾತ್) ತಿಳಿಯುತ್ತದೆ’ ಎಂದು ಆರ್‌ಜೆಡಿಯ ರಾಜ್ಯ ಘಟಕದ ಅಧ್ಯಕ್ಷ ಮಂಗಾನಿ ಲಾಲ್ ಮಂಡಾನಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಎಷ್ಟು ಮತಗಳು ಸಿಕ್ಕಿವೆಯೋ, ಅವೆಲ್ಲವೂ ಆರ್‌ಜೆಡಿಯ ಕೃಪೆಯಿಂದಲೇ ದಕ್ಕಿವೆ. ಚುನಾವಣೆಯಿಂದ ಚುನಾವಣೆಗೆ ಅವರ ಬೇಡಿಕೆ ಹೆಚ್ಚಾಗುತ್ತಲೇ ಹೋಯಿತು. ಕಳೆದ ಸಲ 70ರಲ್ಲಿ ಸ್ಪರ್ಧಿಸಿ, 19ರಲ್ಲಿ ಗೆದ್ದಿದ್ದರು. ಈ ಸಲ ಅವರ ಪ್ರದರ್ಶನ ಶೋಚನೀಯವಾಗಿದೆ’ ಎಂದು ಕಿಡಿಕಾರಿದ್ದಾರೆ.

ಸೀಟು ಹಂಚಿಕೆ ಗೊಂದಲ: ಮತದಾನದ ಹಿಂದಿನ ದಿನದವರೆಗೂ ಮಹಾಘಟಬಂಧನದಲ್ಲಿ ಸೀಟು ಹಂಚಿಕೆ ಸುಸೂತ್ರವಾಗಿ ನಡೆದಿರಲಿಲ್ಲ. ಡಜನ್‌ಗೂ ಅಧಿಕ ಕ್ಷೇತ್ರಗಳಲ್ಲಿ ಪರಸ್ಪರ ‘ಸ್ನೇಹ’ದ ಹೋರಾಟಗಳನ್ನು ನಡೆಸಿದ್ದು ಕೂಡ ಸೋಲಿಗೆ ಕಾರಣವಾಯಿತು ಎಂದು ಉಭಯ ಪಕ್ಷಗಳ ಮುಖಂಡರು ಒಪ್ಪಿಕೊಂಡಿದ್ದಾರೆ.

ಪ್ರಿಯಕರನ ಶವ ವರಿಸಿದ ಪ್ರೇಯಸಿ

ನಾಂದೇಡ್ (ಪಿಟಿಐ): ತನ್ನ ತಂದೆ ಹಾಗೂ ಸಹೋದರರಿಂದಲೇ ಕೊಲೆಯಾದ ಪ್ರಿಯಕರನ ಶವವನ್ನೇ ಯುವತಿಯೊಬ್ಬರು ಮಹಾರಾಷ್ಟ್ರದ ನಾಂದೇಡ್‌ನಲ್ಲಿ ವರಿಸಿದ್ದಾರೆ.

ಆಂಚಲ್ ಮಾಮಿಡ್ವಾರ್ (21) ಪ್ರಿಯಕರನ ಶವವನ್ನು ಮದುವೆಯಾದ ಯುವತಿ. ಸಕ್ಷಮ್ ತಾಟೆ (20) ಕೊಲೆಯಾದ ಯುವಕ.

ತನ್ನ ಪ್ರಿಯಕರನನ್ನು ಕೊಂದ ತಂದೆ, ಸಹೋದರರನ್ನು ಗಲ್ಲಿಗೇರಿಸಬೇಕು ಎಂದು ಸಕ್ಷಮ್ ತಾಟೆ ನಿವಾಸದಲ್ಲಿ ಆಂಚಲ್ ಆಗ್ರಹಿಸಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದೆ.

ನಗರದ ಓಲ್ಡ್ ಗಂಜ್ ಪ್ರದೇಶದಲ್ಲಿ ಸಕ್ಷಮ್ ತಾಟೆ ಗುರುವಾರ ಸಂಜೆ ತನ್ನ ಗೆಳೆಯರೊಂದಿಗೆ ನಿಂತಿದ್ದಾಗ ಆಂಚಲ್‌ನ ಸಹೋದರ ಹಿಮೇಶ್ ಮಾಮಿಡ್ವಾರ್ ಜಗಳ ತೆಗೆದು ಗುಂಡು ಹಾರಿಸಿದ್ದಾನೆ. ಸ್ಥಳದಲ್ಲೇ ತಾಟೆ ಮೃತಪಟ್ಟಿದ್ದು, ಹಿಮೇಶ್, ಆತನ ಸಹೋದರ ಸಾಹಿಲ್ ಹಾಗೂ ಅವರ ತಂದೆ ಗಜಾನನ ಮಾಮಿಡ್ವಾರ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಕ್ಷಮ್‌ನ ಅಂತ್ಯಸಂಸ್ಕಾರಕ್ಕೆ ಸಂಬಂಧಿಸಿದ ಧಾರ್ಮಿಕ ವಿಧಿವಿಧಾನಗಳು ಶುಕ್ರವಾರ ಸಂಜೆ ಆತನ ಮನೆಯಲ್ಲೇ ನಡೆಯುತ್ತಿದ್ದಾಗ ಅಲ್ಲಿಗೆ ಬಂದ ಆಂಚಲ್, ‘ನನ್ನ ಪ್ರೀತಿ ಅಮರವಾದುದು. ನಾನು ಎಂದೆಂದೂ ತಾಟೆಯ ಪತ್ನಿ ಎಂದು ಹೇಳಿಕೊಂಡು, ಶವದೊಟ್ಟಿಗೆ ವಿವಾಹವಾದಳು’ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

‘ಮೂರು ವರ್ಷಗಳಿಂದ ಸಕ್ಷಮ್‌ನನ್ನು ಪ್ರೀತಿಸುತ್ತಿದ್ದೆ. ಆದರೆ ನನ್ನ ತಂದೆ ಜಾತಿಯ ಕಾರಣಕ್ಕೆ ನಮ್ಮ ಪ್ರೀತಿಯನ್ನು ವಿರೋಧಿಸುತ್ತಿದ್ದರು. ಆತನ ಒಡನಾಟದಿಂದ ದೂರವಾಗದಿದ್ದರೆ ಕೊಲ್ಲುವುದಾಗಿಯೂ ಬೆದರಿಸಿದ್ದರು. ಅದರಂತೆ ನನ್ನ ಪ್ರಿಯತಮನನ್ನು ಕೊಂದಿದ್ದಾರೆ. ನನಗೆ ನ್ಯಾಯಬೇಕು. ಕೊಲೆ ಮಾಡಿದ ಅಪ್ಪ, ಸಹೋದರರನ್ನು ಗಲ್ಲಿಗೇರಿಸಬೇಕು’ ಎಂದು ಆಂಚಲ್ ಸುದ್ದಿಗಾರರಿಗೆ ತಿಳಿಸಿದರು.

‘ಇನ್ನು ಮುಂದೆ ನಾನು ಸಕ್ಷಮ್‌ನ ಮನೆಯಲ್ಲೇ ಇರುತ್ತೇನೆ’ ಎಂದೂ ಹೇಳಿದ್ದಾರೆ.

ಮದಾನಿ ಹೇಳಿಕೆಗೆ ಖಂಡನೆ

ಬಾರಾಬಂಕಿ/ಬರೇಲಿ (ಉತ್ತರ ಪ್ರದೇಶ) (ಪಿಟಿಐ): ಸರ್ಕಾರದ ಬುಲ್ಡೋಜರ್ ಕ್ರಮ ಮತ್ತು ‘ಜಿಹಾದ್’ ಪದದ ಕುರಿತ ಜಮೀಯತ್ ಉಲೇಮಾ ಎ ಹಿಂದ್ ಮುಖ್ಯಸ್ಥ ಮಹಮೂದ್ ಮದಾನಿ ಅವರ ಇತ್ತೀಚಿನ ಹೇಳಿಕೆಯನ್ನು ಪಸ್ಮಾಂಡ ಮುಸ್ಲಿಂ ನಾಯಕರು ಖಂಡಿಸಿದ್ದಾರೆ. ಅವರ ಹೇಳಿಕೆ ಸಮುದಾಯದಲ್ಲಿ ಅಶಾಂತಿಯನ್ನು ಪ್ರಚೋದಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಮದಾನಿ ಅವರ ಹೇಳಿಕೆಗಳನ್ನು ಟೀಕಿಸಿರುವ ಅಖಿಲ ಭಾರತ ಪಸ್ಮಾಂಡ ಮುಸ್ಲಿಂ ಮಹಾಜ್‌ನ ರಾಷ್ಟ್ರೀಯ ಉಪಾಧ್ಯಕ್ಷ ವಾಸಿಂ ರಯೀನ್, ‘ಅವು ಪ್ರಚೋದನಕಾರಿ ಮತ್ತು ಮುಸ್ಲಿಮರನ್ನು ದಾರಿತಪ್ಪಿಸುವ ಗುರಿಯನ್ನು ಹೊಂದಿವೆ’ ಎಂದು ಹೇಳಿದ್ದಾರೆ.

‘ಪಸ್ಮಾಂಡ ಮುಸ್ಲಿಮರು ಈ ಬಲೆಗಳಿಗೆ ಬೀಳುವುದಿಲ್ಲ. ಅವರು ದೇಶಭಕ್ತರಾಗಿದ್ದು, ದೇಶ ಮತ್ತು ಸರ್ಕಾರದೊಂದಿಗೆ ನಿಲ್ಲಲಿದ್ದಾರೆಯೇ ಹೊರತು ವಿದೇಶಿ ಹಿತಾಸಕ್ತಿಗಳೊಂದಿಗೆ ಅಲ್ಲ’ ಎಂದಿದ್ದಾರೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಶನಿವಾರ ನಡೆದ ಜಮೀಯತ್ ಸಭೆಯಲ್ಲಿ ಮಾತನಾಡಿದ್ದ ಮದಾನಿ, ‘ಸರ್ಕಾರದ ಬುಲ್ಡೋಜರ್ ಕ್ರಮಗಳ ಮೂಲಕ ದೇಶದಲ್ಲಿ ಪ್ರಾಬಲ್ಯ ಸ್ಥಾಪಿಸಲು ಯತ್ನಿಸಲಾಗುತ್ತಿವೆ’ ಎಂದು ಆರೋಪಿಸಿದ್ದರು.

ಜಿಹಾದ್ ಎಂದರೆ, ‘ದೌರ್ಜನ್ಯ, ದಬ್ಬಾಳಿಕೆಯ ವಿರುದ್ಧ ಶಾಂತಿ, ನ್ಯಾಯ, ಮಾನವನ ಘನತೆಗಾಗಿ ನಡೆಸುವ ಹೋರಾಟ’ ಎಂದು ಸಭೆಯ ನಿರ್ಣಯದಲ್ಲಿ ತಿಳಿಸಲಾಗಿತ್ತು.

ನ್ಯಾಷನಲ್ ಹೆರಾಲ್ಡ್: ಸೋನಿಯಾ, ರಾಹುಲ್ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ಸೋನಿಯಾ, ರಾಹುಲ್, ಕಾಂಗ್ರೆಸ್ ನಾಯಕರಾದ ಸುಮನ್ ದುಬೆ, ಸ್ಯಾಮ್ ಪಿತ್ರೋಡಾ, ‘ಯಂಗ್ ಇಂಡಿಯನ್’ ಮತ್ತು ‘ಡಾಟೆಕ್ಸ್ ಮರ್ಚಂಡೈಸ್ ಲಿಮಿಟೆಡ್’, ‘ಡಾಟೆಕ್ಸ್’ನ ಪ್ರವರ್ತಕ ಸುನಿಲ್ ಭಂಡಾರಿ, ‘ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್’ (ಎಜೆಎಲ್) ಮತ್ತು ಇತರ ಅಪರಿಚಿತರ ವಿರುದ್ಧ ಐಪಿಸಿ ಕಲಂ 120ಬಿ (ಕ್ರಿಮಿನಲ್ ಪಿತೂರಿ), 403 (ಆಸ್ತಿಯ ದುರುಪಯೋಗ), 406 (ನಂಬಿಕೆ ಉಲ್ಲಂಘನೆ), 420 (ವಂಚನೆ) ಅಡಿಯಲ್ಲಿ ಆರೋಪ ಹೊರಿಸಲಾಗಿದೆ.

‘ಜಾರಿ ನಿರ್ದೇಶನಾಲಯವು ಏಪ್ರಿಲ್‌ನಲ್ಲಿ ದೆಹಲಿ ನ್ಯಾಯಾಲಯಕ್ಕೆ ಹಲವರ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಪ್ರಕಟಿಸುತ್ತಿದ್ದ ಅಸೋಸಿಯೇಟೆಡ್ ಜರ್ನಲ್ಸ್‌ಗೆ ಸೇರಿದ ಸುಮಾರು ₹2,000 ಕೋಟಿ ಮೌಲ್ಯದ ಆಸ್ತಿಯನ್ನು ಆರೋಪಿಗಳೆಲ್ಲರೂ ಸೇರಿ ತಮ್ಮ ವಶಕ್ಕೆ ಪಡೆದಿದ್ದಾರೆ. ಯಂಗ್ ಇಂಡಿಯನ್ ಸಂಸ್ಥೆಯಲ್ಲಿ ಸೋನಿಯಾ ಹಾಗೂ ರಾಹುಲ್ ಗಾಂಧಿ ತಲಾ ಶೇ 38ರಷ್ಟು ಷೇರು ಹೊಂದಿದ್ದಾರೆ’ ಎಂದು ಇ.ಡಿ ಆರೋಪಪಟ್ಟಿಯಲ್ಲಿ ಉಲ್ಲೇಖಿಸಿದೆ. ಈ ಆರೋಪಪಟ್ಟಿಯನ್ನು ವಿಚಾರಣೆಗೆ ಅಂಗೀಕರಿಸುವ ಕುರಿತು ವಿಚಾರಣೆ ಪೂರ್ಣಗೊಳಿಸುವ ವಿಶೇಷ ನ್ಯಾಯಾಲಯ, ಆದೇಶ ಪ್ರಕಟಣೆಯನ್ನು ಡಿಸೆಂಬರ್ 16ಕ್ಕೆ ಕಾಯ್ದಿರಿಸಿದೆ.

ಇ.ಡಿಯು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಕಲಂ 66(2)ರ ಅಡಿಯಲ್ಲಿ ಲಭ್ಯವಿರುವ ಅಧಿಕಾರ ಬಳಸಿಕೊಂಡು ಪೊಲೀಸರಿಂದ ಈಗ ಎಫ್‌ಐಆರ್ ದಾಖಲಿಸುವಂತೆ ಮಾಡಿದೆ. ಈ ಎಫ್‌ಐಆರ್, ಇ.ಡಿ ದಾಖಲಿಸಿರುವ ಆರೋಪಪಟ್ಟಿ ಮತ್ತು ಪ್ರಕರಣವನ್ನು ಇನ್ನಷ್ಟು ಬಲಗೊಳಿಸಲಿದೆ ಎಂದು ಮೂಲಗಳು ತಿಳಿಸಿವೆ.

ಸೇಡಿನ ರಾಜಕಾರಣ: ಕಾಂಗ್ರೆಸ್

ಒಂದನೇ ಪುಟದಿಂದ...

ಎಫ್‌ಐಆರ್ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್ ವಕ್ತಾರ ಮತ್ತು ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ವೈನ್ ಹೊಸದಲ್ಲ, ಬಾಟಲಿಯೂ ಹೊಸದಲ್ಲ, ಗ್ಲಾಸ್ ಕೂಡ ಹೊಸದಲ್ಲ’ ಎಂದು ವ್ಯಂಗ್ಯವಾಡಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಇಲ್ಲಿ ಹಣ ವರ್ಗಾವಣೆ ಆಗಿಲ್ಲ, ಸ್ಥಿರಾಸ್ತಿಯೂ ವರ್ಗಾವಣೆ ಆಗಿಲ್ಲ. ಆದರೂ ಇದೊಂದು ಅದ್ಭುತ ಪ್ರಕರಣ’ ಎಂದು ಟೀಕಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

37 ನಕ್ಸಲರು ಶರಣಾಗತಿ

ದಂತೇವಾಡ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ದಂತೇವಾಡ ಜಿಲ್ಲೆಯಲ್ಲಿ 37 ನಕ್ಸಲರು ಅಧಿಕಾರಿಗಳ ಮುಂದೆ ಭಾನುವಾರ ಶರಣಾಗಿದ್ದಾರೆ. ಇವರಲ್ಲಿ 27 ಜನರ ಸುಳಿವು ನೀಡಿದವರಿಗೆ ಒಟ್ಟಾರೆ ₹65 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರಲು ಆರಂಭಿಸಿದ ಪುನರ್ವಸತಿ ಯೋಜನೆಯಡಿ 12 ಮಹಿಳೆಯರು ಸೇರಿದಂತೆ ನಕ್ಸಲರು ಹಿರಿಯ ಪೊಲೀಸ್ ಅಧಿಕಾರಿ ಮತ್ತು ಸಿಆರ್‌ಪಿಎಫ್ ಅಧಿಕಾರಿಗಳ ಮುಂದೆ ಶರಣಾಗಿದ್ದಾರೆ ಎಂದು ದಂತೇವಾಡ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರಾಯ್ ತಿಳಿಸಿದ್ದಾರೆ.

ಎರಡು ಬಸ್ ಡಿಕ್ಕಿ: 11 ಸಾವು



ಶಿವಗಂಗಾ (ಪಿಟಿಐ): ತಮಿಳುನಾಡಿನಲ್ಲಿ ಎರಡು ಸರ್ಕಾರಿ ಬಸ್ಸುಗಳು ಮುಖಾಮುಖಿ ಡಿಕ್ಕಿಯಾಗಿ 11 ಮಂದಿ ಸಾವಿಗೀಡಾಗಿದ್ದು, 20 ಮಂದಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರಲ್ಲಿ 8 ಮಂದಿ ಮಹಿಳೆಯರು ಹಾಗೂ ಇಬ್ಬರು ಪುರುಷರು ಎಂದು ಪೊಲೀಸರು ಭಾನುವಾರ ತಿಳಿಸಿದರು.

ಕಾರೈಕುಡಿಯಿಂದ 15 ಕಿ.ಮೀ ದೂರದಲ್ಲಿ ಅಪಘಾತ ಸಂಭವಿಸಿದೆ. ಘಟನೆಗೆ ನಿಖರ ಕಾರಣ ತಿಳಿದು ಬಂದಿಲ್ಲ.

‘ಮದ್ಯದಂಗಡಿ ತೆರೆದ ಸರ್ಕಾರ’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸರ್ಕಾರದ ವಿರುದ್ಧ ಸಿಪಿಎಂ ಹಮ್ಮಿಕೊಂಡಿರುವ ‘ಬಂಗಾಳ ಬಚಾವೋ ಯಾತ್ರಾ’ (ಬಂಗಾಳವನ್ನು ರಕ್ಷಿಸಿ) ರ‍್ಯಾಲಿಯು ಜಲ್‌ಪೈಗುರಿ ಜಿಲ್ಲೆಯಲ್ಲಿ ಭಾನುವಾರ ನಡೆಯಿತು.

‘ಟಿಎಂಸಿ ಸರ್ಕಾರವು ಉದ್ಯೋಗ ಸೃಷ್ಟಿಸುವಲ್ಲಿ ವಿಫಲವಾಗಿದೆ. ಕಳೆದ 14 ವರ್ಷದಲ್ಲಿ 3,822ಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಲಾಗಿದೆ. ಆದರೆ ಇದೇ ಅವಧಿಯಲ್ಲಿ 22,000 ಮದ್ಯದ ಅಂಗಡಿಗಳನ್ನು ತೆರೆಯಲಾಗಿದೆ’ ಎಂದು ಪಕ್ಷದ ರಾಷ್ಟ್ರೀಯ ಸಮಿತಿ ಸದಸ್ಯರಾದ ಮೀನಾಕ್ಷಿ ಆರೋಪಿಸಿದರು.

ತಮಿಳು ಕಲಿಯಿರಿ: ಪ್ರಧಾನಿ

ನವದೆಹಲಿ (ಪಿಟಿಐ): ವಾರಾಣಸಿಯಲ್ಲಿ ನಡೆಯುವ ಕಾಶಿ– ತಮಿಳು ಸಂಗಮ ಕಾರ್ಯಕ್ರಮದಲ್ಲಿ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ, ತಮಿಳು ಕಲಿಯಲು ಅವಕಾಶವನ್ನು ಪಡೆದುಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಒತ್ತಾಯಿಸಿದರು.

ನಾಲ್ಕನೇ ಆವೃತ್ತಿಯ ಕಾಶಿ– ತಮಿಳು ಸಂಗಮವು ವಾರಾಣಸಿಯ ನಮೋ ಘಾಟ್‌ನಲ್ಲಿ ಡಿಸೆಂಬರ್ 2ರಿಂದ ಆರಂಭವಾಗಲಿದೆ ಎಂದು ಮೋದಿ ಅವರು ‘ಮನ್ ಕಿ ಬಾತ್’ನಲ್ಲಿ ತಿಳಿಸಿದರು. ಈ ಕಾರ್ಯಕ್ರಮವು ವಿಶ್ವದ ಹಳೆಯ ಭಾಷೆ ಮತ್ತು ವಿಶ್ವದ ಹಳೆಯ ನಗರದ ಸಂಗಮವಾಗಿದೆ. ತಮಿಳು ಭಾಷೆಯನ್ನು ಪ್ರೀತಿಸುವವರೆಲ್ಲರಿಗೂ ಈ ಕಾರ್ಯಕ್ರಮ ಒಂದು ಪ್ರಮುಖ ವೇದಿಕೆಯಾಗುತ್ತದೆ’ ಎಂದು ಮೋದಿ ಹೇಳಿದ್ದಾರೆ.

11 ನುಸುಳುಕೋರರು ರಾಜ್ಯದಿಂದ ಹೊರಕ್ಕೆ: ಹಿಮಂತ ಬಿಸ್ವ ಶರ್ಮಾ

ಗುವಾಹಟಿ (ಪಿಟಿಐ): ಹನ್ನೊಂದು ನುಸುಳುಕೋರರನ್ನು ರಾಜ್ಯದಿಂದ ಹೊರಹಾಕಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಭಾನುವಾರ ತಿಳಿಸಿದ್ದಾರೆ. ಮಧ್ಯರಾತ್ರಿ ನಡೆದ ಕಾರ್ಯಾಚರಣೆಯಲ್ಲಿ ಶ್ರೀಭೂಮಿ ಪೊಲೀಸರು ನುಸುಳುಕೋರರನ್ನು ವಾಪಸ್ ಕಳುಹಿಸಿದ್ದಾರೆ ಎಂದು ಶರ್ಮಾ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಹಿಂದಿ ಬ್ಲಾಕ್ ಬಸ್ಟರ್ ಚಲನಚಿತ್ರ ಮತ್ತು ಬ್ಲಾಕ್ ಬಸ್ಟರ್ ನಿರ್ದೇಶಕರನ್ನು ರಾಜ್ಯ ಪೊಲೀಸರಿಗೆ ಹೋಲಿಸುವ ಮೂಲಕ ಪೊಲೀಸ್ ಪಡೆಯನ್ನು ಶರ್ಮಾ ಅವರು ಶ್ಲಾಘಿಸಿದ್ದಾರೆ. ಶ್ರೀಭೂಮಿ ಜಿಲ್ಲೆಯು ಬಾಂಗ್ಲಾದೇಶದೊಂದಿಗೆ ಗಡಿ ಹಂಚಿಕೊಂಡಿದೆ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.

-ತೀ.ನಂ. ಶ್ರೀಕಂಠಯ್ಯ

ಸಂಪಾದಕೀಯ

ಕ್ಷಯದ ತಡೆಗೆ ದಿಟ್ಟ ಹೋರಾಟ ಸಾಗಬೇಕಾದ ದಾರಿ ಇನ್ನೂ ಇದೆ

ಕ್ಷಯರೋಗ (ಟಿಬಿ) ವಿರುದ್ಧದ ಹೋರಾಟದಲ್ಲಿ ಭಾರತ ಗಣನೀಯ ಪ್ರಗತಿ ಸಾಧಿಸಿದೆ. ಆದರೂ, ಉದ್ದೇಶಿತ ಗುರಿ ಸಾಧನೆಗಾಗಿ ಇನ್ನೂ ಸಾಕಷ್ಟು ಹೋರಾಟ ನಡೆಸಬೇಕಾಗಿರುವ ಗಂಭೀರ ಆರೋಗ್ಯ ಸವಾಲುಗಳಲ್ಲೊಂದಾಗಿ ಕ್ಷಯ ಉಳಿದಿರುವುದನ್ನು 'ವಿಶ್ವ ಆರೋಗ್ಯ ಸಂಸ್ಥೆ'ಯ (ಡಬ್ಲ್ಯುಎಚ್‌ಒ) 2025ರ ಜಾಗತಿಕ ಕ್ಷಯರೋಗ ವರದಿ ತಿಳಿಸಿದೆ. ಕಾಯಿಲೆಯ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಇಳಿಕೆ ಪ್ರಮಾಣವನ್ನು ಭಾರತ ಸಾಧಿಸಿದ್ದರೂ, ವಿಶ್ವದ ಒಟ್ಟು ಟಿಬಿ ಪ್ರಕರಣಗಳಲ್ಲಿ ಶೇ 25ರಷ್ಟು ಭಾರತದಲ್ಲಿಯೇ ವರದಿಯಾಗುತ್ತಿವೆ. 2015ರಲ್ಲಿ 1 ಲಕ್ಷ ಜನರಿಗೆ 235 ರೋಗ ಪ್ರಕರಣಗಳು ದಾಖಲಾಗಿದ್ದರೆ, 2024ರ ವೇಳೆಗೆ ಆ ಪ್ರಮಾಣ 187ಕ್ಕೆ ಇಳಿಕೆಯಾಗಿದೆ. ವಾರ್ಷಿಕ ಇಳಿಕೆಯ ಪ್ರಮಾಣ ಸರಾಸರಿ ಶೇ 3ರಷ್ಟಿದೆ. ರೋಗಪತ್ತೆ ಪ್ರಮಾಣವೂ ಹೆಚ್ಚಾಗಿರುವುದರ ಜೊತೆಗೆ, ಚಿಕಿತ್ಸೆ ಸುಲಭವಾಗಿ ಮತ್ತು ವ್ಯಾಪಕವಾಗಿ ಲಭಿಸುತ್ತಿದೆ. 2015ರಲ್ಲಿ 1 ಲಕ್ಷಕ್ಕೆ 28ರಷ್ಟಿದ್ದ ಸಾವಿನ ಪ್ರಮಾಣ 2024ರಲ್ಲಿ 21ಕ್ಕೆ ಕುಸಿದಿದೆ. ಈ ಎಲ್ಲ ಸಕಾರಾತ್ಮಕ ಬೆಳವಣಿಗೆಯ ಜೊತೆಯಲ್ಲಿಯೇ ಕೆಲವು ಆತಂಕಕಾರಿ ಸಂಗತಿಗಳನ್ನು ಗಮನಿಸಬೇಕಾಗಿದೆ. ಕ್ಷಯರೋಗ ಈಗಲೂ ದೇಶದ ಬಹುದೊಡ್ಡ ಸಾಂಕ್ರಾಮಿಕವಾಗಿ ಉಳಿದಿದೆ. ಕ್ಷಯದಿಂದ ಉಂಟಾಗುವ ಒಟ್ಟು ಸಾವುಗಳಲ್ಲಿ ಮೂರನೇ ಒಂದು ಭಾಗದಷ್ಟು ಪ್ರಕರಣಗಳು ಭಾರತದಲ್ಲೇ ಸಂಭವಿಸುತ್ತಿದ್ದು, ಪ್ರತಿವರ್ಷ ಸುಮಾರು 5 ಲಕ್ಷ ಜನರು ಈ ಕಾಯಿಲೆಗೆ ಬಲಿಯಾಗುತ್ತಿದ್ದಾರೆ.



ಕ್ಷಯರೋಗ ತಡೆ ಆಂದೋಲನದಲ್ಲಿ ಗಣನೀಯ ಪ್ರಗತಿ ಸಾಧಿಸಿದ್ದರೂ, ವಿಶ್ವದ ನಾಲ್ಕನೇ ಒಂದರಷ್ಟು ಪ್ರಕರಣಗಳು ಭಾರತದಿಂದಲೇ ಬೆಳಕಿಗೆ ಬರುತ್ತಿರುವುದು ಕಳವಳಕಾರಿ.

ರೋಗಿಯು ಕಾರಣಾಂತರದಿಂದ ಮಧ್ಯದಲ್ಲಿ ಚಿಕಿತ್ಸೆ ನಿಲ್ಲಿಸಿದರೆ ಆತನ ದೇಹದೊಳಗೆ ರೋಗಾಣುಗಳ ಸಂಖ್ಯೆ ಹೆಚ್ಚಾಗಿ 'ಎಂಡಿಆರ್‌-ಟಿಬಿ' ಆಗುವ ಸಾಧ್ಯತೆ ಇರುತ್ತದೆ. ಕ್ಷಯರೋಗದ ಸಾಮಾನ್ಯ ಪ್ರಕರಣಗಳಿಗಿಂತಲೂ ಎಂಡಿಆರ್‌-ಟಿಬಿ ಪ್ರಕರಣಗಳ ನಿಯಂತ್ರಣದಲ್ಲಿ ಭಾರತದ ಸಾಧನೆ ಕಳಪೆಯಾಗಿದೆ. ಜಾಗತಿಕ ಎಂಡಿಆರ್‌-ಟಿಬಿ ಪ್ರಕರಣಗಳಲ್ಲಿ ಭಾರತದ ಪಾಲು ಶೇ 32ರಷ್ಟಿದೆ. ಈ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೂ, ಮರಣ ಪ್ರಮಾಣ ಹೆಚ್ಚಾಗಿರುವುದು ಕಳವಳಕ್ಕೆ ಕಾರಣವಾಗಿದೆ. ಜಾಗತಿಕವಾಗಿ ಕ್ಷಯರೋಗ ನಿರ್ಮೂಲನೆಗೆ 2030ರ ಗಡುವನ್ನು ಗೊತ್ತುಪಡಿಸಲಾಗಿದ್ದರೂ, ಆ ಅವಧಿಯನ್ನು ಭಾರತ 2025ಕ್ಕೆ ನಿಗದಿಪಡಿಸಿಕೊಂಡಿತ್ತು. ಕಾರ್ಯಸಾಧುವಲ್ಲದ ಗುರಿಯನ್ನು ಗಡುವಿನೊಳಗೆ ಮುಟ್ಟುವುದಕ್ಕೆ ಅಗತ್ಯವಾದ ಕಾರ್ಯತಂತ್ರಗಳ ಕೊರತೆಯ ಕಾರಣದಿಂದಾಗಿ, ಉದ್ದೇಶಿತ ಗುರಿಸಾಧನೆ ಅಪೂರ್ಣವಾಗಲಿದೆ. ರೋಗಪತ್ತೆ, ಚಿಕಿತ್ಸೆ, ಮುನ್ನೆಚ್ಚರಿಕೆ ಮತ್ತು ಆರೋಗ್ಯ ಕ್ಷೇತ್ರದ ಬಲವರ್ಧನೆ ಎನ್ನುವ ನಾಲ್ಕು ಹಂತಗಳಲ್ಲಿ ಪರಿಣಾಮಕಾರಿ ಕ್ರಮಗಳ ಅನುಷ್ಠಾನಕ್ಕೆ ರಾಷ್ಟ್ರೀಯ ಕಾರ್ಯತಂತ್ರ ಯೋಜನೆ (2017-2025) ರೂಪಿಸಲಾಗಿತ್ತು. ಈ ಎಲ್ಲ ಕ್ಷೇತ್ರಗಳಲ್ಲೂ ಆಗಬೇಕಾದ ಕೆಲಸ ಸಾಕಷ್ಟು ಬಾಕಿಯುಳಿದಿದೆ.

ಕ್ಷಯರೋಗ ಪತ್ತೆ ಪ್ರಮಾಣದಲ್ಲಿ ಗಣನೀಯ ಸುಧಾರಣೆ ಆಗಿದ್ದರೂ, ವರದಿಯಾಗದೇ ಉಳಿದಿರುವ ಪ್ರಕರಣಗಳ ಸಂಖ್ಯೆ ಒಂದು ಲಕ್ಷದಷ್ಟಿದೆ ಎಂದು ವರದಿಗಳು ಹೇಳುತ್ತಿವೆ. ಈ ಸಂಖ್ಯೆ, ದಾಖಲಾಗದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶ್ವದಲ್ಲೇ ಅತ್ಯಂತ ಹೆಚ್ಚಿನದಾಗಿದೆ. ಹೀಗಿದ್ದರೂ, ಚಿಕಿತ್ಸೆಯ ಯಶಸ್ಸಿನ ಪ್ರಮಾಣ ವಿಶ್ವದ ಸರಾಸರಿಗಿಂತಲೂ ಹೆಚ್ಚಿನದಾಗಿದೆ. ಸುಲಭವಾಗಿ ಬಳಸಬಹುದಾದ ಸಲಕರಣೆಗಳು ಸೇರಿದಂತೆ ಪರಿಣಾಮಕಾರಿ ತಂತ್ರಜ್ಞಾನದ ಬಳಕೆಯ ಫಲಿತಾಂಶ ಸ್ಪಷ್ಟವಾಗಿ ಕಾಣಿಸುವಂತಿದೆ. 2024ರಲ್ಲಿ 26 ಲಕ್ಷ ಕ್ಷಯರೋಗ ಪ್ರಕರಣಗಳು ದೇಶದ ವಿವಿಧ ಭಾಗಗಳಲ್ಲಿ ಪತ್ತೆಯಾಗಿದ್ದವು. ಇದು ಈವರೆಗೆ ವರ್ಷವೊಂದರಲ್ಲಿ ಪತ್ತೆಯಾದ ಅತ್ಯಂತ ಹೆಚ್ಚಿನ ಪ್ರಕರಣಗಳ ಸಂಖ್ಯೆಯಾಗಿದೆ. ಕ್ಷಯರೋಗದ ಚಿಕಿತ್ಸೆಗೆ ಸಂಬಂಧಿಸಿದ ಬಹುದೊಡ್ಡ ಸವಾಲು, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗೆ ಸಂಬಂಧಿಸಿದ್ದಾಗಿದೆ. ರೋಗಕ್ಕೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಎದುರಾಗುವ ತೊಡಕುಗಳಲ್ಲಿ ರೋಗಿಗಳ ಕಡಿಮೆ ಆದಾಯ ಮತ್ತು ಅಪೌಷ್ಟಿಕತೆ ಮುಖ್ಯವಾದವುಗಳು. ಪೌಷ್ಟಿಕಾಂಶದ ಕೊರತೆ ಹೋಗಲಾಡಿಸುವುದನ್ನು ಚಿಕಿತ್ಸೆಯ ಭಾಗವಾಗಿ ಮಾಡಿಕೊಳ್ಳಲಾಗಿದೆ. ಆದರೆ, ರೋಗ ವರದಿಯಾಗದ ಹೆಚ್ಚಿನ ಪ್ರಕರಣಗಳು ಕಡಿಮೆ ಆದಾಯ ಹೊಂದಿರುವ ಸಮುದಾಯಗಳಿಗೆ ಸಂಬಂಧಿಸಿರುವುದು ದೇಶದ ಸಾಮಾಜಿಕ ಸಂಕಥನವನ್ನು ಬೇರೆಯದೇ ರೀತಿಯಲ್ಲಿ ನೋಡಲು ಒತ್ತಾಯಿಸುವಂತಿದೆ. ರಾಷ್ಟ್ರೀಯ ಕ್ಷಯರೋಗ ನಿರ್ಮೂಲನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಹಾಗೂ ಉದ್ದೇಶಿತ ಗುರಿಯನ್ನು ತಲಪಲು ಸ್ಥಿರ ಮತ್ತು ಪರಿಣಾಮಕಾರಿ ಯೋಜನೆಗಳನ್ನು ಸರ್ಕಾರ ಅನುಷ್ಠಾನಕ್ಕೆ ತರಬೇಕಾಗಿದೆ.

ನಾಯಕನ ಕಣ್ಣೀರು!



ಯಾವುದೇ, ಒಬ್ಬ ನಾಯಕ ಸಾರ್ವಜನಿಕವಾಗಿ ಪದೇ ಪದೇ ಕಣ್ಣೀರು ಸುರಿಸುವುದೂ ಒಂದು ಬಗೆಯ ಬೂಟಾಟಿಕೆ.

ಎನ್‌.ಕೆ. ವರದರಾಜ್ ಸೊರಬ, 'ಫೇಸ್‌ಬುಕ್'ನಿಂದ

ಕಿಡಿನುಡಿ



ವಿರೋಧ ಪಕ್ಷವಾಗಿ ಏನಾದರೂ ಮಾತನಾಡುವ ಅಗತ್ಯ ಬಿಜೆಪಿಗಿದೆ. ಹಾಗಾಗಿ, ಆ ಪಕ್ಷದ ಮುಖಂಡರು ತಾವು ಬದುಕಿದ್ದೇವೆಂದು ತೋರಿಸಲು ಮಾತನಾಡುತ್ತಾರೆ. ಅವರ ಬಗ್ಗೆ ತಲೆಕೆಡಿಸಿಕೊಳ್ಳಲು ಆಗುತ್ತದೆಯೆ?

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶುಕ್ರವಾರ, 1-12-2000

• ಚಂಡಮಾರುತಕ್ಕೆ ಪುದುಚೇರಿ, ತಮಿಳುನಾಡುಗಳಲ್ಲಿ 12 ಬಲಿ

ಚೆನ್ನೈ, ನ. 30 (ಪಿಟಿಐ)- ಬಂಗಾಳ ಕೊಲ್ಲಿಯಲ್ಲಿ ನಿನ್ನೆ ಸಂಜೆ ಕಾಣಿಸಿಕೊಂಡ ಚಂಡಮಾರುತ ಕಡಲೂರು ಮತ್ತು ಪುದುಚೇರಿ ಕರಾವಳಿ ಪ್ರದೇಶಗಳಲ್ಲಿ ಭಾರೀ ಹಾನಿ ಉಂಟು ಮಾಡಿದ್ದು, ಇದುವರೆಗೆ 12 ಮಂದಿಯನ್ನು ಬಲಿ ತೆಗೆದುಕೊಂಡಿದೆ.

ಚಂಡಮಾರುತದ ಪರಿಣಾಮ ಭಾರೀ ಮಳೆ ಮತ್ತು ಬಿರುಗಾಳಿ ಉಂಟಾಗಿ ಪುದುಚೇರಿಯಲ್ಲಿ ಇಬ್ಬರು ಸತ್ತಿದ್ದರೆ, ತಮಿಳುನಾಡಿನಲ್ಲಿ 10 ಮಂದಿ ಮೃತಪಟ್ಟಿದ್ದಾರೆ.

ವಾಯುಭಾರ ಕುಸಿತ ಪಶ್ಚಿಮಾಭಿಮುಖವಾಗಿದ್ದು, ಬಂಗಾಳ ಕೊಲ್ಲಿಯಲ್ಲೇ ಸ್ಥಿರಗೊಳ್ಳುವ ಸಾಧ್ಯತೆ ಇರುವುದರಿಂದ ಮುಂದಿನ 24 ಗಂಟೆಗಳ ಅವಧಿಯಲ್ಲಿ ಈ ಪ್ರದೇಶಗಳಲ್ಲಿ ಮಳೆ ಮುಂದುವರಿಯುವ ಸಂಭವವಿದೆ.

• ಲೇಖಕಿ ಜಯಲಕ್ಷ್ಮೀಗೆ 'ದಾನಚಿಂತಾಮಣಿ' ಪ್ರಶಸ್ತಿ

ಬೆಂಗಳೂರು, ನ. 30- ಕನ್ನಡದ ಹಿರಿಯ ಲೇಖಕಿ ಜಯಲಕ್ಷ್ಮೀ ಶ್ರೀನಿವಾಸನ್ ಅವರಿಗೆ ಪ್ರಸಕ್ತ ಸಾಲಿನ 'ದಾನಚಿಂತಾಮಣಿ' ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಇಂದು ಪ್ರದಾನ ಮಾಡಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆ ಮಾಡಿದ ಮಹಿಳೆಯರಿಗೆ ರಾಜ್ಯ ಸರ್ಕಾರ ದಾನಚಿಂತಾಮಣಿ ಅತ್ತಿಮಬ್ಬೆ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡುತ್ತಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 1-12-1950

• ಕೊರಿಯದಲ್ಲಿ ಅಣುಬಾಂಬ್ ಪ್ರಯೋಗ ಸಂಭವ

ವಾಷಿಂಗ್ಟನ್, ನ. 30- ಕೊರಿಯದಲ್ಲಿ ಅಣುಬಾಂಬ್ ಪ್ರಯೋಗದ ಪ್ರಶ್ನೆಯು ಸದಾ ತಮ್ಮ ತೀವ್ರ ಪರಿಶೀಲನೆಯಲ್ಲಿತ್ತೆಂದು ಅಧ್ಯಕ್ಷ ಟ್ರೂಮನರು ಇಂದು ಹೇಳಿದರು.

ಇದು ಪ್ರಯೋಗವಾಗುವುದೇ ಎಂಬುದು ಯುದ್ಧಕ್ಷೇತ್ರದಲ್ಲಿರುವ ಅಮೆರಿಕಾ ಸೇನಾ ನಾಯಕರಿಗೆ ಸೇರಿದ್ದೆಂದೂ, ಆದರೆ ಅದನ್ನು ಪ್ರಯೋಗಿಸಬೇಕಾಗಿ ಬರಬಹುದೆಂಬುದು ತಮ್ಮ ವೈಯಕ್ತಿಕ ಅಭಿಪ್ರಾಯ ಎಂದು ತಿಳಿಸಿದರು.

ಕಿಕ್ಕಿರಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತ ಅಧ್ಯಕ್ಷ ಟ್ರೂಮನ್ನರು ಅಣುಬಾಂಬನ್ನ ವಿಶ್ವಸಂಸ್ಥೆಯ ಅನುಮತಿಯಿಲ್ಲದೆಯೇ ಪ್ರಯೋಗಿಸಬಹುದೆಂದೂ, ಕೊರಿಯ ಅಮೆರಿಕದ ಮಿಲಿಟರಿ ಶತ್ರುಗಳಲ್ಲೊಂದೆಂದೂ, ತನ್ನ ಆಯುಧಗಳನ್ನು ಉಪಯೋಗಿಸಲು ಅಮೆರಿಕಾಕ್ಕೆ ಸ್ವಾತಂತ್ರ್ಯವಿದೆಯೆಂದೂ ವಿವರಿಸಿದರು.

ನೂರರ 'ಗುರು'ತ್ವದ ನೆನಪಲ್ಲಿ...



ವಿಶ್ಲೇಷಣೆ

ಎಂ.ಎಸ್.ಶೇಖರ್

'ಗುರು ಪರಂಪರೆ'ಗೆ ತಿಲಕಪ್ರಾಯದಂತೆ ಇರುವ ನಾರಾಯಣಗುರು ಅವರನ್ನು ಕವಿ ರವೀಂದ್ರನಾಥ ಟ್ಯಾಗೋರ್ ಮತ್ತು ಮಹಾತ್ಮ ಗಾಂಧೀಜಿ ಅವರು ಭೇಟಿ ಮಾಡಿ ನೂರು ವರ್ಷಗಳು ತುಂಬಿವೆ. ಭಾರತದ ಸಾಮಾಜಿಕ ಚರಿತ್ರೆಯ ಆ ಅಪೂರ್ವ ವಿದ್ಯಮಾನಗಳ ಅವಲೋಕನಕ್ಕೆ, ವರ್ತಮಾನದ ತವಕ ತಲ್ಲಣಗಳಿಗೆ ಉತ್ತರಗಳನ್ನು ದೊರಕಿಸಿಕೊಡುವ ಶಕ್ತಿಯಿದೆ.

ಸಾಮಾಜಿಕ ಬದಲಾವಣೆಯನ್ನು ಹಂಬಲಿಸುವ ಎಲ್ಲರಿಗೂ, ಕೇರಳವನ್ನು ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ನಾರಾಯಣಗುರು ಅವರು ನಡೆಸಿದ ಪ್ರಯೋಗಗಳು ಎಲ್ಲ ಕಾಲಕ್ಕೂ ದಾರಿದೀಪದಂತಿವೆ. ಗುರುಗಳು ರೂಪಿಸಿದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಆಂದೋಲನಗಳು ಭಾರತಕ್ಕೆ ದಿಕ್ಕುದೆಸೆ ತೋರಿಸುವಂತಿವೆ.

ಕೇರಳದಲ್ಲಿ ಪೊಲೆಯ, ಪರಯ ಮುಂತಾದ, 'ಅಸ್ಪೃಶ್ಯ' ಎಂದು ಕರೆಸಿಕೊಂಡ ಸಮುದಾಯಗಳನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದ ದಿನಗಳಿದ್ದವು. ಸೂರ್ಯ ಹುಟ್ಟುವ-ಮುಳುಗುವ ಹೊತ್ತಿನಲ್ಲಿ ಅವರ ನೆರಳು ಸವರ್ಣೀಯರಿಗೆ ತಾಕಿದರೆ ಮೈಲಿಗೆ ಆಗುತ್ತದೆ ಎನ್ನುವ ಕಾರಣಕ್ಕಾಗಿ ಅವರ ಸಂಚಾರಕ್ಕೆ ನಿರ್ಬಂಧಗಳಿದ್ದವು. ಅವರು ತಮ್ಮ ಉಗುಳನ್ನು ಸೊಂಟಕ್ಕೆ ಕಟ್ಟಿಕೊಂಡ ಮಡಿಕೆಗಳಲ್ಲಿ ಉಗಿದುಕೊಳ್ಳಬೇಕಾಗಿತ್ತು. ಇಂಥ ದುಃಸ್ಥಿತಿಗಿಂತ ನೂಲಿನಷ್ಟು ಮೇಲಿದ್ದ ಕೇರಳದ ಈಳವ ಸಮುದಾಯದ ಬದುಕು ಕೂಡ ಅಸಹನೀಯವೇ ಆಗಿತ್ತು. ಜಾತಿ ಕಾರಣದಿಂದಾಗಿ ಮುಖ್ಯವಾಹಿನಿಯ ಪಾಲಿಗೆ ನಿಕೃಷ್ಟರಾಗಿದ್ದ ಸಮುದಾಯಗಳಲ್ಲಿ ಅರಿವು ಮತ್ತು ಆತ್ಮಗೌರವ ತುಂಬಿದ್ದು ನಾರಾಯಣಗುರು ಅವರ ಪ್ರಮುಖ ಸಾಧನೆ.

ಕೇರಳದಲ್ಲಿ ಅಸ್ಪೃಶ್ಯ ಪದ್ಧತಿಯನ್ನು ಕಂಡು ನೊಂದುಕೊಂಡಿದ್ದ ಸ್ವಾಮಿ ವಿವೇಕಾನಂದರು, 'ಇದೊಂದು ಹುಚ್ಚರ ಸಂತೆ' ಎಂದಿದ್ದರು. ಆ ಹುಚ್ಚರ ಸಂತೆಯಲ್ಲಿ ಜಾಗೃತಿ ಉಂಟಾಗಿ, ಕೆಳವರ್ಗಗಳು ಸುಧಾರಣೆಗೊಂಡು, ಶಿಕ್ಷಣ ಪಡೆದು, ಘನತೆಯಿಂದ ಬದುಕುವ ಸ್ಥಿತಿ ರೂಪುಗೊಂಡಿರುವಲ್ಲಿ ನಾರಾಯಣಗುರು ಅವರ ಪಾತ್ರ ಮಹತ್ವದ್ದು.

ನಾರಾಯಣಗುರು ಜನಿಸಿದ್ದು ಈಳವ ಸಮಾಜದಲ್ಲಿ. ಜಾತಿಶ್ರೇಣಿಗಳಲ್ಲಿ ಸಾವಿರಾರು ಕಾಲುಗಳು ತಮ್ಮ ತಲೆಯ ಮೇಲಿದ್ದರೂ ಸಹಿಸುವ, ಕಾಲಿಡಲು ಒಂದು ತಲೆಸಿಕ್ಕರೂ ತನ್ನ ಮೇಲರಿಮೆ ಪ್ರದರ್ಶಿಸಲು ಮುಂದಾಗುವ ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಸಹಜವಾಗಿಯೇ ಅವಮಾನಗಳನ್ನು ಎದುರಿಸಬೇಕಾಯಿತು. ಆದರೆ, ಅವಮಾನಗಳಿಂದ ಎದೆಗುಂದದೆ, ಅವುಗಳಿಗೆ ವೈಚಾರಿಕತೆಯ ಮೂಲಕ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದರು. ಮಲಯಾಳ, ತಮಿಳು, ಸಂಸ್ಕೃತ ಭಾಷೆಯಲ್ಲಿನ ಸಾಹಿತ್ಯದ ಗಾಢ ಅಧ್ಯಯನ ನಡೆಸಿದರು. ಆ ಮೂಲಕ ಅಪಾರ ಜ್ಞಾನ ಸಂಪತ್ತು ಗಳಿಸಿದರು. ಯಾವ ಧಾರ್ಮಿಕ ಸಂಪ್ರದಾಯಗಳನ್ನು ಮುಂದಿಟ್ಟುಕೊಂಡು ಕೆಳಸಮುದಾಯಗಳನ್ನು ಮೌಢ್ಯದಲ್ಲಿಡಲಾಗಿತ್ತೋ, ಅದೇ ಧರ್ಮವನ್ನು ತಮ್ಮ ಶಕ್ತಿಯನ್ನಾಗಿಸಿಕೊಂಡು, ದಮನಿತರನ್ನು ಒಂದುಗೂಡಿಸಲು ಪ್ರಯತ್ನಿಸಿದರು.

ಮೌಢ್ಯಗಳಿಂದ ಹೊರತಾದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ನೆಲೆಗಟ್ಟಿನ ದೇವಾಲಯಗಳನ್ನು ದಮನಿತರಿಗಾಗಿ ರೂಪಿಸಿಕೊಟ್ಟರು. ಈಳವ ಸಮಾಜ ಸೇರಿದಂತೆ ಕೆಳಸಮುದಾಯಗಳಿಗಾಗಿ, ಪ್ರಕೃತಿಯ ಮಡಿಲಲ್ಲಿ ಮಂದಿರಗಳನ್ನು ಸ್ಥಾಪಿಸಿದರು. ಆ ಮಂದಿರಗಳಿಗೆ ಅಸ್ಪೃಶ್ಯ ಎನ್ನಿಸಿಕೊಂಡ ಸಮುದಾಯಗಳಿಗೆ ಪ್ರವೇಶ ದೊರಕಿಸಿಕೊಡುವ ಮೂಲಕ, ಅವರಿಗೆ ಅಧ್ಯಾತ್ಮದ ಸ್ಪರ್ಶ ನೀಡಿದರು, ನೈತಿಕ ಧೈರ್ಯ ತುಂಬಿದರು.

ದೇವರು ನಮ್ಮ ಆತ್ಮದಲ್ಲಿಯೇ ಇದ್ದಾನೆ. ಕೆಳಸಮುದಾಯಗಳನ್ನು ಮೌಢ್ಯದಲ್ಲಿ ಮುಳುಗಿಸಿ ಶೋಷಿಸುತ್ತ, ಅರ್ಥವಿಲ್ಲದ ಡಾಂಭಿಕ ಪೂಜೆಗಳಿಂದ ದೇವರನ್ನು ಕಾಣಲು ಸಾಧ್ಯವಿಲ್ಲ. ಪವಿತ್ರಸ್ಥಳ ಎಂದು ಭ್ರಮಿಸಿ ದೂರದ ಸ್ಥಳಗಳಿಗೆ ದುಂದುವೆಚ್ಚದಿಂದ ಹೋಗಬೇಕಾಗಿಲ್ಲ ಎಂಬ ತಿಳಿವಳಿಕೆಯನ್ನು ಮುಗ್ಧ ಸಮುದಾಯಗಳಿಗೆ ಮನಮುಟ್ಟುವಂತೆ ನೀಡಿದರು. ದೈವವನ್ನು ಕಾಣುವ ಸರಳಮಾರ್ಗಗಳನ್ನು ತಿಳಿಹೇಳುತ್ತ, 'ಒರುಧರ್ಮ, ಒರುಕುಲ, ಒರುಮತ' ಎಂಬುದನ್ನು ಸ್ಪಷ್ಟವಾಗಿ ಮನದಟ್ಟು ಮಾಡಿದರು.

ಒಮ್ಮೆ ಕೇರಳದ ಇಡುಕ್ಕಿಯಲ್ಲಿದ್ದ ದೇವಾಲಯದ ಬಗ್ಗೆ ಈಳವ ಸಮಾಜದ ಇಬ್ಬರು ಮುಖಂಡರಿಗಿದ್ದ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಸಭೆಯೊಂದು ನಡೆಯಿತು. ಜನರು ಕಿಕ್ಕಿರಿದು ಸೇರಿದ್ದ ಆ ಸಭೆಯಲ್ಲಿ, ದೂರದಲ್ಲಿ ನಿಂತ ಕೆಲವರು ಆಸೆಗಣ್ಣಿನಿಂದ ತಮ್ಮತ್ತ ನೋಡುತ್ತಿರುವುದನ್ನು ನಾರಾಯಣಗುರು ಗಮನಿಸಿದರು. ಅಲ್ಲಿ ನಿಂತಿರುವ ಜನರು ಯಾರು? ಯಾಕೆ ಅವರು ಅಷ್ಟು ದೂರದಲ್ಲಿ ನಿಂತಿದ್ದಾರೆ? ಎಂದು ಗುರುಗಳು ಸಭೆಯನ್ನು ಪ್ರಶ್ನಿಸಿದಾಗ, ಭಿನ್ನಾಭಿಪ್ರಾಯವಿದ್ದ ಈಳವ ಮುಖಂಡರಿಬ್ಬರೂ- 'ಅವರು ಪೊಲೆಯ ಜಾತಿಯವರು. ಇಲ್ಲಿಗೆ ಬರುವಂತಿಲ್ಲ' ಎಂದು ಒಕ್ಕೊರಲಿನಿಂದ ಹೇಳಿದರು. ಆ ಉತ್ತರದಿಂದ ಗುರುಗಳು ದುಃಖಿತರಾದರು. 'ದೂರದಲ್ಲಿ ನಿಂತಿರುವವರನ್ನು ಕರೆಯಿರಿ, ಈ ಸಭೆಯಲ್ಲಿ ಅವರೂ ಪಾಲ್ಗೊಳ್ಳಲಿ' ಎಂದು ಹೇಳಿದರು. ಗುರುಗಳ ಮಾತಿಗೆ ಮುಖಂಡರು ಒಪ್ಪಲಿಲ್ಲ. ಪೊಲೆಯರು ನಮ್ಮ ಸಭೆಗೆ ಬರುವಂತಿಲ್ಲ ಎನ್ನುವ ಹಟ ಅವರದು. ಆಗ ನಾರಾಯಣಗುರು, 'ಆ ಜನರನ್ನು ದೂರವಿಡಲು ನೀವಿಬ್ಬರೂ ಒಂದಾಗಿದ್ದೀರಲ್ಲ!' ಎಂಬ ವಿಷಾದದ ಮಾತುಗಳನ್ನಾಡಿ, 'ಆ ನಮ್ಮ ಸಹಜೀವಿಗಳನ್ನು ಕರೆಸಿ ಈ ಸಭೆಯಲ್ಲಿ ಪಾಲ್ಗೊಳ್ಳಲು ನೀವು ಅವಕಾಶ ನೀಡಬೇಕು, ಇಲ್ಲದಿದ್ದರೆ ನಾನು ಈ ಸಭೆಯಲ್ಲಿರಲು ಸಾಧ್ಯವಿಲ್ಲ' ಎಂದು ಸ್ಪಷ್ಟವಾಗಿ ಹೇಳಿದರು. ಕೊನೆಗೆ, ಆ ಮುಖಂಡರಿಬ್ಬರು ನಾರಾಯಣಗುರು ಅವರಲ್ಲಿ ಕ್ಷಮೆ ಕೋರಿದರು. ಗುರುಗಳ ಆಶಯದಂತೆ ಪೊಲೆಯ ಜನರನ್ನು ಸಭೆಗೆ ಕರೆಸಲಾಯಿತು. ಅಲ್ಲಿ ನೆರೆದಿದ್ದ ಜನರಿಗೆ, 'ಅಸ್ಪೃಶ್ಯತೆಯ ಆಚರಣೆ ಅಮಾನವೀಯ. ನಮ್ಮೆಲ್ಲರ ಮೈಯಲ್ಲೂ ಹರಿಯುವುದು ಒಂದೇ ರಕ್ತವಲ್ಲವೇ?' ಎಂದು ತಿಳಿಹೇಳಿದರು. ಈಳವ ಸಮಾಜದ ಮುಖಂಡರಿಬ್ಬರಿಗೂ ನಿಜಸ್ಥಿತಿಯನ್ನು ಮನದಟ್ಟು ಮಾಡಿಕೊಟ್ಟರು. ಮತ ಸುಧಾರಣೆಯ ಕೆಲಸಕ್ಕೆ ಅವರಿಬ್ಬರನ್ನೇ ನೇಮಿಸಿದರು. ಈ ಬಗೆಯ ನೂರಾರು, ಸಾವಿರಾರು ಕೆಲಸಗಳನ್ನು ನಾರಾಯಣಗುರು ಅವರು ಮಾಡಿರುವುದನ್ನು ಕೇರಳ ಪ್ರವಾಸ ಮಾಡಿದಾಗ, ನನ್ನ ಕ್ಷೇತ್ರಕಾರ್ಯದ ಅನುಭವಗಳಲ್ಲಿ ಕಂಡಿದ್ದೇನೆ. ನಾರಾಯಣಗುರು ಅವರು ನಡೆಸಿದ ಆಂದೋಲನ, ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಕನ್ನಡನಾಡಿನಲ್ಲಿ ಮಾಡಿದ ಧಾರ್ಮಿಕ ಆಂದೋಲನದಷ್ಟೇ ಮಹತ್ವದ್ದಾಗಿದೆ.

ಮಾನಸಿಕ ಸ್ವಚ್ಛತೆಯ ಮೂಲಕ ಮಾನವಜೀವಿಗಳು ಒಗ್ಗೂಡಿ ಬೆರೆಯುವಂಥ ಧಾರ್ಮಿಕ ಶ್ರದ್ಧೆಯ ಮಾನವೀಯ ಕೆಲಸಗಳನ್ನು, ಸಂತವ್ಯಕ್ತಿತ್ವದ ನಾರಾಯಣಗುರು ನಡೆಸಿದರು. ಕೇರಳ ರಾಜ್ಯದಾದ್ಯಂತ ನಿರಂತರವಾಗಿ ಬಹುದೊಡ್ಡ ಸಾಮಾಜಿಕ ಆಂದೋಲನವನ್ನೇ ರೂಪಿಸಿದರು. ಅದರಿಂದ ಕೆಳಸಮುದಾಯಗಳು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಕೊಂಚವಾದರೂ ಸಹನೀಯ ಬದುಕು ನಡೆಸುವಂತಾಗಿದೆ.

ನಾರಾಯಣಗುರು ಅವರು ಸ್ಥಾಪಿಸಿರುವ ಪ್ರಕೃತಿಯ ನಡುವಿನ ಆಧ್ಯಾತ್ಮಿಕ ಧ್ಯಾನಕೇಂದ್ರಗಳಲ್ಲಿ, ತಿರುವನಂತಪುರದಿಂದ ಸುಮಾರು ಅರವತ್ತು ಮೈಲಿ ದೂರದಲ್ಲಿರುವ, ಬೆಟ್ಟಗುಡ್ಡಗಳಿಂದ ಆವೃತವಾಗಿರುವ, ನದಿಗಳ ಸಂಗಮವಾಗಿರುವ ವರ್ಕಲದಲ್ಲಿರುವ 'ಶಿವಗಿರಿಮಠ' ಮುಖ್ಯವಾದುದು. ಪ್ರಕೃತಿಯ ಮಡಿಲಲ್ಲಿರುವ ಶಿವಗಿರಿಮಠದಲ್ಲಿ ನಾರಾಯಣಗುರು ಅವರ ಸಮಾಧಿಯೂ ಇದೆ. ಅಲ್ಲಿಗೆ ದೇಶ-ವಿದೇಶಗಳ, ಜೀವಪರ ನಿಲುವಿನ ಅಸಂಖ್ಯ ಪ್ರಾಜ್ಞರು ಭೇಟಿ ನೀಡುತ್ತಾರೆ. ಧ್ಯಾನಕೇಂದ್ರವಾಗಿಯೂ ಪ್ರಸಿದ್ಧವಾಗಿರುವ ವರ್ಕಲದ ಈ ಶಿವಗಿರಿಮಠಕ್ಕೆ ಭೇಟಿ ನೀಡಿರುವವರಲ್ಲಿ- ಕವಿ ರವೀಂದ್ರನಾಥ ಟ್ಯಾಗೋರ್, ಮಹಾತ್ಮ ಗಾಂಧೀಜಿ, ರಮಣ ಮಹರ್ಷಿ, ಸಿ. ರಾಜಗೋಪಾಲಚಾರಿ, ವಿ.ವಿ. ಗಿರಿ, ಜವಾಹರಲಾಲ್ ನೆಹರೂ, ಇಂದಿರಾಗಾಂಧಿ ಮುಂತಾದವರು ಸೇರಿದ್ದಾರೆ. ಶಿವಗಿರಿ ಪರಿಸರದಲ್ಲಿ ಜೀವಿಸಿದ ಧ್ಯಾನಿಸಿದ ನಾರಾಯಣಗುರು ಅವರು- ಮಲಯಾಳ, ತಮಿಳು ಹಾಗೂ ಇಂಗ್ಲಿಷ್‌ನಲ್ಲಿ ಜನಸಾಮಾನ್ಯರಿಗೆ ತಲಪುವಂತಹ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಆ ಕೃತಿಗಳು ಕನ್ನಡವೂ ಸೇರಿದಂತೆ ಹಲವು ಭಾರತೀಯ ಭಾಷೆಗಳಿಗೆ, ಇಂಗ್ಲಿಷ್, ಫ್ರೆಂಚ್, ಜರ್ಮನ್ ಮುಂತಾದ ಭಾಷೆಗಳಿಗೆ ಅನುವಾದಗೊಂಡಿವೆ.

ನಾರಾಯಣಗುರು ಅವರ ಶಿಷ್ಯರಾದ ಸ್ವಾಮಿ ಧರ್ಮತೀರ್ಥ, ಸ್ವಾಮಿ ಆನಂದತೀರ್ಥ, ಮಲಯಾಳದ ಮಹಾಕವಿ ಕುಮಾರನ್ ಆಶಾನ್, ಡಾ. ಪದ್ಮನಾಭ ಪಲ್ಪು, ಪ್ರೊ. ಜೋಸೆಫ್ ಮುಂಡಶ್ಶೇರಿ ಮುಂತಾದವರು 'ಶ್ರೀನಾರಾಯಣಗುರು ಧರ್ಮ ಪರಿಪಾಲನಂ' ಎಂಬ ಸಂಘ ಸ್ಥಾಪಿಸಿ, ನಾರಾಯಣಗುರು ಅವರ ದಟ್ಟ ಮಾನವಪ್ರೀತಿಯ ಕೆಲಸಗಳು ಜೀವಂತವಾಗಿರಲು ಶ್ರಮಿಸಿರುವುದರ ಕುರುಹುಗಳನ್ನು ಈಗಲೂ ಕಾಣಬಹುದಾಗಿದೆ.

ರವೀಂದ್ರನಾಥ ಟ್ಯಾಗೋರ್ ಅವರು 1922ರ ನವೆಂಬರ್ 22ರಂದು ಶಿವಗಿರಿಮಠದಲ್ಲಿ ನಾರಾಯಣಗುರು ಅವರನ್ನು ಭೇಟಿ ಮಾಡಿದ್ದರು. 'ನಾನು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಪ್ರವಾಸ ಮಾಡಿದ್ದೇನೆ. ಆ ಪ್ರವಾಸಗಳಲ್ಲಿ ನನಗೆ ಹಲವಾರು ಸಂತರು, ಮಹರ್ಷಿಗಳನ್ನು ಭೇಟಿಯಾಗುವ ಅವಕಾಶ ದೊರೆತಿದೆ. ನಾನು ಪ್ರಾಮಾಣಿಕವಾಗಿ ಹೇಳಬೇಕಾದ ಒಂದು ವಿಷಯ ಏನೆಂದರೆ, ಕೇರಳದ ನಾರಾಯಣಗುರುಗಳಿಗಿಂತ ಆಧ್ಯಾತ್ಮಿಕವಾಗಿ ದೊಡ್ಡವರು ಯಾರೂ ಇಲ್ಲ. ಗುರುಗಳಂತೆ ಆಧ್ಯಾತ್ಮಿಕ ಸಾಧನೆ ಇರುವ ಯಾರನ್ನೂ ನಾನು ನನ್ನ ಜೀವನದಲ್ಲಿ ಕಂಡೇ ಇಲ್ಲ. ದೈವೀ ಬೆಳಕಿನ ವೈಭವವೇ ಪ್ರಕಾಶಿಸುತ್ತಿರುವ ಆ ಮುಖವನ್ನು ಮತ್ತು ದೂರದ ದಿಗಂತ ಬಿಂದುವನ್ನೇ ದಿಟ್ಟಿಸಿರುವ ಯೋಗಿಯ ಆ ಕಣ್ಣುಗಳನ್ನು ನಾನೆಂದೂ ಮರೆಯುವುದಿಲ್ಲ' ಎಂದು ಟ್ಯಾಗೋರರು ಹೇಳಿದ್ದಾರೆ.

ಮಹಾತ್ಮ ಗಾಂಧೀಜಿಯವರು 1923ರ ಮಾರ್ಚ್ 13ರಂದು ಶಿವಗಿರಿಮಠದಲ್ಲಿ ಶ್ರೀನಾರಾಯಣಗುರು ಅವರನ್ನು ಭೇಟಿ ಮಾಡಿ ಸಂವಾದ ನಡೆಸಿದ್ದರು. 'ನಾನು ತಿರುವಾಂಕೂರು ರಾಜ್ಯಕ್ಕೆ ಭೇಟಿ ನೀಡಿ, ಪೂಜ್ಯ ನಾರಾಯಣಗುರು ಅವರ ದರ್ಶನ ಮಾಡಿದ್ದು ನನಗೆ ಒದಗಿಬಂದ ದೊಡ್ಡ ಸದ್ವಿಶೇಷ ಎಂದು ಭಾವಿಸುತ್ತೇನೆ. ನನಗೆ ಅಲ್ಲಿ ಒಂದು ದಿನ ತಂಗುವ ಅವಕಾಶ ಸಿಕ್ಕಿದ್ದು ನನ್ನ ಭಾಗ್ಯ' ಎಂದಿದ್ದಾರೆ.

ಈ ದೇಶ ಕಂಡ ಬಹುದೊಡ್ಡ ಗುರು ಹಾಗೂ ಮಹಾತ್ಮರ ಭೇಟಿ-ಸಂವಾದಕ್ಕೆ ನೂರು ವರ್ಷಗಳು ತುಂಬಿದ ವಿದ್ಯಮಾನವನ್ನು ಕರ್ನಾಟಕವೂ ಸೇರಿದಂತೆ ವಿವಿಧೆಡೆ ನೆನಪಿಸಿಕೊಳ್ಳಲಾಗುತ್ತಿದೆ. ಇಂಥ ನೆನಪುಗಳು ವರ್ತಮಾನದ ಬಿಕ್ಕಟ್ಟುಗಳಿಗೆ ಉತ್ತರದ ಕಣ್ಣುಗಳಾಗಿ ನಮಗೆ ಒದಗಿ ಬರಬಲ್ಲವು.



ವಾಚಕರ ವಾಣಿ

ಭ್ರಷ್ಟಾಚಾರ ನಿಯಂತ್ರಣಕ್ಕೆ ಔಷಧಿ ಇಲ್ಲವೆ?

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಸಿದ ಸರ್ಕಾರಿ ಅಧಿಕಾರಿಗಳ ಮನೆ ಮತ್ತು ಅವರ ಕುಟುಂಬಸ್ಥರ ಮನೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸುವುದು ಮಾಮೂಲಿನ ಸಂಗತಿ. ಆದರೆ, ಕಾನೂನಿನ ಕುಣಿಕೆಯಿಂದ ನುಸುಳಿಕೊಂಡು ಬರುವುದರಲ್ಲಿ ಅಧಿಕಾರಿಗಳು ಸಿದ್ಧಹಸ್ತರು. ಹಾಗಾಗಿಯೇ, ಹೆಚ್ಚಿನ ಸಂಖ್ಯೆಯ ಅಧಿಕಾರಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಸರ್ಕಾರವು ವೇತನ ಆಯೋಗದ ಮೂಲಕ ಕಾಲಕಾಲಕ್ಕೆ ಅಧಿಕಾರಿಗಳಿಗೆ ಸಂಬಳ ಹೆಚ್ಚಿಸುತ್ತದೆ. ಹೀಗಿದ್ದರೂ ಜನರಿಂದ ಹಣ ಕೀಳುವುದು ಹೇಸಿಗೆ ಪಡುವಂತದ್ದು. ಜನಸಾಮಾನ್ಯರಿಗೆ ಅಧಿಕಾರಿಗಳ ಮೇಲೆ ನಂಬಿಕೆ ಇಲ್ಲದಂತಾಗಿದೆ. ಭ್ರಷ್ಟಾಚಾರ ತಡೆಗೆ ಈಗಿರುವ ಕಾನೂನನ್ನು ಮತ್ತಷ್ಟು ಬಿಗಿಗೊಳಿಸಬೇಕಿದೆ.

ಪ್ರಜ್ವಲ ಜಿ.ಟಿ., ಕಲಬುರಗಿ

ಮಕ್ಕಳ ಬೋಧನೆಗೆ ತರಬೇತಿಯ ತೊಡಕು

ಡಿಸೆಂಬರ್ ಅಂತ್ಯದೊಳಗೆ ಎಸ್‌ಎಸ್‌ಎಲ್‌ಸಿ ಪಠ್ಯಕ್ರಮದ ಬೋಧನೆ ಪೂರ್ಣಗೊಳಿಸಲು ಶಿಕ್ಷಕರಿಗೆ ಸೂಚಿಸಲಾಗಿದೆ. ಈ ನಡುವೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ಡಿಸೆಂಬರ್‌ನಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಮೂರ್ನಾಲ್ಕು ಶಿಕ್ಷಕರನ್ನು ವಿವಿಧ ವಿಷಯ ಕುರಿತು ಆರು ದಿನಗಳ ತರಬೇತಿಗೆ ನಿಯೋಜಿಸಲಾಗಿದೆ. ಹೀಗಾದರೆ ನಿಗದಿತ ಅವಧಿಯೊಳಗೆ ಪಠ್ಯಕ್ರಮ ಪೂರ್ಣಗೊಳಿಸಲು ಸಾಧ್ಯವೆ? ಬೋಧನಾ ಅವಧಿ ಹೊರತುಪಡಿಸಿ ಬೇರೆ ಅವಧಿಯಲ್ಲಿ ತರಬೇತಿ ನೀಡುವುದು ಸೂಕ್ತ. ಶಿಕ್ಷಣ ಸಚಿವರು ಈ ಬಗ್ಗೆ ಗಮನಹರಿಸಲಿ.

ಸಮರ್ಥಗೌಡ ಕೌಲೇರ್, ಶಿವಮೊಗ್ಗ

ಖಾದಿಯನ್ನು ಕಾವಿ ಹಿಂಬಾಲಿಸದೆ ಇರಲಿ

ಜಾತ್ಯತೀತ ದೇಶದಲ್ಲಿ, ಕಾವಿಧಾರಿಗಳು ಸರ್ವಸಂಗ ಪರಿತ್ಯಾಗಿಗಳೆನಿಸದೆ, ತಮ್ಮ ಜಾತಿಗಷ್ಟೇ ಸೀಮಿತವಾಗಿ ಜಪ, ತಪ, ಧ್ಯಾನ, ಪೂಜೆ ಪುನಸ್ಕಾರಗಳಿಗೆಲ್ಲ ತಿಲಾಂಜಲಿಯಿತ್ತು ಖಾದಿಗಳ ಹಿಂದೆ ಬಿದ್ದಿರುವುದು ದುರದೃಷ್ಟಕರ. ಸರ್ಕಾರ ಕೊಡುವ ಅನುದಾನದಿಂದ ಮಠಗಳನ್ನು ನಡೆಸುತ್ತಾ, ಖಾದಿಗಳ ಋಣ ತೀರಿಸಲೋಸುಗವೇ ತಮ್ಮ ಜಾತಿಗಳ ರಾಜಕಾರಣಿಗಳನ್ನೇ ಅಧಿಕಾರಕ್ಕೆ ತರಲು ಹಪಹಪಿಸುವುದು ಅಸಹ್ಯ ಹುಟ್ಟಿಸುವಂತಿದೆ. ರಾಜಕೀಯದ ಗೊಡವೆ ಕಾವಿಗಳಿಗೇಕೆ? ಇವರು ಎಂದಾದರೂ ಜನಸಾಮಾನ್ಯರ ಕಷ್ಟಕಾರ್ಪಣ್ಯಗಳ ಬಗ್ಗೆ ಮಾತನಾಡಿದ್ದಾರಾ? ರೈತರ ಬವಣೆಗಳಿಗೆ ದನಿ ಎತ್ತಿದ್ದಾರಾ? ನಿರುದ್ಯೋಗಿ ಯುವಕರ ನೆರವಿಗೆ ನಿಂತ ಉದಾಹರಣೆ ಇದೆಯಾ? ತಮ್ಮನ್ನು ಭಕ್ತರು ಪೀಠದ ಮೇಲೆ ಕೂರಿಸಿರುವುದು ಏಕೆ ಎಂಬುದನ್ನು ಅರಿತುಕೊಂಡು ವರ್ತಿಸಲಿ.

ಬಿ.ಎಲ್. ವೇಣು, ಚಿತ್ರದುರ್ಗ

ಪ್ರಜಾಪ್ರಭುತ್ವ

ಅಧಿಕಾರ ಗದ್ದುಗೆ
ಏರಲು ಬಳಸಬೇಡಿ
ಜಾತಿ ಹೆಸರಿನ ಆಶ್ರಯ.
ಎಲ್ಲ ವರ್ಗದ
ಸಮಾನತೆ ಮತ್ತು ಹಿತ,
ಅದುವೇ ಅಲ್ಲವೇ
ಪ್ರಜಾಪ್ರಭುತ್ವದ
ನಿಜ ಆಶಯ!

ಆರ್. ಸುನೀಲ್, ತರೀಕೆರೆ

ಬಾಲಸುಟ್ಟ ಬೆಕ್ಕಿನಂತಾಗಿರುವ ವರಿಷ್ಠರು

ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಹೀಗಿದ್ದರೂ ಕೆಲವು ಶಾಸಕರು, ಸಚಿವರು ಮತ್ತು ಬೆಂಬಲಿಗರು ಮತದಾರರಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ. ಈ ಗುಂಪುಗಳು ಜಾತಿಗಳ ನಡುವೆ ಬಿರುಕು ಮೂಡಿಸುತ್ತಿವೆ. ಜನಸೇವೆ ಮರೆತು ಕುರ್ಚಿ ರಾಜಕೀಯ ಮಾಡುತ್ತಿರುವವರ ಕಿವಿ ಹಿಂಡಬೇಕಿರುವ ಕಾಂಗ್ರೆಸ್‌ನ ಹೈಕಮಾಂಡ್ ಬಾಲ ಸುಟ್ಟಿರುವ ಬೆಕ್ಕಿನಂತೆ ಕಾಣಿಸುತ್ತಿದೆ.

ಕಾರ್ತಿಕ್ ಟಿ.ಸಂ., ಬೆಂಗಳೂರು

ನಟ ಉಮೇಶ್ ಕಲಾಸೇವೆ ಅಜರಾಮರ

ಹಾಸ್ಯ ಕಲಾವಿದ, ಹಿರಿಯ ಪೋಷಕ ನಟ ಉಮೇಶ್ ಅವರ ನಿಧನವು ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟ. 60ರ ದಶಕದಲ್ಲಿ 'ಮಕ್ಕಳ ರಾಜ್ಯ' ಸಿನಿಮಾ ಮೂಲಕ ಬಾಲನಟನಾಗಿ ಚಿತ್ರರಂಗ ಪ್ರವೇಶಿಸಿದ ಅವರು, ವರನಟ ರಾಜ್‌ಕುಮಾರ್, ವಿಷ್ಣುವರ್ಧನ್ ಸೇರಿದಂತೆ ಹಲವು ದಿಗ್ಗಜರೊಂದಿಗೆ ತೆರೆಹಂಚಿಕೊಂಡಿದ್ದರು.

ಅದರಲ್ಲೂ ರಾಜ್‌ಕುಮಾರ್ ಅವರೊಂದಿಗೆ 'ಬಬ್ರುವಾಹನ' ಸೇರಿದಂತೆ ಹಲವು ಸದಭಿರುಚಿಯ ಸಿನಿಮಾಗಳಲ್ಲಿನ ಅವರ ಮನೋಜ್ಞ ಅಭಿನಯ ಪ್ರೇಕ್ಷಕರನ್ನು ಮೋಡಿ ಮಾಡಿದೆ. 'ಅಪಾರ್ಥ ಮಾಡ್ಕೋಬೇಡಿ...' ಎಂಬ ಅವರ ಡೈಲಾಗ್‌ನಿಂದ ಕನ್ನಡ ಪ್ರೇಕ್ಷಕರು ನಕ್ಕುನಲಿದಿದ್ದಾರೆ. ಚಂದನವನಕ್ಕೆ ಅವರು ಸಲ್ಲಿಸಿರುವ ಕಲಾಸೇವೆ ಅಜರಾಮರ.

ದರ್ಶನ್, ತುಮಕೂರು

ಜನರ ಕಷ್ಟಕಾರ್ಪಣ್ಯ ಕೇಳಲು ನಿರುತ್ಸಾಹ

ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಗೊಂದಲದ ಗೂಡಾಗಿದೆ. ಶಾಸಕರು ಆಡಳಿತ ಯಂತ್ರವನ್ನು ನಿಷ್ಕ್ರಿಯಗೊಳಿಸಿ, ಅಭಿವೃದ್ಧಿ ಕಾರ್ಯಗಳನ್ನು ಬದಿಗೊತ್ತಿ ತಮ್ಮ ಬೆಂಬಲಿತ ನಾಯಕನ ಪರವಾಗಿ ರಾತ್ರೋರಾತ್ರಿ ದೆಹಲಿಗೆ ಹಾರಿ ಹೈಕಮಾಂಡ್ ಅಂಗಳದಲ್ಲಿಯೇ ಮೊಕ್ಕಾಂ ಹೂಡಿದ್ದು ಆಯಿತು. ಆದರೆ, ಈ ಶಾಸಕರು ಕ್ಷೇತ್ರದಲ್ಲಿ ಕುಂಠಿತಗೊಂಡ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿರುವುದು ಮತ್ತು ಸಾರ್ವಜನಿಕರ ಸಮಸ್ಯೆ ಆಲಿಸಿರುವುದು ಉಂಟೇ? ರೈತರ ಬೇಡಿಕೆಗಳನ್ನು ಅಧಿವೇಶನಗಳಲ್ಲಿ ಚರ್ಚಿಸಿದ್ದು ನೆನಪಿದೆಯೇ? ಕ್ಷೇತ್ರದ ಜನರ ಕಷ್ಟಕಾರ್ಪಣ್ಯ ಕುರಿತು ಧ್ವನಿ ಎತ್ತುವುದರಲ್ಲಿ ನಿರುತ್ಸಾಹ ತೋರುತ್ತಾರೆ.

ಸಂವಿಧಾನದ ಆಶಯ ಹೊತ್ತು ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿರುವುದನ್ನು ಜನಪ್ರತಿನಿಧಿಗಳು ಮರೆಯಬಾರದು. ಹೈಕಮಾಂಡ್ ಅಥವಾ ಮಠಾಧೀಶರನ್ನು ನೋಡಿ ಜನ ನಿಮ್ಮನ್ನು ಆಯ್ಕೆ ಮಾಡಿರುವುದಿಲ್ಲ. ಇದರ ಅರಿವು ಜನಪ್ರತಿನಿಧಿಗಳಿಗೆ ಇರಲಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜಾಪ್ರತಿನಿಧಿಗಳು ಉತ್ತರದಾಯಿ ಆಗಬೇಕಾಗಿರುವುದು ಪ್ರಜೆಗಳಿಗೇ ಹೊರತು ತಮ್ಮ ಸಮುದಾಯಗಳ ಮಠಾಧೀಶರಿಗಲ್ಲ.

ಮಲ್ಲಿಕಾರ್ಜುನ್, ಬೆಂಗಳೂರು

ಚುರುಮುರಿ



ಗಾಂಧರ್ವ ಪಟ್ಟಾಭಿಷೇಕ!

• ಸುಮಂಗಲಾ

'**ನನಗರೆ** ಇವೇ ಇವೇ ಘೋಷಣೆ ಕೇಳಿ ವಾಕರಿಕೆ ಬಂದೈತಿ. 'ನವೆಂಬರ್ ಕ್ರಾಂತಿ', 'ಹೈಕಮಾಂಡ್ ಅಣತಿಯಂತೆ ನಡೀತಿವಿ', 'ಮಾತಿನ ಶಕ್ತಿ', 'ಕೊಟ್ಟ ವಚನವೇ ದೇವರು', 'ಬ್ರೇಕ್‌ಫಾಸ್ಟ್ ಕದನ ವಿರಾಮ'... ಅಯ್ಯಯ್ಯೋ... ಒಂದೇ ಎರಡೇ...' ಬೆಕ್ಕಣ್ಣ ಬಲು ಬೇಸರದಿಂದ ಛೀಛೀ ಎಂದಿತು.

'ಸಿಎಂ ಕುರ್ಚಿಗೆ ಟುವಾಲು ಹಾಕದನೂ ಬಿಡಂಗಿಲ್ಲ, ಹೈಕಮಾಂಡ್ ಅಪ್ಪಣೆಯೇ ದೇವರಪ್ಪಣೆ ಅನ್ನೂದನೂ ಬಿಡಂಗಿಲ್ಲ. ಸಿಎಂ ಕುರ್ಚಿ ತಮ್ಮ ಸಮುದಾಯದ ಸೊತ್ತು ಅಂತ ಹತ್ತಾರು ಕಾವಿಧಾರಿಗಳ ಘೋಷಣೆ ಬೇರೆ' ಎಂದು ನಾನೂ ಛೀಗುಟ್ಟಿದೆ.

'ಜಪಾನಿನೊಳಗೆ ಒಬ್ಬಾಕಿ ಒಂದ್ ಹುಡುಗನ್ನ ಮೂರು ವರ್ಷದಿಂದ ಪ್ರೀತಿ ಮಾಡತಿದ್ದಳಂತೆ. ಅಂವಾ ಕೈಕೊಟ್ಟನಂತ. ಭಾಳ ಬೇಜಾರಾಗಿ ಆಕಿ ಚಾಟ್ ಜಿಪಿಟಿ ಬಳಸಿಕೊಂಡು ಎಐ ಸಂಗಾತಿ ಸೃಷ್ಟಿ ಮಾಡಿ, ಗಾಂಧರ್ವ ವಿವಾಹವಾದಳಂತೆ'. ಬೆಕ್ಕಣ್ಣ ಸುದ್ದಿ ಓದಿತು.

'ಅದಕ್ಕೆ ಮತ್ತ ಇಲ್ಲಿಯ ಕುರ್ಚಿ ಕದನಕ್ಕೆ ಏನು ಸಂಬಂಧ ಐತಲೇ?' ನಾನು ಕುತೂಹಲದಿಂದ ಕೇಳಿದೆ.

'ಈಗ ಸಿಎಂ ಕುರ್ಚಿ ಕೈತಪ್ಪಿದೋರು, ಸಿಎಂ ಕುರ್ಚಿ ಕನಸು ಕಾಣೋರು ಎಲ್ಲರೂ ಹಿಂಗ ಚಾಟ್ ಜಿಪಿಟಿ ಬಳಸಿಕೊಂಡು ತಮ್ಮ ಸೃಜಿನ ಎಐ ಸಿಎಂ ಕುರ್ಚಿ ಸೃಷ್ಟಿ ಮಾಡಿ, ಗಾಂಧರ್ವ ಪಟ್ಟಾಭಿಷೇಕ ಮಾಡಿಕೊಂಡರೆ ಹೆಂಗೆ?' ಬೆಕ್ಕಣ್ಣ ಪ್ರಶ್ನೆ ಮುಂದಿಟ್ಟಿತು.

'ಎಷ್ಟೋ ಮಂತ್ರಿಗಳು, ಶಾಸಕರು ಈ ಎಐಗಿಐ ಬರೋದಕ್ಕಿಂತ ಮೊದಲೇ ಸಿಎಂ ಕುರ್ಚಿಯ ಜೊತೆ ಗಾಂಧರ್ವ ಪಟ್ಟಾಭಿಷೇಕ ಮಾಡಿಕೊಂಡಾರೆ! ಎಷ್ಟು ವರ್ಷ ಅಂತ ಗಾಂಧರ್ವ ಪಟ್ಟಾಭಿಷೇಕದಲ್ಲೇ ಇರಬಕು, ನನಗೀಗ ಖರೇ ಖರೇ ಪಟ್ಟಾಭಿಷೇಕ ಮಾಡ್ರಿ ಅಂತ ಡಿಕೇಶಂಕಲ್ಲು ಪಟ್ಟು ಹಿಡಿದಾರೆ' ಎಂದೆ.

'ಅದೂ ಖರೇನೆ. ಇವರಷ್ಟೇ ಅಲ್ಲ, ಮಹಾಘಟಬಂಧನ ಪಕ್ಷದ ನಾಯಕಮಣಿಗಳೂ ಪ್ರತಿಯೊಂದು ಲೋಕಸಭಾ ಚುನಾವಣೆಗೂ ಮೊದಲು ಗಾಂಧರ್ವ ಪಟ್ಟಾಭಿಷೇಕ ಮಾಡಿಕೊಳ್ತಾರೆ!' ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

ಸಂಗತ

ಆಪ್ತ ಸಮಾಲೋಚಕರಿಗೆ ಬೇಕು ವೃತ್ತಿಭದ್ರತೆ

ಎಚ್‌ಐವಿ/ಏಡ್ಸ್ ನಿಯಂತ್ರಣದಲ್ಲಿ ಆಪ್ತ ಸಮಾಲೋಚಕರ ಪಾತ್ರ ಮಹತ್ವದ್ದು. ಆದರೆ, ಈ ಆರೋಗ್ಯಯೋಧರ ವೃತ್ತಿಬದುಕು ಅಸುರಕ್ಷಿತ ಆಗಿರುವುದು ದುರದೃಷ್ಟಕರ.

• ಗೌರಿ ಚಂದ್ರಕೇಸರಿ

ವೈದ್ಯಕೀಯ ಕ್ಷೇತ್ರಗಳಲ್ಲಿ ದುಡಿಯುವ ವೈದ್ಯರು, ಶುಶ್ರೂಷಕರು, ಪ್ರಯೋಗಾಲಯ ತಂತ್ರಜ್ಞರು ಹಾಗೂ ಸಫಾಯಿ ಕರ್ಮಚಾರಿಗಳು ಒಂದು ರೀತಿಯಲ್ಲಿ ಸಮಾಜ ಸೇವಕರೇ. ಇವರೆಲ್ಲ ನಿತ್ಯ ಹಲವಾರು ಅಪಾಯಗಳಿಗೆ ತಮ್ಮನ್ನು ಒಡ್ಡಿಕೊಳ್ಳಬೇಕಾಗುತ್ತದೆ. ಅದೇ ರೀತಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಚ್‌ಐವಿ/ಏಡ್ಸ್ ತಡೆಗೆ ದುಡಿಯುತ್ತಿರುವ ಆಪ್ತ ಸಮಾಲೋಚಕರು ಕೂಡ ನಿತ್ಯ ಹಲವಾರು ಸವಾಲುಗಳಿಗೆ ಮುಖಾಮುಖಿಯಾಗುತ್ತಾರೆ. ಕಳೆದ ಮೂರು ದಶಕಗಳಲ್ಲಿ ಎಚ್‌ಐವಿ ಸೋಂಕು ಗಣನೀಯವಾಗಿ ಇಳಿಕೆಯಾಗುವಲ್ಲಿ ಆಪ್ತ ಸಮಾಲೋಚಕರ ಪಾತ್ರ ಹಿರಿದು.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ (ಕೆಎಸ್‌ಎಪಿಎಸ್) ಅಡಿಯಲ್ಲಿ ನೂರಾರು ಆಪ್ತ ಸಮಾಲೋಚಕರು, ಪ್ರಯೋಗಾಲಯ ತಂತ್ರಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲೆ, ತಾಲ್ಲೂಕುಗಳ ಸಾರ್ವಜನಿಕ ಆಸ್ಪತ್ರೆ ಹಾಗೂ ಸಮುದಾಯ ಕೇಂದ್ರಗಳಲ್ಲಿ ನಿಯೋಜನೆಗೊಂಡಿರುವ ಈ ನೌಕರರು, ಸುಮಾರು ಮೂವತ್ತು ವರ್ಷಗಳಿಂದ ತಾತ್ಕಾಲಿಕ ಸೇವೆಯ ಆಧಾರದ ಮೇಲೆ ದುಡಿಯುತ್ತಿದ್ದಾರೆ. ಈ ಮೊದಲು ಎಚ್‌ಐವಿ ಸೋಂಕಿನ ಕುರಿತು ಜನರಿಗೆ ತಿಳಿವಳಿಕೆಯ ಕೊರತೆಯಿತ್ತು. ಎಚ್‌ಐವಿ ಹಾಗೂ ಏಡ್ಸ್ ನಡುವೆ ಇರುವ ವ್ಯತ್ಯಾಸ ತಿಳಿಯದೆ, ಈ ಸೋಂಕು ನಿಶ್ಚಿತವಾಗಿ ಸಾವನ್ನು ಹೊತ್ತು ತರುವ ಕಾಯಿಲೆ ಎಂದು ಭಾವಿಸಿದ್ದರು. ಸೋಂಕಿತರನ್ನು ಭಯಮಿಶ್ರಿತ ಕೀಳರಿಮೆಯಿಂದ ಕಾಣುತ್ತಿದ್ದರು. ಈ ಪೂರ್ವಗ್ರಹಗಳನ್ನು ನೀಗಿಸುವಲ್ಲಿ ಆಪ್ತ ಸಮಾಲೋಚಕರು ಅವಿರತವಾಗಿ ದುಡಿಯುತ್ತ ಬಂದಿದ್ದಾರೆ.



ದಿನ ನಿತ್ಯ ಸಾರ್ವಜನಿಕ ಆಸ್ಪತ್ರೆಗಳಿಗೆ ಬರುವ ಎಲ್ಲ ಬಗೆಯ ರೋಗಿಗಳಿಗೆ ಎಚ್‌ಐವಿ ರಕ್ತಪರೀಕ್ಷೆ ಹಾಗೂ ಆಪ್ತ ಸಮಾಲೋಚನೆಯನ್ನು ಈಗ ಕಡ್ಡಾಯಗೊಳಿಸಲಾಗಿದೆ. ಹೀಗಾಗಿ ಪ್ರತಿಯೊಬ್ಬ ರೋಗಿಗೂ ಎಚ್‌ಐವಿ ಕುರಿತಾದ ಮಾಹಿತಿ ಹಾಗೂ ರಕ್ತಪರೀಕ್ಷೆ ಲಭ್ಯವಾಗುತ್ತಿದೆ. ಕಾಲೇಜುಗಳ ಯುವಕ/ಯುವತಿಯರಿಗೆ, ಆಟೊ, ಲಾರಿ ಚಾಲಕರಿಗೆ, ಲೈಂಗಿಕ ಕಾರ್ಯಕರ್ತೆಯರು ಹಾಗೂ ಲೈಂಗಿಕ ಅಲ್ಪಸಂಖ್ಯಾತರಿಗೂ ಅರಿವನ್ನುಂಟು ಮಾಡುವ ಕಾರ್ಯಕ್ರಮಗಳನ್ನು ಆಪ್ತ ಸಮಾಲೋಚಕರು ನೀಡುತ್ತಾ ಬರುತ್ತಿದ್ದಾರೆ. ಅದರ ಪರಿಣಾಮವಾಗಿ ಎಚ್‌ಐವಿ ಸೋಂಕು ಗಣನೀಯವಾಗಿ ಇಳಿಕೆಯಾಗುತ್ತಿದೆ. ಇಪ್ಪತ್ತೈದು ವರ್ಷಗಳ ಹಿಂದೆ ಕರ್ನಾಟಕದಲ್ಲಿ 0.55ರಷ್ಟಿದ್ದ ಸೋಂಕಿನ ಪ್ರಮಾಣ 2024-25ರಲ್ಲಿ 0.33ಕ್ಕೆ ಇಳಿಕೆಯಾಗಿರುವುದು ಸಮಾಲೋಚಕರ ಪರಿಶ್ರಮವನ್ನು ಸೂಚಿಸುತ್ತದೆ.

ಆಪ್ತ ಸಮಾಲೋಚಕರು ದಿನ ನಿತ್ಯ ನೇರವಾಗಿ ರೋಗಿಗಳ ಸಂಪರ್ಕಕ್ಕೆ ಬರುವುದರಿಂದ ಹಲವಾರು ಸೋಂಕುಗಳನ್ನು ಹೊಂದುವ ಸಾಧ್ಯತೆ ಇದೆ. ಅದರಲ್ಲೂ ಕ್ಷಯರೋಗದಂತಹ ಸೋಂಕು ಸುಲಭವಾಗಿ ಹರಡುವ ಸಾಧ್ಯತೆ ಇದೆ. ಕಾರಣ, ಎಚ್‌ಐವಿ ಸೋಂಕಿತ ವ್ಯಕ್ತಿ ಸರಿಯಾದ ರೀತಿಯಲ್ಲಿ ಚಿಕಿತ್ಸೆಗೆ ಒಳಪಡದೇ ಹೋದಲ್ಲಿ ಕ್ಷಯರೋಗದ ಸೋಂಕನ್ನು ಹೊಂದುವ ಸಾಧ್ಯತೆ ಹೆಚ್ಚು. ಇಂತಹ ವ್ಯಕ್ತಿಯ ಜೊತೆ ಸಮಾಲೋಚಕರು ಸಮಾಲೋಚನೆ ನಡೆಸುವ ಸಂದರ್ಭಗಳು ಬರುವುದುಂಟು. ಕ್ಷಯರೋಗಿಯು ಕೆಮ್ಮುವಾಗ, ಸೀನುವಾಗ ಯಾವುದೇ ರೀತಿಯ ಮುನ್ನೆಚ್ಚರಿಕೆಗಳನ್ನು ವಹಿಸದೇ ಇದ್ದಾಗ, ಆಪ್ತ ಸಮಾಲೋಚಕ ಕ್ಷಯರೋಗದ ಸೋಂಕನ್ನು ಹೊಂದಬಹುದು.

ಆಪ್ತ ಸಮಾಲೋಚಕರ ವೃತ್ತಿ ಬದುಕು ಕತ್ತಿಯಂಚಿನ ಮೇಲಿನ ನಡಿಗೆಯಂತಿದೆ. ನಿತ್ಯ ಹತ್ತಾರು ಸವಾಲುಗಳೊಂದಿಗೆ ಇವರು ವ್ಯವಹರಿಸಬೇಕಾಗುತ್ತದೆ. ಕೆಲವು ಆಸ್ಪತ್ರೆಗಳಲ್ಲಿ ಭಾನುವಾರ ಹಾಗೂ ಇತರ ರಜಾ ದಿನಗಳಲ್ಲೂ ಕರ್ತವ್ಯವನ್ನು ನಿರ್ವಹಿಸುವ ಅನಿವಾರ್ಯತೆಯಿದೆ. ಪೋಲಿಯೊ ಲಸಿಕಾ ಕಾರ್ಯಕ್ರಮ, ಕೋವಿಡ್‌ನಂತಹ ತುರ್ತು ಪರಿಸ್ಥಿತಿಗಳಲ್ಲಿಯೂ ಆಪ್ತ ಸಮಾಲೋಚಕರ ಸೇವೆಯನ್ನು ಆರೋಗ್ಯ ಇಲಾಖೆ ಬಳಸಿಕೊಳ್ಳುತ್ತಿದೆ.

ಮೂರು ದಶಕಗಳಿಂದ ಎಚ್‌ಐವಿ ಆಪ್ತ ಸಮಾಲೋಚಕರು ಹಾಗೂ ಪ್ರಯೋಗಾಲಯ ತಂತ್ರಜ್ಞರು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರು ಪಡೆಯುತ್ತಿರುವ ವೇತನವು ಅತೀ ಕಡಿಮೆ. ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ತಮಗಾಗುತ್ತಿರುವ ಅನ್ಯಾಯದ ವಿರುದ್ಧ ಹಲವಾರು ಬಾರಿ ಧ್ವನಿ ಎತ್ತಿದರೂ, ಸರ್ಕಾರದ ಗಮನಕ್ಕೆ ತಂದರೂ ಆಪ್ತ ಸಮಾಲೋಚಕರ ಸೇವೆಯನ್ನು ಕಾಯಂಗೊಳಿಸದೇ ಇರುವುದು ವಿಷಾದನೀಯ. ಹಲವಾರು ಆಪ್ತ ಸಮಾಲೋಚಕ ಸಿಬ್ಬಂದಿ ಇದೀಗ ನಿವೃತ್ತಿಯ ಹಂತವನ್ನು ತಲಪಿದ್ದಾರೆ.

ಆಪ್ತ ಸಮಾಲೋಚಕರಿಲ್ಲದ ಆಸ್ಪತ್ರೆಗಳನ್ನು ಊಹೆ ಮಾಡಿಕೊಳ್ಳುವುದೂ ಅಸಾಧ್ಯ. ಒಬ್ಬ ವ್ಯಕ್ತಿ ಎಚ್‌ಐವಿ ಸೋಂಕಿತನೆಂದು ದೃಢಪಟ್ಟಾಗ ಆತನಲ್ಲಾಗುವ ತಲ್ಲಣ, ತಾಕಲಾಟಗಳು ಹಲವಾರು. ಈ ಸಂದರ್ಭದಲ್ಲಿ ಸೋಂಕಿತರಿಗೆ ಆಪ್ತ ಸಮಾಲೋಚನೆ ಇಲ್ಲದೇ ಹೋದಲ್ಲಿ ಆ ವ್ಯಕ್ತಿ ದುಡುಕಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳಬಹುದು. ಇನ್ನು ಕೆಲವರು ತಮ್ಮಲ್ಲಿರುವ ಸೋಂಕನ್ನು ಅರಿವಿನ ಕೊರತೆಯಿಂದ ಹಲವಾರು ಜನರಿಗೆ ದಾಟಿಸಲೂಬಹುದು. ಆಗ ಎಚ್‌ಐವಿ ನಿಯಂತ್ರಣವಿಲ್ಲದೇ ಹರಡಬಹುದಾಗಿದೆ.

ಆಪ್ತ ಸಮಾಲೋಚಕರ ಕೆಲಸವು ಹೆಚ್ಚಿನ ದೈಹಿಕ ಹಾಗೂ ಮಾನಸಿಕ ಶ್ರಮವನ್ನು ಬೇಡುವಂತಹದ್ದು. ಹಲವಾರು ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಿ ಸೋಂಕಿತರಲ್ಲಿ ಆತ್ಮಸ್ಥೈರ್ಯವನ್ನು ತುಂಬುವ ಅವರ ಸಂಕಷ್ಟಗಳತ್ತ ಸರ್ಕಾರ ಗಮನಹರಿಸಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

'ಐಕಾನಿಕ್' ಸ್ಥಳದ ಅವ್ಯವಸ್ಥೆ

ಹುಬ್ಬಳ್ಳಿಯ ಚನ್ನಮ್ಮ ವೃತ್ತ ಮುಗಿಯುವುದೆಂದು ಮೇಲ್ಸೇತುವೆ?

• ನಾಗರಾಜ್ ಬಿ.ಎನ್.

ಹುಬ್ಬಳ್ಳಿಯು ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರ. ಚನ್ನಮ್ಮ ವೃತ್ತವು ಹುಬ್ಬಳ್ಳಿಯ ಹೃದಯ ಭಾಗ. ಅತ್ಯಂತ ವೈಶಿಷ್ಟ್ಯಪೂರ್ಣವಾದ ಈ ವೃತ್ತವು ಪ್ರಸ್ತುತ ತನ್ನ ಮಹತ್ವ ಮತ್ತು ಅಂದ ಕಳೆದುಕೊಂಡು ಕಳಾಹೀನವಾಗಿರುವುದಲ್ಲದೇ, ಜನರು ಹಾಗೂ ವಾಹನ ಸವಾರರಿಗೆ ಸಮಸ್ಯೆಯೂ ಆಗಿ ಪರಿಣಮಿಸಿದೆ. ಅದಕ್ಕೆ ಕಾರಣ, ಚನ್ನಮ್ಮ ವೃತ್ತದಲ್ಲಿ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ. ನಾಲ್ಕು ವರ್ಷದ ಹಿಂದೆ ಆರಂಭವಾದ ಮೇಲ್ಸೇತುವೆ ಕಾಮಗಾರಿ ವರ್ಷದ ಹಿಂದೆಯೇ ಪೂರ್ಣಗೊಳ್ಳಬೇಕಿತ್ತು; ಆದರೆ, ಹಾಗಾಗಿಲ್ಲ. ಇದು ಉತ್ತರ ಕರ್ನಾಟಕದ ಅಭಿವೃದ್ಧಿ ಕಾಮಗಾರಿಗಳ ಸ್ಥಿತಿಗತಿಗೆ ಹಿಡಿದ ಕನ್ನಡಿಯಾಗಿದೆ ಎನ್ನುವ ವಿಶ್ಲೇಷಣೆಗಳು ಕೇಳಿಬಂದಿವೆ


ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

'ಆಕಸ್ಮಿಕ' ಚಿತ್ರಕ್ಕಾಗಿ ಡಾ.ರಾಜಕುಮಾರ್ ಹಾಡಿರುವ 'ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು..' ಕನ್ನಡಿಗರ ಅತ್ಯಂತ ಪ್ರೀತಿಯ ಗೀತೆಗಳಲ್ಲೊಂದಾಗಿದೆ. ಅದನ್ನು ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಚಿತ್ರೀಕರಿಸಲಾಗಿತ್ತು. 1993ರಲ್ಲಿ 'ಆಕಸ್ಮಿಕ' ಬಿಡುಗಡೆಯಾದ ನಂತರ ಚನ್ನಮ್ಮ ವೃತ್ತವು ಅಪಾರ ಜನಪ್ರಿಯತೆ ಗಳಿಸಿತ್ತು. ಆನಂತರ ಅನೇಕ ಸಿನಿಮಾಗಳು ಇಲ್ಲಿ ಚಿತ್ರೀಕರಣಗೊಂಡಿವೆ. ಚನ್ನಮ್ಮ ವೃತ್ತ ಮತ್ತು ಅಲ್ಲಿರುವ ವೀರರಾಣಿ ಚನ್ನಮ್ಮ ವಿಗ್ರಹವು 'ಐಕಾನ್'ಗಳಾಗಿ ಬೆಳೆದಿವೆ.

ಧಾರವಾಡವೂ ಸೇರಿದಂತೆ ಈ ಭಾಗದ ಹಲವು ಜಿಲ್ಲೆಗಳ ಜನರ ಪ್ರತ್ಯಕ್ಷ ಮತ್ತು ಪರೋಕ್ಷ ವ್ಯಾಪಾರ, ವ್ಯವಹಾರ, ಸಂಚಾರದ ತಾಣವಾಗಿದ್ದ ಹುಬ್ಬಳ್ಳಿಯ ಚನ್ನಮ್ಮ ವೃತ್ತವು, ನಿರ್ಮಾಣ ಹಂತದ ಮೇಲ್ಸೇತುವೆಯಿಂದ ತನ್ನ ಮಹತ್ವ ಕಳೆದುಕೊಂಡಿರುವುದಷ್ಟೆ ಅಲ್ಲದೇ, ಜನರಿಗೆ ತಲೆನೋವಾಗಿ ಪರಿಣಮಿಸಿದೆ.

ಇತಿಹಾಸದ ಕಾಲದಿಂದಲೂ ವಾಣಿಜ್ಯ ಚಟುವಟಿಕೆಗಳಿಗೆ ಹೆಸರಾದ ಹುಬ್ಬಳ್ಳಿ, ಉತ್ತರ ಕರ್ನಾಟಕದ ಹೆಬ್ಬಾಗಿಲು. ನಗರದಲ್ಲಿ ಜನರ ಓಡಾಟ, ವಾಹನಗಳ ಸಂಖ್ಯೆ ಹೆಚ್ಚಾದಂತೆ ಸಂಚಾರ ದಟ್ಟಣೆಯು ಹೆಚ್ಚುತ್ತಿದೆ. ಇವೆಲ್ಲದಕ್ಕೂ ಪರಿಹಾರವೆಂದು ನಾಲ್ಕು ವರ್ಷದ ಹಿಂದೆ, ಚನ್ನಮ್ಮ ವೃತ್ತವನ್ನು ಕೇಂದ್ರವಾಗಿ ಇಟ್ಟುಕೊಂಡು ಮೇಲ್ಸೇತುವೆ ನಿರ್ಮಾಣದ ಬೃಹತ್ ಯೋಜನೆ ಕೈಗೊಳ್ಳಲಾಯಿತು.

ಮುಗಿಯದ ಕಾಮಗಾರಿ: 2021ರ ಜನವರಿಯಲ್ಲಿ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಯೋಜನೆಗೆ ಚಾಲನೆ ನೀಡಿದ್ದರು. ಕಾಮಗಾರಿ ಅನುಷ್ಠಾನದ ಉಸ್ತುವಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಲೋಕೋಪಯೋಗಿ ಇಲಾಖೆ ವಹಿಸಿಕೊಂಡಿದೆ. ದೆಹಲಿಯ ಜಂಡು ಕನ್‌ಸ್ಟ್ರಕ್ಷನ್ ಪ್ರೈ.ಲಿ. ಮತ್ತು ರಾಮಕುಮಾರ ಕಾಂಟ್ರಾಕ್ಟರ್ ಕಂಪನಿ ಗುತ್ತಿಗೆ ಪಡೆದಿವೆ. 3.9 ಕಿ.ಮೀ. ಉದ್ದದ ಯೋಜನೆಯ ₹349.49 ಕೋಟಿ ಸಂಪೂರ್ಣ ವೆಚ್ಚವನ್ನು ಕೇಂದ್ರವೇ ಭರಿಸಿದೆ.

ಕಾಮಗಾರಿಯು 2024ರ ಜೂನ್‌ನಲ್ಲಿ ಮುಗಿಯಬೇಕಿತ್ತು. ಆದರೆ, ಕೆಲಸವು ಆಮೆಗತಿಯಲ್ಲಿ ಸಾಗುತ್ತಿದ್ದು, ಮುಗಿಯಲು ಇನ್ನು ಎರಡು ವರ್ಷವಾದರೂ ಹಿಡಿಯಬಹುದು.

ನಿತ್ಯ 2.5 ಲಕ್ಷ ವಾಹನ ಸಂಚಾರ: ಚನ್ನಮ್ಮ ವೃತ್ತದ ಸುತ್ತಮುತ್ತ ಪ್ರತಿನಿತ್ಯ ನಾಲ್ಕು ಲಕ್ಷದಷ್ಟು ವಾಹನಗಳು ಸಂಚರಿಸುತ್ತವೆ. ನಗರದಲ್ಲಿಯೇ ಪ್ರಮುಖ ವ್ಯಾಪಾರ ವಹಿವಾಟು ಕೇಂದ್ರಗಳಿರುವುದರಿಂದ ಉತ್ತರ ಕನ್ನಡ, ಹಾವೇರಿ, ಗದಗ, ಬೆಳಗಾವಿ ಭಾಗದಿಂದ ನಿತ್ಯ ಸಾವಿರಾರು ಮಂದಿ ಬರುತ್ತಾರೆ. ನಾಲ್ಕು ಸಾವಿರದಷ್ಟು ಸರ್ಕಾರಿ ಮತ್ತು ಖಾಸಗಿ ಬಸ್‌ಗಳು, 50 ಸಾವಿರದಷ್ಟು ದ್ವಿಚಕ್ರ ವಾಹನಗಳು, 20 ಸಾವಿರ ಆಟೊಗಳು, 1 ಲಕ್ಷದಷ್ಟು ಕಾರ್, ಲಾರಿ, ಟ್ರಕ್ ಹಾಗೂ ಭಾರಿ ವಾಹನಗಳು ಸಂಚರಿಸುತ್ತವೆ. 2027ರ ವೇಳೆಗೆ ಒಂದು ತಾಸಿಗೆ 21 ಸಾವಿರ, 2037ರ ವೇಳೆಗೆ ಒಂದು ತಾಸಿಗೆ 40,742 ವಾಹನಗಳು ವೃತ್ತದ ಮೂಲಕ ಸಾಗಲಿವೆ.

ಕಾಮಗಾರಿಯಿಂದ ನೀಲಿಜಿನ್ ರಸ್ತೆ, ಕೊಪ್ಪಿಕರ್ ರಸ್ತೆಗಳು ಸಹ ವಾಹನಗಳ ಸಂಚಾರ ದಟ್ಟಣೆಯಿಂದ ಕೂಡಿರುತ್ತವೆ. ವಾಹನಗಳನ್ನು ಪಾರ್ಕ್ ಮಾಡಲು ಸಹ ಜಾಗವಿಲ್ಲದಂತಾಗಿದೆ.

ಹದಗೆಟ್ಟ ರಸ್ತೆಯಲ್ಲೇ ಸಂಚಾರ: ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವ 3.3 ಕಿ.ಮೀ. ಉದ್ದದ ಬಹುತೇಕ ರಸ್ತೆಗಳು ಸಂಪೂರ್ಣ ಹಾಳಾಗಿವೆ. ವ್ಯವಸ್ಥಿತ ವಾಹನ ಸಂಚಾರ ಅಸಾಧ್ಯದ ಮಾತಾಗಿದ್ದು, ಸಂಚಾರ ಪೊಲೀಸರು ಹೈರಾಣಾಗುತ್ತಿದ್ದಾರೆ.

ಗೋಕುಲ ರಸ್ತೆಯ ಬನ್ನಿಗಿಡ, ವಾಣಿವಿಲಾಸ ವೃತ್ತ, ಹೊಸೂರು ವೃತ್ತ, ಭಗತ್ ಸಿಂಗ್ ವೃತ್ತ, ಬಸವವನ, ಹಳೇ ಕೋರ್ಟ್ ವೃತ್ತ ಬಳಿ ಕಾಮಗಾರಿ ಶೇ 70ರಷ್ಟು ಮುಕ್ತಾಯವಾಗಿದೆ. ಚನ್ನಮ್ಮ ವೃತ್ತದ ಬಳಿ ರೋಟರ್ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಮೇಲ್ಸೇತುವೆಗಾಗಿ 30–40 ವರ್ಷದ 99 ಮರಗಳನ್ನು ಕಡಿಯಲಾಗಿದೆ. ಕಾಮಗಾರಿ ವಿಳಂಬದ ಕುರಿತು ವಾಹನ ಸವಾರರು, ಸಾರ್ವಜನಿಕರು ಹಾಗೂ ವ್ಯಾಪಾರಸ್ಥರಿಂದ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ.

ಮುಗಿಯದ ಭೂಸ್ವಾಧೀನ: ಸಂಗೊಳ್ಳಿ ರಾಯಣ್ಣ ವೃತ್ತದಿಂದ ಅಶೋಕ ಟವರ್ ಹೋಟೆಲ್‌ವರೆಗಿನ ಅಕ್ಕಪಕ್ಕದ ಜಾಗ ಭೂಸ್ವಾಧೀನಕ್ಕೆ ಗುರುತಿಸಲಾಗಿದೆ. ಪರಿಹಾರ ಹಂಚಿಕೆ ಸಮಸ್ಯೆ ಇತ್ಯರ್ಥದ ಕೊನೆ ಹಂತದಲ್ಲಿದ್ದು, ಅದು ಪೂರ್ಣಗೊಂಡ ನಂತರ ಆ ಭಾಗದಲ್ಲಿ ಕಾಮಗಾರಿ ನಡೆಸಲಾಗುವುದು ಎಂದು ಅಧಿಕಾರಿಗಳು ಹೇಳುತ್ತಾರೆ.

ವೈಜ್ಞಾನಿಕವಾಗಿ ಅಧ್ಯಯನ ನಡೆಸದೆ ಯೋಜನೆ ಅನುಷ್ಠಾನಗೊಳಿಸಿದ್ದು ಇಷ್ಟೆಲ್ಲ ಸಮಸ್ಯೆಗಳಿಗೆ ಕಾರಣ ಎನ್ನುವ ಆರೋಪ ಕೇಳಿಬರುತ್ತಿದೆ. ಭೂಸ್ವಾಧೀನಕ್ಕೊಳಗಾದ ಖಾಸಗಿ ಆಸ್ತಿಗಳಿಗೆ ಪರಿಹಾರ ನೀಡಲಾಗಿದೆ. ಆದರೆ, ಸರ್ಕಾರಿ ಆಸ್ತಿಗಳಿಗೆ ಪರಿಹಾರ ಕೇಂದ್ರ ಸರ್ಕಾರ ನೀಡಬೇಕೋ, ರಾಜ್ಯ ಸರ್ಕಾರ ನೀಡಬೇಕೋ ಎನ್ನುವ ಗೊಂದಲವಿದೆ. ಪೊಲೀಸ್ ಇಲಾಖೆ ಹಾಗೂ ಮಹಾನಗರ ಪಾಲಿಕೆಗೆ ಸೇರಿದ ಸರ್ಕಾರಿ ಆಸ್ತಿಗಳಿಗೆ ₹62 ಕೋಟಿ ಪರಿಹಾರ ನೀಡಬೇಕಿದೆ.

ಚನ್ನಮ್ಮ ವೃತ್ತದ ಪ್ರಾಮುಖ್ಯ

ಚನ್ನಮ್ಮ ವೃತ್ತಕ್ಕೆ ಭಾರಿ ಮಹತ್ವವಿದೆ. ನಾಲ್ಕು ರಾಷ್ಟ್ರೀಯ ಹೆದ್ದಾರಿಗಳು (ಎನ್‌ಎಚ್‌-4 ಎರಡು ಕಡೆ, ಎನ್‌ಎಚ್‌-63, ಎನ್‌ಎಚ್‌-218) ಮತ್ತು ಮೂರು ರಾಜ್ಯ ಹೆದ್ದಾರಿಗಳು ಈ ವೃತ್ತದ ಮೂಲಕ ಸಾಗಿಹೋಗುತ್ತವೆ. ಸದಾ ಜನಜಂಗುಳಿ, ವಾಹನಗಳ ಸಂಚಾರದಿಂದ ಕೂಡಿರುವ ಈ ವೃತ್ತದ ಮಧ್ಯೆ ಅಶ್ವಾರೂಢ ರಾಣಿ ಚನ್ನಮ್ಮ ಪ್ರತಿಮೆ ಇದೆ. ಇದು ಹುಬ್ಬಳ್ಳಿಯ ಪಾಲಿಗೆ ಶೌರ್ಯ ಮತ್ತು ಹೆಮ್ಮೆಯ ಸಂಕೇತ. ಆದರೆ, ಈಗ ಕಾಮಗಾರಿಯಿಂದ ಪ್ರತಿಮೆ ಕಾಣದಂತಾಗಿದೆ. ವೃತ್ತವು ತನ್ನ ವೈಶಿಷ್ಟ್ಯ ಕಳೆದುಕೊಂಡಿದೆ.

ಕಾಮಗಾರಿ ಪೂರ್ಣಗೊಂಡ ಬಳಿಕ ಚನ್ನಮ್ಮ ಪ್ರತಿಮೆಯನ್ನು ಎತ್ತರಕ್ಕೇರಿಸಿ, ಪ್ರತಿಷ್ಠಾಪಿಸಲಾಗುವುದು ಎಂದು ಹೇಳಲಾಗುತ್ತಿದೆ. ಆದರೆ, ಇದರ ಬಗ್ಗೆ ಇನ್ನೂ ಸ್ಪಷ್ಟತೆಯಿಲ್ಲ. ಮೇಲ್ಸೇತುವೆ ಪ್ರಮುಖ ವರ್ತುಲ ಇದೇ ವೃತ್ತ ಆಗಿರುವುದರಿಂದ, ಚನ್ನಮ್ಮ ಪ್ರತಿಮೆ ವರ್ತುಲದ ಮಧ್ಯಭಾಗದಲ್ಲಿ ಇರಲಿದೆ. ಈಗಿನ ಸ್ಥಿತಿಯ ಲೆಕ್ಕಾಚಾರ ಹಾಕಿದರೆ, ಕಾಮಗಾರಿ ಮುಗಿದ ಬಳಿಕ ಪ್ರತಿಮೆಯ ತಲೆಭಾಗ ಮಾತ್ರ ಕಾಣಿಸಲಿದೆ. 'ಮೊದಲು ಕಾಮಗಾರಿ ಮುಗಿಯಲಿ. ನಂತರ ಅದರ ಬಗ್ಗೆ ನಿರ್ಧರಿಸಿದರಾಯಿತು' ಎನ್ನುವುದು ಸದ್ಯದ ಲೆಕ್ಕಾಚಾರ.

ವಾಣಿಜ್ಯ ಚಟುವಟಿಕೆಗೆ ಧಕ್ಕೆ

ಕಾಲಮಿತಿಯಲ್ಲಿ ಕಾಮಗಾರಿ ಮುಗಿಯದ ಕಾರಣ ಚನ್ನಮ್ಮ ವೃತ್ತದ ಸುತ್ತಮುತ್ತಲಿನ ವಾಣಿಜ್ಯ ಚಟುವಟಿಕೆಗಳಿಗೆ ಭಾರಿ ಪೆಟ್ಟು ಬಿದ್ದಿದೆ. ಇದೇ ವರ್ಷ ಏಪ್ರಿಲ್ 19ರಿಂದ 135 ದಿನ (ನಾಲ್ಕೂವರೆ ತಿಂಗಳು) ಚನ್ನಮ್ಮ ವೃತ್ತ ಕೇಂದ್ರವಾಗಿಟ್ಟುಕೊಂಡು ಬಸವವನದಿಂದ ಹಳೇ ಕೋರ್ಟ್ ವೃತ್ತದವರೆಗೂ ವಾಹನಗಳ ಸಂಚಾರ ಬಂದ್ ಮಾಡಿ, ಕಾಮಗಾರಿ ನಡೆಸಲಾಯಿತು. ಆಗಷ್ಟೇ ನಿರ್ಮಾಣವಾಗಿ ಉದ್ಘಾಟನೆಯಾಗಿದ್ದ ಹಳೇ ಬಸ್ ನಿಲ್ದಾಣ ಸಹ ಈ ವೇಳೆ ಬಂದ್ ಆಗಿತ್ತು.

ಹೋಟೆಲ್, ಆಟೊಮೊಬೈಲ್, ಕೃಷಿ ಯಂತ್ರೋಪಕರಣ ಮಳಿಗೆ, ಬಟ್ಟೆ ಅಂಗಡಿ, ವಸತಿ ಗೃಹ, ಮೊಬೈಲ್ ಮಳಿಗೆ, ಬೇಕರಿ, ಔಷಧ ಅಂಗಡಿಯ ವ್ಯಾಪಾರಸ್ಥರು ನಷ್ಟದ ಹಾದಿಯಲ್ಲಿ ಇದ್ದಾರೆ. ಪ್ರತಿನಿತ್ಯ ನೂರಾರು ಕೋಟಿ ವ್ಯವಹಾರ ನಡೆಯುತ್ತಿತ್ತು. ಕಾಮಗಾರಿ ಆರಂಭವಾದಂದಿನಿಂದ ಶೇ 70ರಷ್ಟು ವ್ಯಾಪಾರ ವಹಿವಾಟು ಕುಂಠಿತವಾಗಿದೆ. ಸಣ್ಣ ವ್ಯಾಪಾರಸ್ಥರು ಅಂಗಡಿಗಳ ಬಾಡಿಗೆ ಹಣ ಸಹ ನೀಡಲಾಗದೆ, ಖಾಲಿ ಮಾಡಿಕೊಂಡು ಹೋಗಿದ್ದಾರೆ ಎಂದು ನವಲೆ ಬಟ್ಟೆ ಅಂಗಡಿ ಮಾಲೀಕ ಉಮೇಶ ನವಲೆ ಅಳಲು ತೋಡಿಕೊಂಡರು.

ಅಭಿವೃದ್ಧಿಗೆ ಹಿನ್ನಡೆ

ಉತ್ತರ ಕರ್ನಾಟಕ ಜಿಲ್ಲೆಗಳನ್ನು ಅಭಿವೃದ್ಧಿಗೊಳಿಸಬೇಕು ಎನ್ನುವುದು ಜನರ ಒತ್ತಡ ಮತ್ತು ಸರ್ಕಾರದ ಆಶಯ. ಆದರೆ, ಹುಬ್ಬಳ್ಳಿ-ಧಾರವಾಡ ಸುತ್ತಮುತ್ತ ನಡೆಯುತ್ತಿರುವ ಸಾವಿರಾರು ಕೋಟಿ ವೆಚ್ಚದ ಕಾಮಗಾರಿಗಳ ಕಥೆಯು ಮೇಲ್ಸೇತುವೆಗಿಂತ ಭಿನ್ನವಾಗಿಯೇನೂ ಇಲ್ಲ.

ಬೆಂಗಳೂರು-ಪುಣೆ ಸಂಪರ್ಕಿಸುವ ಎಂಟು ಪಥಗಳ ಹುಬ್ಬಳ್ಳಿ-ಧಾರವಾಡ ಬೈಪಾಸ್ ರಾಷ್ಟ್ರೀಯ ಹೆದ್ದಾರಿಯು ₹1,200 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ಗಡುವು ಮೀರಿದ್ದರೂ ಕಾಮಗಾರಿ ಮುಗಿದಿಲ್ಲ. ಹುಬ್ಬಳ್ಳಿ-ಧಾರವಾಡ ಹೊರವಲಯದಲ್ಲಿ ವರ್ತುಲ ರಸ್ತೆ ನಿರ್ಮಿಸಲಾಗುತ್ತಿದೆ. ಭೂಸ್ವಾಧೀನ ಪ್ರಕ್ರಿಯೆ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳು ಕಾಣಿಸಿಕೊಂಡಿವೆ. ಈ ಭಾಗದಲ್ಲಿ ಮೂಲಸೌಕರ್ಯ ವೃದ್ಧಿಗೆ ಇದರಿಂದ ತೊಡಕಾಗಿದೆ.

ಮೇಲ್ಸೇತುವೆ ನಿರ್ಮಾಣ ರಾಜ್ಯ ಸರ್ಕಾರದ ಯೋಜನೆಯಾಗಿದ್ದರೂ ಕೇಂದ್ರ ಸರ್ಕಾರ ವಿಶೇಷ ಅನುದಾನ ನೀಡಿದೆ. ಕಾಮಗಾರಿ ಶೀಘ್ರ ಮುಗಿಸುವುದು ರಾಜ್ಯದ ಹೊಣೆ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಮೇಲ್ಸೇತುವೆಯ ಶೇ 20ರಷ್ಟು ಕಾಮಗಾರಿ ಮಾತ್ರ ಬಾಕಿಯಿದ್ದು, 2026ರ ಮಾರ್ಚ್‌ನಲ್ಲಿ ಸಾರ್ವಜನಿಕರಿಗೆ ಮುಕ್ತಗೊಳಿಸಲು ನಿರ್ಧರಿಸಲಾಗಿದೆ
ಸತೀಶ ನಾಗನೂರು, ಸಹಾಯಕ ಎಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ, ಲೋಕೋಪಯೋಗಿ ಇಲಾಖೆ

ರಾಷ್ಟ್ರೀಯ


ಅಸ್ಸಾಂ ಸಚಿವ ಸಂಪುಟದ ನಿರ್ಧಾರ ವಿರೋಧಿಸಿ ಕೊಕ್ರಾಜಾರ್‌ನ ಬೋಡೊಲ್ಯಾಂಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ತೃಪ್ತಿ ನೀಡಿದ ಎಸ್‌.ಟಿ ವರದಿ'

ಗುವಾಹಟಿ, ಅಸ್ಸಾಂ (ಪಿಟಿಐ): 'ರಾಜ್ಯದ ಪ್ರಮುಖ ಆರು ಸಮುದಾಯಗಳಿಗೆ ಪರಿಶಿಷ್ಟ ಪಂಗಡ (ಎಸ್‌.ಟಿ) ಸ್ಥಾನಮಾನ ನೀಡುವ ವರದಿ ಅಂಗೀಕರಿಸಲು ಸರ್ಕಾರ ನಿರ್ಧಾರ ತೆಗೆದುಕೊಳ್ಳುವ ಮೂಲಕ ಎಲ್ಲ ಜನರನ್ನು ತೃಪ್ತಿಪಡಿಸಲಾಗಿದೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ವರದಿಯು ಅಸ್ಪಷ್ಟವಾಗಿದೆ ಎಂಬ ವಿರೋಧ ಪಕ್ಷಗಳ ಆರೋಪವನ್ನು ತಿರಸ್ಕರಿಸಿದ ಅವರು, ಎಲ್ಲ ವಿಚಾರಗಳಿಗೆ ಬೆಂಬಲ ಹಾಗೂ ಅಸಮ್ಮತಿ ಇರುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ತಾಯಿ ಅಹೋಮ್, ಚುಟಿಯಾ, ಮೋರಾನ್, ಮಟಕ್, ಕೋಚ್ ರಾಜಬೊಂಗ್ಸಿ ಹಾಗೂ ಚಾಯ್ ಬಗಾನ್ ಸಮುದಾಯಗಳಿಗೆ ಎಸ್‌.ಟಿ ಸ್ಥಾನಮಾನ ನೀಡುವ ಬೇಡಿಕೆ ಕುರಿತು ಸಚಿವರ ತಂಡವು ತಮ್ಮ ವರದಿಯನ್ನು ರಾಜ್ಯ ವಿಧಾನಸಭೆಯಲ್ಲಿ ಶನಿವಾರ ಮಂಡಿಸಿತು. ಈ ಸಮುದಾಯಗಳಿಗೆ ಎಸ್‌.ಟಿ ಮಾನ್ಯತೆ ಸಿಕ್ಕರೆ, ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ದೊರೆಯಲಿದೆ.

'ವರದಿ ಬಹಿರಂಗಗೊಂಡಿದ್ದು, ಯಾರು ಬೇಕಾದರೂ ವೀಕ್ಷಿಸಬಹುದು. ಈ ವರದಿಯು ಸಮಾಜದ ಎಲ್ಲ ವರ್ಗದ ಜನರನ್ನು ಸಂತೃಪ್ತಿಪಡಿಸಲಿದೆ' ಎಂದು ಶರ್ಮಾ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಆಕ್ರೋಶ: ಸರ್ಕಾರದ ನಿರ್ಧಾರವನ್ನು ಖಂಡಿಸಿ ಬೋಡೊ ಸಮುದಾಯದ ವಿದ್ಯಾರ್ಥಿಗಳು ಶನಿವಾರ ಬೋಡೊಲ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಬೋಡೊಲ್ಯಾಂಡ್ ಪ್ರಾದೇಶಿಕ ಕಚೇರಿಯ (ಬಿಟಿಸಿ) ಆವರಣಕ್ಕೆ ನುಗ್ಗಿ ಪಿಠೋಪಕರಣಗಳನ್ನು ಮುರಿದು, ಹೂಕುಂಡಗಳನ್ನು ನಾಶಪಡಿಸಿದರು.

ಅಸ್ಸಾಂನ ಪರಿಶಿಷ್ಟ ಪಂಗಡದಲ್ಲಿ ಸದ್ಯ 'ಬೋಡೊ' ಅತೀ ದೊಡ್ಡ ಸಮುದಾಯವಾಗಿದ್ದು, ಹೊಸ ಸಮುದಾಯಗಳ ಸೇರ್ಪಡೆಯಿಂದ ಸ್ಪರ್ಧೆ ಹೆಚ್ಚಾಗಿ ಅವಕಾಶ ಕಡಿಮೆಯಾಗಲಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ರಾಜ್ಯ ಸರ್ಕಾರಕ್ಕೆ ಸಮಸ್ಯೆ ಬಗೆಹರಿಸುವ ಇಚ್ಛೆ ಇಲ್ಲ. ಹೀಗಾಗಿಯೇ, ಅಸ್ಪಷ್ಟ ವರದಿಯನ್ನು ಮಂಡಿಸಿ, ಉಳಿದ ವಿಚಾರವನ್ನು ಕೇಂದ್ರ ಸರ್ಕಾರಕ್ಕೆ ಬಿಡಲಾಗಿದೆ
ದೇವವ್ರತ ಸೈಕಿಯಾ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಆರು ಸಮುದಾಯಗಳಿಗೆ ಎಸ್‌.ಟಿ ಸ್ಥಾನಮಾನ ನೀಡುವ ಯಾವ ಉದ್ದೇಶವೂ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಇಲ್ಲ
ರಫೀಕುಲ್ ಇಸ್ಲಾಂ, ಎಐಯುಡಿಎಫ್ ನಾಯಕ

2080ಕ್ಕೆ ದೇಶದ ಜನಸಂಖ್ಯೆಯಲ್ಲಿ ಸ್ಥಿರತೆ

ಕೋಲ್ಕತ್ತ (ಪಿಟಿಐ): ಫಲವಂತಿಕೆ ದರ (ಫರ್ಟಿಲಿಟಿ ರೇಟ್) ಕುಸಿತದಿಂದಾಗಿ ದೇಶದ ಜನಸಂಖ್ಯೆಯು 2080ರ ವೇಳೆಗೆ ಸ್ಥಿರಗೊಳ್ಳುವ ನಿರೀಕ್ಷೆಯಿದೆ ಎಂದು ಇಂಡಿಯನ್ ಅಸೋಸಿಯೇಷನ್ ಫಾರ್ ದಿ ಸ್ಟಡಿ ಆಫ್ ಪಾಪುಲೇಷನ್ (ಐಎಎಸ್‌ಪಿ) ಹೇಳಿದೆ.



ಪ್ರಸ್ತುತ ಫಲವಂತಿಕೆಯ ದರ 1.9ರಷ್ಟಿದ್ದು, ಕಳೆದ ಎರಡು ದಶಕಗಳಲ್ಲಿ ಜನನ ಪ್ರಮಾಣವು ತೀವ್ರವಾಗಿ ಕುಸಿಯುತ್ತಿದೆ ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ನಮ್ಮ ದೇಶದ ಫಲವಂತಿಕೆಯ ಒಟ್ಟು ದರ 2000ನೇ ಇಸ್ವಿಯಲ್ಲಿ ಶೇಕಡ 3.5ರಷ್ಟಿತ್ತು. ಇದೀಗ ಶೇ 1.9ಕ್ಕೆ ನಿಂತಿದ್ದು, ತೀವ್ರವಾಗಿ ಕುಸಿತಗೊಂಡಿದೆ' ಎಂದು ಐಎಎಸ್‌ಪಿ ಪ್ರಧಾನ ಕಾರ್ಯದರ್ಶಿ ಅನಿಲ್ ಚಂದ್ರನ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ದೇಶದ ಜನಸಂಖ್ಯೆಯು 2080ರ ವೇಳೆಗೆ 180 ಕೋಟಿ ಅಥವಾ 190 ಕೋಟಿಗೆ ಏರಿಕೆಯಾಗುವ ನಿರೀಕ್ಷೆಯಿದೆ. ಬೆಳವಣಿಗೆ ದರವೂ ಸ್ಥಿರಗೊಳ್ಳುವ ನಿರೀಕ್ಷೆಯಿದೆ. ಈಗಿನ ಎಲ್ಲ ಅಂದಾಜುಗಳು, ಭಾರತದ ಗರಿಷ್ಠ ಜನಸಂಖ್ಯೆಯು 200 ಕೋಟಿಗಿಂತ ಕಡಿಮೆಯಿರುತ್ತದೆ ಎಂಬುದನ್ನು ತೋರಿಸುತ್ತಿವೆ' ಎಂದಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ದುಬೈ ಏರ್‌ಶೋನಲ್ಲಿ ಭಾರತ ನಿರ್ಮಿತ ತೇಜಸ್ ಯುದ್ಧ ವಿಮಾನ ಪತನಗೊಂಡ ನಂತರ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ತುಣುಕೊಂದು ಹರಿದಾಡುತ್ತಿದೆ. ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಅವರು ತೇಜಸ್ ಯುದ್ಧವಿಮಾನದ ವಿರುದ್ಧವಾಗಿ ಮಾತನಾಡಿದ್ದಾರೆ ಎನ್ನಲಾದ ವಿಡಿಯೊದ ತುಣುಕು ಅದು. 'ಈ ವಿಮಾನವನ್ನು ವಾಯುಪಡೆಗೆ ಸೇರಿಸಬೇಡಿ ಎಂದು ನಾನು ಭಾರತ ಸರ್ಕಾರಕ್ಕೆ ಈ ಹಿಂದೆಯೇ ಹೇಳಿದ್ದೆ. ಆದರೆ, ನಮ್ಮ ಮಾತನ್ನು ಅವರು ಕೇಳಲಿಲ್ಲ. ನೋಡಿ ಇವತ್ತು ಏನಾಗಿದೆ? ಇದು ವಿಮಾನ ಅಲ್ಲ. ಸಮೋಸ. ಸಮೋಸಗಳು ಹಾರಾಡುವುದಕ್ಕೆ ಇರುವುದಲ್ಲ' ಎಂದು ಸಿಂಗ್ ಅವರು ಹೇಳುತ್ತಿರುವುದು ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು.



ವಿಡಿಯೊದ ಕೀಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಇಂಡಿಯಾ ಟುಡೇ ಗ್ಲೋಬಲ್ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾದ ವಿಡಿಯೊ ಸಿಕ್ಕಿತು. ವಾಯುಪಡೆ ಮುಖ್ಯಸ್ಥ ಮಾತನಾಡುವ ವಿಡಿಯೊ ಅದಾಗಿದ್ದು, ಜಾಲತಾಣಗಳಲ್ಲಿ ಹಂಚಲಾಗುತ್ತಿರುವ ವಿಡಿಯೊದ ರೀತಿಯಲ್ಲೇ ಇತ್ತು. 93ನೇ ಭಾರತೀಯ ವಾಯು ಪಡೆ ದಿನದ ಅಂಗವಾಗಿ ಎ.ಪಿ.ಸಿಂಗ್ ಅವರು ಸುದ್ದಿಗೋಷ್ಠಿ ಮಾಡಿದ್ದ ವಿಡಿಯೊ ಅದಾಗಿತ್ತು. ಪೂರ್ತಿ ವಿಡಿಯೊವನ್ನು ಪರಿಶೀಲಿಸಿದಾಗ, ಈಗ ಹರಿದಾಡುತ್ತಿರುವ ವಿಡಿಯೊದಲ್ಲಿ ಇರುವಂತೆ ಅವರು ಹೇಳಿದ್ದು ಕಂಡು ಬರಲಿಲ್ಲ. ಅನುಮಾನ ಬಂದು, ವಿಡಿಯೊದಲ್ಲಿರುವ ಧ್ವನಿಯನ್ನು ಪ್ರತ್ಯೇಕಿಸಿ ರೆಸೆಂಬಲ್ ಎಐ ಪತ್ತೆ ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ಕೃತಕವಾಗಿ ಸೃಷ್ಟಿಸಿದ ಧ್ವನಿ ಎಂಬುದು ದೃಢಪಟ್ಟಿತು. ವಾಯುಪಡೆ ಮುಖ್ಯಸ್ಥರು ತೇಜಸ್ ವಿರುದ್ಧವಾಗಿ ಮಾತನಾಡಿರುವಂತೆ ಎಐ ಮೂಲಕ ವಿಡಿಯೊ ಸೃಷ್ಟಿಸಿ ತಪ್ಪಾಗಿ ಹಂಚಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ಆಸೆ ನಿರಾಸೆಗಳ ನಡುವೆ ಒಲವಿನ ಮಾಧುರ್ಯ

ನುಡಿ ಬೆಳಗು — ದಾದಾಪೀರ್ ನವಿಲೇಹಾಳ್



ಡಾ. ರಾಜಕುಮಾರ್ ಹಾಡಿದ 'ಬಾನಿಗೊಂದು ಎಲ್ಲೆ ಎಲ್ಲಿದೆ?' ಎಂಬ ಗೀತೆಯನ್ನು ಎಲ್ಲಿಯೇ ಆಗಲಿ ಯಾರಾದರೂ ಕೇಳಿಸಿಕೊಳ್ಳಲಿ, ಇದು ತನಗೇ ಸಂಬಂಧಿಸಿದಂತಿರುವ ಹಾಡು ಅನಿಸುತ್ತದೆ. ಹೌದು, ಮನುಷ್ಯನ ಬದುಕಿನಲ್ಲಿ ಆಸೆ ನಿರಾಸೆಗಳು ಅನೂಹ್ಯವಾದ ತಿರುವುಗಳನ್ನು, ಬಿಕ್ಕಟ್ಟುಗಳನ್ನು ಹುಟ್ಟಿಸುತ್ತವೆ. ಅವುಗಳು ತಂತಮ್ಮ ಪಾಲಿನ ಪರಿಣಾಮದಲ್ಲಿ ಪರ್ಯವಸಾನವಾಗುತ್ತವೆ. ಅನಿಶ್ಚಿತ ಸ್ವರೂಪದ ಬದುಕಿನಲ್ಲಿ ಇಂಥದೇ ಪುಣ್ಯಭೂಮಿಯಲ್ಲಿ, ಇಂಥವರ ಮಕ್ಕಳಾಗಿಯೇ ಹುಟ್ಟಬೇಕು ಎನ್ನುವ ಯಾವುದರ ಆಯ್ಕೆಯೂ ನಮಗಿರುವುದಿಲ್ಲ. ಇರುವುದು ಒಂದೇ, ಅದು ಎಂಥವರ ಒಲವನ್ನು ಸಂಪಾದಿಸಬೇಕು ಅಥವಾ ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು ಎನ್ನುವುದು. ನಾವು ಬಯಸಿದ ಒಲವು ದೊರೆತರೆ ನಾವು ಸುಖವಾಗಿರಬಹುದು ಎಂಬುದು ಸಹಜವಾದ ನಿರೀಕ್ಷೆ. ಆದರೆ ಹಾಗೇ ಆಗುತ್ತದೆ ಎಂಬ ಖಾತ್ರಿಯಿಲ್ಲ. ಸಾಮಾಜಿಕ ಒತ್ತಡದಿಂದ ಉಂಟಾದ ಸಂಬಂಧದಲ್ಲಿ ಒಲವಿಗಿಂತ ಹೆಚ್ಚಾಗಿ ಹೊಂದಾಣಿಕೆಯೇ ಬದುಕನ್ನು ರೂಪಿಸುತ್ತದೆ. ಅಪರೂಪದ ಸಂದರ್ಭಗಳಲ್ಲಿ ಎಲ್ಲ ಬಗೆಯ ನೈತಿಕ ಸೀಮೆಯನ್ನು ಮೀರಿದ ಸಂಬಂಧಗಳು ಒಲವನ್ನು ಉಳಿಸಿಕೊಳ್ಳಲು ಹೆಣಗಾಡುತ್ತವೆ.


ಜನ್ನನ ಯಶೋಧರ ಚರಿತೆಯ ಅಮೃತಮತಿಯ ಒಲವನ್ನು ಅನೈತಿಕ ಎಂದು ತೀರ್ಮಾನಿಸಿದ ಸಮಾಜ ಆಕೆಯ ಮೇಲಿನ ದೈಹಿಕ ಹಲ್ಲೆಯನ್ನು ದೌರ್ಜನ್ಯ ಎಂದು ಭಾವಿಸದೆ ಇರುವುದು ಆಶ್ಚರ್ಯವೇನಲ್ಲ. ಆಕೆಯ ಎಲ್ಲ ಬಗೆಯ ಸೀಮೋಲ್ಲಂಘನ ಸ್ವರೂಪದ ಒಲವನ್ನು ಪಡೆದ ಅಷ್ಟಾವಂಕ ಅನಾಗರಿಕನಂತೆ ವರ್ತಿಸುವುದು ಅವನಿಗೂ ಅಸಹಜವಲ್ಲ. ಅರಸಿಯೊಬ್ಬಳ ಪ್ರೇಮ ಅನಾಯಾಸವಾಗಿ ತನ್ನನ್ನು ಅರಸಿಕೊಂಡು ಬಂದ ಬಗೆಯನ್ನು ಅಮಿತವಾದ ಉಲ್ಲಾಸದಿಂದ ಸ್ವೀಕರಿಸುವುದೂ ಅವನಿಗೆ ಅಪರಿಚಿತ ನಡವಳಿಕೆಯಾಗುತ್ತದೆ. ಸಂಪೂರ್ಣ ಸಮರ್ಪಣೆಯ ಪ್ರೀತಿಯನ್ನು ಉಳಿಸಿಕೊಳ್ಳಲು ಅವನಿಂದ ಪ್ರಜ್ಞಾಪೂರ್ವಕ ಪ್ರಯತ್ನಗಳೂ ನಡೆಯುವುದಿಲ್ಲ. ಇಡೀ ಕಾವ್ಯದ ಧ್ವನಿ ವಿರಕ್ತಕೇಂದ್ರಿತವಾಗಿರುವುದರಿಂದ ಇಂಥ ಲೌಕಿಕ ಪ್ರಶ್ನೆಗಳು ಅಲ್ಲಿ ಪ್ರಸ್ತುತವಾಗುವುದಿಲ್ಲ.

ಈ ಹೊತ್ತಿನ ಸರಕುನಿಷ್ಠ ಭೋಗದ ಸಮಾಜದಲ್ಲಿ ಒಲವು ಕೂಡ ಲೌಕಿಕ ಸುಖಾಪೇಕ್ಷೆಯ ಸಾಧನವಾಗಿ ಕಾಣುತ್ತದೆ. ಹೆಣ್ಣುಗಂಡಿನ ನಡುವಿನ ಬಾಂಧವ್ಯವು ಇಬ್ಬರ ದುಡಿಮೆಯ ಲಾಭನಷ್ಟಗಳನ್ನು ಅವಲಂಬಿಸಿದೆ. ಹೆಚ್ಚು ಕಡಿಮೆಯ ಈ ಲೆಕ್ಕಾಚಾರದಲ್ಲಿ ಅಹಂ ಕೂಡಾ ಸೇರಿಕೊಂಡು ಒಲವು ಅರಳಬೇಕಾದ ಕಡೆ ಕೋಪ ಕೆರಳುತ್ತದೆ. ಭಾವಾತಿರೇಕದ ತೀವ್ರ ಸ್ಥಿತಿಯಲ್ಲಿ ಗಂಡು ದೈಹಿಕ ಹಲ್ಲೆಗೆ ಮುಂದಾಗುವ ಮೂಲಕ ತನ್ನ ದೌರ್ಬಲ್ಯವನ್ನು ಪ್ರಕಟಿಸಿದರೂ ಗಂಡಸುತನವನ್ನು ಸಾಬೀತುಪಡಿಸಿದ ಹೆಮ್ಮೆಯಿಂದ ಬೀಗುತ್ತಾನೆ, ಹೆಣ್ಣಿನಲ್ಲಿ ತನ್ನ ಬಗೆಗಿನ ಕ್ಷುದ್ರತೆಯನ್ನು ಇನ್ನಷ್ಟು ಗಾಢಗೊಳಿಸುತ್ತಾನೆ. ಈಗಿನ ದಿನಗಳಲ್ಲಿ ತಿಂಗಳಿಗೆ 4-5 ಲಕ್ಷ ರೂಪಾಯಿಗಳ ಸಂಪಾದನೆಯ ದಂಪತಿ ನಿತ್ಯವೂ ಕಿರುಚಾಡುವ ದೃಶ್ಯಗಳು ಸಾಮಾನ್ಯವಾಗಿವೆ. ಅದರಲ್ಲೂ ಇತರರಿಗೆ ನೈತಿಕ ಮೌಲ್ಯಗಳ ಸುದೀರ್ಘ ಪಾಠ ಮಾಡುವವರು ಒಲಿದು ಬಂದ ಹೆಣ್ಣನ್ನು ಹಾದಿ ಬೀದಿಯಲ್ಲಿ ಎಳೆದಾಡಿ ಅವಾಚ್ಯವಾಗಿ ನಿಂದಿಸುತ್ತಾ ಬಡಿಯುವುದು ಅಸಹ್ಯ ಹುಟ್ಟಿಸುತ್ತದೆ. ನೌಕರಿ ಪಡೆಯಲು ಅಗತ್ಯವಾದ ಪದವಿಗಳು ಬಾಳುವೆ ನಡೆಸುವಲ್ಲಿ ಅಷ್ಟಾವಂಕನ ಅನಾಗರಿಕತೆಯನ್ನು ನೆನಪಿಸುವುದಾದರೆ ನಿಜಕ್ಕೂ ನಾವು ಕಲಿತಿರುವುದೇನು?

ಆಸೆ ನಿರಾಸೆಗಳ ನಡುವೆ ಒಲವಿನ ಮಾಧುರ್ಯವನ್ನು ಸವಿಯಬೇಕು. ಒಲಿದ ಜೀವ ಬೆರೆತ ಮನಸು ಅರಿತ ಹೃದಯ ಪ್ರೀತಿ ಪಯಣದ ಪಲ್ಲವಿಯಾಗಬೇಕು.

ಪದಬಂಧ 6240

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಬೇರೆಯ ದೇಹ (4)
3.ಕಾಡಿನ ಪುಷ್ಪವಿದು (4)
5.ಹೊಟ್ಟೆ ಕಿಚ್ಚು ಈ ರೀತಿ ವ್ಯಕ್ತವಾಗಿದೆ (3)
6.ಈತ ತಿರುಪೆ ಬೇಡುವವನು (3)
8.ನೀರಿನ ಅಧಿದೇವತೆ (3)
9.ಅಂಗುಳಿನ ಒಳಭಾಗವಿಲ್ಲಿ ತಿರುವುಮುರುವಾಗಿದೆ (3)
10.ಗಾಡಿಯ ಚಕ್ರಗಳು ಬೀಳದಂತೆ ತಡೆಯುವ ಕೀಲು (3)
11.ವನದ ಕೊನೆಗೆ ಮಾಡಿದ ಹೋಮ (3)
12.ದುಮ್ಮಾನ ಬೇಡ! ಹಿಗ್ಗು ಹೀಗೆ ಬಂದಿದೆ! (3)
14.ಕಂಬದ ಹತ್ತಿರ ಸುರಿಸಿದ ಕಣ್ಣೀರು (3)
16.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
17.ನಡುವಿರುವ ಮಾವನಿಂದಾದ ಶೇಖರಣೆ! (4)

ಮೇಲಿಂದ ಕೆಳಕ್ಕೆ
1.ಪತಿಯೊಡನೆ ಬಂದಿರುವ ಕಾಲಾಳು (3)
2.ಈತ ನರಕಾಧಿಪತಿ (2)
3.ವಠಾರದಲ್ಲಿರುವ ಮದುವೆ ಗಂಡು (2)
4.ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
7.ಚಪ್ಪಾಳೆಯನ್ನು ಹೀಗೆನ್ನಿ (5)
8.ಈ ರೀತಿ ಗುಂಪುಗಳಾಗಿ ವಿಂಗಡಿಸು (5)
11.ಹರನನ್ನು ಸ್ತುತಿಸುತ್ತಿರುವ ಶೂರ (3)
13.ಹೊಸದಾಗಿ ಕಾಣುತ್ತಿರುವ ಧಾನ್ಯ! (3)
14.ಶ್ರೀಕೃಷ್ಣನ ಸೋದರ ಮಾವ (2)
15.ಯಜಮಾನಿ ನುಡಿದಿರುವ ಸತ್ಯ (2)

6239ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಜರು 3.ಅಭ್ಯಂತರ
5.ಬಳಪ 7.ವಿನಿಮಯ
9.ಗಗನಗಾಮಿ 11.ನಿರಾಯುಧ
13.ನವಿಲು 15.ಕರಣಿಕ
16.ಮದುಮಗ

ಮೇಲಿಂದ ಕೆಳಕ್ಕೆ:
2.ಹವಳ 3.ಅವನಿ
4.ತನಯ 5.ಬನವಾಸಿ
6.ಪರಾಗ 7.ವಿಧಾನಸೌಧ
8.ಅಹವಾಲು 10.ಮಿಥುನ
11.ನಿರ್ಜರ 12.ಯುವಕ
14.ವಿರಾಮ

ಸುಡೊಕು 6624

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				5		7		2
			6		7		8	1
		7		3		6		9
	6			1		8		7
7		9	5		3		1	
	8			9		3		5
	7		3		1			
5		6		2			7	
	3		9		5			8

6623 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಡಿಸೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಏಕಾದಶಿ ಗಂ. 19-02 **ನಕ್ಷತ್ರ:** ರೇವತಿ ಗಂ. 23-18 **ಯೋಗ:** ವ್ಯತೀಪಾತ ಗಂ. 24-59 **ಕರಣ:** ವಣಿಜ ಗಂ. 8-21 ವೃಶ್ಚಿಕ ಮಾಸದ 15 ನೇ ದಿನ. **ಮಳೆ ನಕ್ಷತ್ರ:** ಅನುರಾಧ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 - 09-00, **ಸೂರ್ಯೋದಯ:** 06-41 **ಸೂರ್ಯಾಸ್ತ:** 05-58, **ಮುಸ್ಲಿಂ ದಿನಾಂಕ:** 09 ಜುಮಾದುಸ್ಸಾನಿ, **ದಿನ ವಿಶೇಷ:** ಗೀತಾ ಜಯಂತಿ, **ಅದೃಷ್ಟ ಸಂಖ್ಯೆ:** 3, 8

ಮೇಷ: ಸಮಸ್ಯೆಯ ಗೋಪುರವನ್ನು ಹೊತ್ತಿರುವ ನಿಮಗೆ ಹಂತ ಹಂತವಾಗಿ ಪರಿಹಾರ ದೊರಕಲಿದೆ. ಕ್ರೀಡಾಪಟುಗಳು ತಮ್ಮ ಕ್ರೀಡೆಯಲ್ಲಿ ಉತ್ತಮ ಸಾಧನೆಯಿಂದ ಬಹುಮಾನದ ಜತೆಯಲ್ಲಿ ಗೌರವ ಗಳಿಸುವ ಯೋಗವಿದೆ.

ವೃಷಭ: ಗೊಂದಲಕ್ಕೆ ಬಂಧುಮಿತ್ರರಿಂದ ಸಲಹೆ ಪಡೆದು ಅಳವಡಿಸಿಕೊಳ್ಳುವುದರಿಂದ ಪ್ರಯೋಜನ ಪಡೆದುಕೊಳ್ಳಲಿದ್ದೀರಿ. ಮುತುವರ್ಜಿವಹಿಸಿ ಮಾಡಿದ ಕೆಲಸ ಸಣ್ಣ ಮಕ್ಕಳಿಂದಾಗಿ ಹಾಳಾಗಬಹುದು.

ಮಿಥುನ: ಮಕ್ಕಳ ವಿಚಾರವಾಗಿ ಇದ್ದ ಸಮಸ್ಯೆಗಳು ಶೀಘ್ರ ಪರಿಹಾರವಾಗುವ ಲಕ್ಷಣಗಳು ತೋರಿಬರುತ್ತವೆ. ತಾತ್ಕಾಲಿಕ ಹುದ್ದೆಯವರಿಗೆ ಕಾಯಂ ಆಗುವ ಸಾಧ್ಯತೆ ಇರುತ್ತದೆ. ಪ್ರಗತಿ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ಆತ್ಮೀಯರಿಂದ ಭೂಮಿಯ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆ. ಮಗಳಿಂದ ಶುಭ ಸುದ್ದಿ ಕೇಳುವಿರಿ. ಔಷಧ ಮಾರಾಟದಿಂದ ಸಂಪಾದನೆ ಹೆಚ್ಚಳ. ಅನುಭವ ಕಥೆಗಳನ್ನು ಹಂಚಿಕೊಳ್ಳಲಿದ್ದೀರಿ.

ಸಿಂಹ: ಇತರರಿಗೆ ಸಮಯ ನೀಡುವುದರಿಂದ ಸ್ವಂತ ಕೆಲಸಗಳು ನಿಧಾನ ಗತಿಯಲ್ಲಿ ಸಾಗಲಿವೆ. ಮಗಳಿಗೆ ಹೆಸರಿಡುವ ವಿಷಯವಾಗಿ ಚರ್ಚೆ ಆಗುತ್ತದೆ. ಉದ್ಯೋಗದಿಂದ ಒಳ್ಳೆಯ ಅನುಭವ ಸಿಗಲಿದೆ.

ಕನ್ಯಾ: ಅಕ್ಕ ಪಕ್ಕದ ಮನೆಯವರ ಉಪಟಳ ತಡೆಯಲಾಗದೆ ಏರುಧ್ವನಿಯಲ್ಲಿ ಮಾತನಾಡುವಿರಿ. ತಾಳ್ಮೆಯನ್ನು ಕಳೆದುಕೊಳ್ಳಬೇಡಿ. ಕನಸು ಕಾಣುವುದು ಮಾತ್ರವಲ್ಲದೆ ಅದನ್ನು ಸಾಕಾರಗೊಳಿಸಲು ಶ್ರಮವಹಿಸಿ.

ತುಲಾ: ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವ ಹಾದಿಯನ್ನು ನೋಡಿರಿ. ಸ್ಪರ್ಧಾತ್ಮಕ ಮನೋಭಾವವು ಅತ್ಯುನ್ನತ ಮಟ್ಟಕ್ಕೆ ಏರುವಂತೆ ಮಾಡುತ್ತದೆ. ಕ್ರಿಮಿಕೀಟಗಳಿಂದ ಅಲರ್ಜಿ ಉಂಟಾಗಬಹುದು.

ವೃಶ್ಚಿಕ: ಸವಾಲು ಸಾಮರ್ಥ್ಯದ ಬಗ್ಗೆ ಬಂದಾಗ ಎಂಥ ಕೆಲಸವನ್ನಾದರೂ ಮಾಡಲು ಮುಂದಾಗುತ್ತೀರಿ. ರಾಜಕೀಯ ವ್ಯವಹಾರಗಳ ಪ್ರಬಲ ಆಕಾಂಕ್ಷಿಯಾಗಿರುವ ನೀವು ಇನ್ನಷ್ಟು ಚುರುಕಾಗಬೇಕಾಗಿದೆ.

ಧನು: ಮಾನಸಿಕವಾಗಿ ಕುಗ್ಗದೇ ಧೈರ್ಯದಿಂದ ಇರುವುದು ಮೂಲ ಮಂತ್ರವಾಗಿರಲಿ. ನೂತನ ವಾಹನ ಕೊಳ್ಳುವ ಆಲೋಚನೆ ಬರಲಿದೆ. ಬ್ಯಾಂಕಿನ ಸಾಲಗಳು ತೀರಿ ನೆಮ್ಮದಿ ಮೂಡಲಿದೆ.

ಮಕರ: ಹೊಸ ವೃತ್ತಿಯ ವಿಚಾರವಾಗಿ ಅವಕಾಶಗಳು ಬರಲಿವೆ ಅದನ್ನು ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಅಧಿಕಾರಿಗಳ ಭೇಟಿಯಿಂದ ಕೆಲಸ ಕಾರ್ಯಗಳು ಏರು-ಪೇರಾಗುವುದು.

ಕುಂಭ: ಚಂಚಲ ಮನೋಭಾವದಿಂದಾಗಿ ಕೆಲವು ತೀರ್ಮಾನ ತೆಗೆದುಕೊಳ್ಳುವುದು ಕಷ್ಟಕರ ಎನಿಸುವುದು. ಕಲ್ಲಿನ ಅಥವಾ ಟೈಲ್ಸ್ ಕೆಲಸ ಮಾಡುವವರು ಉದ್ಯೋಗದಲ್ಲಿ ಜಾಗ್ರತೆ ವಹಿಸಿ. ಮನೆಯ ಕೆಲಸದಲ್ಲಿ ನಿರ್ಲಕ್ಷ್ಯ ಬೇಡ.

ಮೀನ: ಪೂರ್ಣ ಪ್ರಮಾಣದಲ್ಲಿ ಶ್ರಮ ಪಟ್ಟರೆ ಎಲ್ಲದರಲ್ಲಿ ಜಯಗಳಿಸಬಹುದು. ನಿರುದ್ಯೋಗಿಗಳಿಗೆ ಅವಕಾಶಗಳು ಒದಗಿ ಬರಲಿವೆ. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸುವಿರಿ.

ಗುಂಡಣ್ಣ



‘ರೆಪೊ ದರ ಕಡಿತ ನಿರೀಕ್ಷೆ’

3ರಿಂದ ಎಂಪಿಸಿ ಸಭೆ ಆರಂಭ, 5ರಂದು ನಿರ್ಧಾರ ಪ್ರಕಟ

ಮುಂಬೈ (ಪಿಟಿಐ): ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಈ ಬಾರಿ ರೆಪೊ ದರವನ್ನು ಶೇ 0.25ರಷ್ಟು ಕಡಿತ ಮಾಡುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ್ 3ರಿಂದ 5ರವರೆಗೆ ಸಭೆ ನಡೆಯಲಿದ್ದು, 5ರಂದು ಮಲ್ಹೋತ್ರಾ ಹಣಕಾಸು ನೀತಿಯ ನಿರ್ಧಾರವನ್ನು ಪ್ರಕಟಿಸಲಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ಕಳೆದ ಎರಡು ತಿಂಗಳಿನಿಂದ ಶೇ 2ರ ಒಳಗೆ ದಾಖಲಾಗಿದ್ದು, ಹಣದುಬ್ಬರದ ಒತ್ತಡ ಕಡಿಮೆ ಆಗಿದೆ. ಹೀಗಾಗಿ ರೆಪೊ ದರ ಇಳಿಕೆ ಮಾಡಬಹುದು ಎಂದು ಅಂದಾಜಿಸಲಾಗಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ನಿರೀಕ್ಷೆ ಮಾಡಿದ್ದಕ್ಕಿಂತಲೂ ಉತ್ತಮವಾಗಿ ದಾಖಲಾಗಿದೆ. ಆರ್ಥಿಕ ಚಟುವಟಿಕೆ ಚುರುಕುಗೊಂಡಿರುವುದು, ಜಿಎಸ್‌ಟಿ ದರ ಇಳಿಕೆಯಂತಹ ವಿವಿಧ ಅಂಶಗಳಿಂದಾಗಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಬಹುದು ಎಂದು ಕೆಲ ತಜ್ಞರು ಹೇಳಿದ್ದಾರೆ.

ಈ ವರ್ಷದ ಫೆಬ್ರುವರಿಯಿಂದ ಆಗಸ್ಟ್‌ವರೆಗೆ ರೆಪೊ ದರವನ್ನು ಶೇ 1ರಷ್ಟು ಕಡಿಮೆ ಮಾಡಲಾಗಿದೆ. ಪ್ರಸ್ತುತ ರೆಪೊ ದರ ಶೇ 5.5ರಷ್ಟಿದೆ.

‘ಕಾರ್ಪೊರೇಟ್ ಸಾಲ ಹೆಚ್ಚುವ ನಿರೀಕ್ಷೆ’

ನವದೆಹಲಿ (ಪಿಟಿಐ): ‘ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾರ್ಪೊರೇಟ್ ವಲಯಕ್ಕೆ ನೀಡುವ ಸಾಲವು ಉತ್ತಮ ಬೆಳವಣಿಗೆ ದಾಖಲಿಸುವ ನಿರೀಕ್ಷೆ ಇದೆ’ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅಧ್ಯಕ್ಷ ಸಿ.ಎಸ್. ಸೆಟ್ಟಿ ಹೇಳಿದ್ದಾರೆ.

ದೇಶದಲ್ಲಿ ಆರ್ಥಿಕ ಚಟುವಟಿಕೆ ವೇಗ ಪಡೆದುಕೊಂಡಿದೆ. ಹಾಗಾಗಿ, ಕಾರ್ಪೊರೇಟ್ ಕಂಪನಿಗಳಿಗೆ ನೀಡುವ ಸಾಲದ ಪ್ರಮಾಣವು ಹೆಚ್ಚಳ ಆಗಬಹುದು ಎಂದು ಹೇಳಿದ್ದಾರೆ.

ಕಾರ್ಪೊರೇಟ್ ವಲಯಕ್ಕೆ ₹7 ಲಕ್ಷ ಕೋಟಿ ಸಾಲ ಮಂಜೂರು ಮಾಡಲಾಗಿದ್ದು, ಈ ಸಾಲ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಾರ್ಪೊರೇಟ್ ಸಾಲವು, ಶೇ 7.1ರಷ್ಟು ಬೆಳವಣಿಗೆ ಕಂಡಿದೆ. ಆರ್ಥಿಕ ಚಟುವಟಿಕೆಯಲ್ಲಿ ಸುಧಾರಣೆ ಆಗುತ್ತಿರುವುದರಿಂದ ಬಂಡವಾಳ ಬಳಕೆಯೂ ಹೆಚ್ಚುತ್ತಿದ್ದು, ಇದು ಪ್ರತಿ ತ್ರೈಮಾಸಿಕ ಕಳೆದಂತೆ ಸದೃಢಗೊಳ್ಳುತ್ತಿದೆ ಎಂದು ಹೇಳಿದ್ದಾರೆ.

ಚಿಟಿಕೆ ಸುದ್ದಿ

ಔತಣಕೂಟದಲ್ಲಿ ಗುಂಡಿನ ದಾಳಿ: ನಾಲ್ವರು ಸಾವು

ಸ್ಟಾಕ್‌ಟನ್ (ಎಪಿ): ಕ್ಯಾಲಿಫೋರ್ನಿಯಾದ ಸ್ಟಾಕ್‌ಟನ್‌ನಲ್ಲಿ ಆಯೋಜಿಸಿದ್ದ ಔತಣಕೂಟದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ನಾಲ್ವರು ಮೃತಪಟ್ಟು, 10 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

‘ಮೃತರಲ್ಲಿ ಇಬ್ಬರು ಮಕ್ಕಳು ಮತ್ತು ಇಬ್ಬರು ವಯಸ್ಕರು. ನಿರ್ದಿಷ್ಟ ಗುರಿಯೊಂದಿಗೆ ದಾಳಿ ನಡೆಸಲಾಗಿದೆ ಎಂದು ಶಂಕಿಸಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅವರು ತಿಳಿಸಿದರು.

ಘಟನೆ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದರು.

‘ವೆಚ್ಚ ಏರಿಕೆ: ತಯಾರಿಕಾ ವಲಯದ ಗುರಿಗೆ ಅಡಚಣೆ’

ನವದೆಹಲಿ (ಪಿಟಿಐ): ಹೆಚ್ಚುತ್ತಿರುವ ತಯಾರಿಕಾ ವೆಚ್ಚವು, ದೇಶದ ತಯಾರಿಕಾ ವಲಯದ ಗುರಿ ಸಾಧನೆಗೆ ಅಡ್ಡಿ ಉಂಟು ಮಾಡಬಹುದು ಎಂದು ಸಿಯುಟಿಎಸ್ ಇಂಟರ್‌ನ್ಯಾಷನಲ್ ವರದಿ ತಿಳಿಸಿದೆ.

ಪ್ರಸ್ತುತ ದೇಶದಲ್ಲಿ 53 ಲಕ್ಷ ಟನ್‌ನಷ್ಟು ಅಲುಮಿನಿಯಂಗೆ ಬೇಡಿಕೆ ಇದೆ. ಇದು 2030ರ ವೇಳೆಗೆ 83 ಲಕ್ಷ ಟನ್‌ಗೆ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದಿದೆ.

ಪ್ರಸ್ತುತ ಇರುವ ಆಮದು ಸುಂಕದ ವಿಧಾನವು ಎಂಎಸ್‌ಎಂಇ ವಲಯದ ಉದ್ಯಮಗಳಿಗೆ ಯಾವ ರೀತಿ ಅಡ್ಡಿಯಾಗಿದೆ ಎಂದು ವರದಿ ಗಮನ ಸೆಳೆದಿದೆ.

ಅಂತರರಾಷ್ಟ್ರೀಯ ಮಾನದಂಡಕ್ಕೆ ಹೋಲಿಸಿದರೆ ದೇಶದಲ್ಲಿ ಅಲುಮಿನಿಯಂ ಬೆಲೆ ಹೆಚ್ಚಿದೆ. ಇದು ದೇಶದಲ್ಲಿನ ಅಲುಮಿನಿಯಂ ತಯಾರಕರಿಗೆ ಅನನುಕೂಲ ಉಂಟು ಮಾಡಲಿದೆ. ಈ ದರ ಅಂತರವು ಹೆಚ್ಚಿನ ಪ್ರಮಾಣದಲ್ಲಿ ಅಲುಮಿನಿಯಂ ಬಳಕೆ ಮಾಡುವ ನಿರ್ಮಾಣ ವಲಯ, ನವೀಕರಿಸಬಹುದಾದ ಇಂಧನ ಮೂಲ ಸೌಕರ್ಯ, ವಿದ್ಯುತ್‌ಚಾಲಿತ ವಾಹನಗಳು ಮತ್ತು ಎಲೆಕ್ಟ್ರಾನಿಕ್ಸ್ ವಲಯಗಳ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದೆ.

ಕಡಿಮೆ ತಯಾರಿಕಾ ವೆಚ್ಚದಿಂದ ದೇಶದ ಎಂಎಸ್‌ಎಂಇ ವಲಯದ ಅಲುಮಿನಿಯಂ ಕೈಗಾರಿಕೆಗಳು, ಆಮದು ಉತ್ಪನ್ನಗಳ ವಿರುದ್ಧ ಪರಿಣಾಮಕಾರಿಯಾಗಿ ಸ್ಪರ್ಧೆ ಮಾಡಲು ಅನುವು ಮಾಡಿಕೊಡುತ್ತದೆ. ಅಲ್ಲದೆ, ಮಾರುಕಟ್ಟೆಯಲ್ಲಿ ತಮ್ಮ ಸ್ಥಾನವನ್ನು ವಿವಿಧ ಉತ್ಪನ್ನಗಳ ತಯಾರಿಕೆ ಮೂಲಕ ವಿಸ್ತರಿಸುತ್ತವೆ ಎಂದು ಹೇಳಿದೆ.



₹96,201 ಕೋಟಿ ಎಂ-ಕ್ಯಾಪ್ ಹೆಚ್ಚಳ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ಷೇರುಪೇಟೆ ವಹಿವಾಟಿನಲ್ಲಿ ಸೂಚ್ಯಂಕಗಳ ಏರಿಕೆಯಿಂದ ದೇಶದ ಪ್ರಮುಖ 10 ಕಂಪನಿಗಳ ಪೈಕಿ ಏಳು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕೆ (ಎಂ-ಕ್ಯಾಪ್) ₹96,201 ಕೋಟಿ ಸೇರ್ಪಡೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯಕ್ಕೆ ₹28,282 ಕೋಟಿಯಷ್ಟು ಸೇರ್ಪಡೆಯಾಗಿದ್ದು, ಕಂಪನಿಯ ಒಟ್ಟು ಎಂ-ಕ್ಯಾಪ್ ₹21.20 ಲಕ್ಷ ಕೋಟಿಯಷ್ಟಾಗಿದೆ. ಬಜಾಜ್ ಫೈನಾನ್ಸ್ ₹20,347 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹13,611 ಕೋಟಿ, ಐಸಿಐಸಿಐ ಬ್ಯಾಂಕ್ ₹13,599 ಕೋಟಿ, ಹಿಂದುಸ್ಥಾನ್ ಯೂನಿಲಿವರ್ ₹7,671 ಕೋಟಿ, ಎಸ್‌ಬಿಐ ₹6,415 ಕೋಟಿ ಮತ್ತು ಇನ್ಫೊಸಿಸ್‌ನ ಮಾರುಕಟ್ಟೆ ಮೌಲ್ಯಕ್ಕೆ ₹6,273 ಕೋಟಿ ಸೇರ್ಪಡೆಯಾಗಿದೆ.

ಭಾರ್ತಿ ಏರ್‌ಟೆಲ್ ಎಂ-ಕ್ಯಾಪ್‌ನಲ್ಲಿ ₹35,239 ಕೋಟಿ ಕಡಿಮೆಯಾಗಿದ್ದರೆ, ಎಲ್‌ಐಸಿ ₹4,996 ಕೋಟಿ ಮತ್ತು ಟಿಸಿಎಸ್ ಮಾರುಕಟ್ಟೆ ಮೌಲ್ಯದಲ್ಲಿ ₹3,762 ಕೋಟಿಯಷ್ಟು ಇಳಿಕೆಯಾಗಿದೆ.

ಕ್ಷಮಾದಾನ ಕೋರಿ ಮನವಿ ಸಲ್ಲಿಸಿದ ಇಸ್ರೇಲ್ ಪ್ರಧಾನಿ

ಜೆರುಸಲೇಂ (ಎಪಿ): ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದೀರ್ಘಕಾಲದಿಂದ ನಡೆಯುತ್ತಿರುವ ಪ್ರಕರಣಗಳ ವಿಚಾರಣೆಯಲ್ಲಿ ಕ್ಷಮಾದಾನ ಕೋರಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಅಧ್ಯಕ್ಷರ ಕಚೇರಿಗೆ ಮನವಿ ಸಲ್ಲಿಸಿದ್ದಾರೆ.

‘ನೆತನ್ಯಾಹು ಕ್ಷಮೆಯಾಚನೆ ಕೋರಿಕೆಯನ್ನು ಅಧ್ಯಕ್ಷರ ಕಚೇರಿಗೆ ಸಲ್ಲಿಸಿದ್ದಾರೆ’ ಎಂದು ಇಸ್ರೇಲ್ ಪ್ರಧಾನಿ ಕಾರ್ಯಾಲಯ ಖಚಿತಪಡಿಸಿದೆ. ‘ಇಡೀ ದೇಶದ ಮೇಲೆ ಮಹತ್ವದ ಪರಿಣಾಮಗಳನ್ನು ಬೀರುವ ಅಸಾಧಾರಣವಾದ ಮನವಿ ಇದು’ ಎಂದು ಅಧ್ಯಕ್ಷರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಇಸ್ರೇಲ್‌ನ ರಾಜಕೀಯ ಇತಿಹಾಸದಲ್ಲೇ, ಅಧಿಕಾರದಲ್ಲಿರುವಾಗ ವಿಚಾರಣೆ ಎದುರಿಸಿದ ಮೊದಲ ಪ್ರಧಾನಿ ನೆತನ್ಯಾಹು. ವಿಶ್ವಾಸ ವಂಚನೆ, ಮೋಸ, ಲಂಚ ಪಡೆದ ಆರೋಪ ಸೇರಿ ಅವರ ವಿರುದ್ಧ ಮೂರು ಪ್ರಕರಣಗಳಲ್ಲಿ ವಿಚಾರಣೆ ನಡೆಯುತ್ತಿದೆ. ಆದರೆ, ಇದುವರೆಗೆ ಯಾವುದೇ ಆರೋಪ ಸಾಬೀತಾಗಿಲ್ಲ.

ಪ್ರವಾಹ: ಇಂಡೊನೇಷ್ಯಾದಲ್ಲಿ ನೀರು, ಆಹಾರಕ್ಕಾಗಿ ಲೂಟಿ



ಮೆಡಾನ್ (ಇಂಡೊನೇಷ್ಯಾ) (ಎಪಿ): ಸುಮಾತ್ರಾ ದ್ವೀಪದಲ್ಲಿ ಉಂಟಾದ ಪ್ರವಾಹದಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಜನರು ಬದುಕುಳಿಯಲು ನೀರು ಮತ್ತು ಆಹಾರವನ್ನು ಲೂಟಿ ಮಾಡುತ್ತಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಲೂಟಿಕೋರರು ಆಹಾರ, ಔಷಧ ಮತ್ತು ಅನಿಲವನ್ನು ಪಡೆಯಲು ಶಿಥಿಲಗೊಂಡ ಬ್ಯಾರಿಕೇಡ್‌ಗಳು, ಪ್ರವಾಹಪೀಡಿತ ರಸ್ತೆಗಳು ಮತ್ತು ಒಡೆದು ಹೋದ ಗಾಜುಗಳನ್ನು ದಾಟಿ ಹೋಗುತ್ತಿದ್ದಾರೆ. ಪ್ರವಾಹದಲ್ಲಿ ಹಾನಿಗೊಳಗಾದ ಅಂಗಡಿಗಳಲ್ಲಿ ವಸ್ತುಗಳನ್ನು ಲೂಟಿ ಮಾಡುತ್ತಿರುವ ವಿಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಉತ್ತರ ಸುಮಾತ್ರಾ ಪೊಲೀಸರು ಶನಿವಾರ ಸಂಜೆ ಮೊದಲ ಕಳ್ಳತನ ಪ್ರಕರಣವನ್ನು ವರದಿ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಪೊಲೀಸ್ ವಕ್ತಾರರೊಬ್ಬರು ತಿಳಿಸಿದ್ದಾರೆ.

‘ಲೂಟಿಕೋರರು ನೆರವು ಸಿಗುವುದಕ್ಕಿಂತ ಮೊದಲು ಕಳ್ಳತನ ಮಾಡಿದ್ದಾರೆ. ಅಗತ್ಯ ವಸ್ತುಗಳು ದೊರೆಯುತ್ತವೆ ಎಂದು ಅವರಿಗೆ ತಿಳಿದಿರಲಿಲ್ಲ. ಹಸಿವಿನಿಂದ ಸಾಯುತ್ತೇವೆ ಎಂದು ಭಾವಿಸಿ, ಈ ಕೃತ್ಯವನ್ನು ಎಸಗಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ವಾರ ಸಂಭವಿಸಿದ ಭೀಕರ ಪ್ರವಾಹದಲ್ಲಿ 303 ಜನರ ಮೃತದೇಹಗಳು ಪತ್ತೆಯಾಗಿದ್ದು, ಮೃತರ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆಯಿದೆ. ಸಾವಿರಾರು ಜನರನ್ನು ಸ್ಥಳಾಂತರಿಸಲಾಗಿದೆ. ಪ್ರತಿಕೂಲ ಹವಾಮಾನವು ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ.

ವಾರಸುದಾರರಿಲ್ಲದ ಹಣ: ಪತ್ತೆ ಹೇಗೆ?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಬ್ಯಾಂಕ್ ಖಾತೆಗಳಲ್ಲಿ ಹಣವನ್ನು ಮರೆತಿದ್ದೀರಾ? ನಿಮ್ಮ ಕುಟುಂಬದವರ ಬ್ಯಾಂಕ್ ಖಾತೆಗಳಿದ್ದು, ಅದರಲ್ಲಿ ಹಣವೇನಾದರೂ ಇರಬಹುದಾ ಎಂಬ ಪ್ರಶ್ನೆ ನಿಮ್ಮಲ್ಲಿದೆಯಾ? ಹಾಗಾದರೆ ಚಿಂತಿಸಬೇಡಿ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಮ್ಮ ಸಹಾಯಕ್ಕೆ ಬರುತ್ತದೆ. ಹೌದು, ಇತ್ತೀಚೆಗಷ್ಟೇ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ‘ನಿಮ್ಮ ಹಣ ನಿಮ್ಮ ಅಧಿಕಾರ’ ಎಂಬ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ವಾರಸುದಾರರು ಯಾರು ಎಂದು ತಿಳಿಯದೆ ಬ್ಯಾಂಕ್ ಖಾತೆಗಳಲ್ಲಿ ಉಳಿದುಕೊಂಡಿರುವ ಹಣವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವುದು ಈ ಅಭಿಯಾನದ ಉದ್ದೇಶ.

ವಾರಸುದಾರರಿಗಾಗಿ ಕಾದು ಕುಳಿತಿದೆ ₹1.84 ಲಕ್ಷ ಕೋಟಿ: ಯಾವುದೇ ಉಳಿತಾಯ ಖಾತೆ, ಚಾಲ್ತಿ ಖಾತೆ 10 ವರ್ಷ ಚಲಾವಣೆಯಲ್ಲಿ ಇಲ್ಲದಿದ್ದರೆ ಅಂತಹ ಖಾತೆಯನ್ನು ನಿಷ್ಕ್ರಿಯ ಎಂದು ಪರಿಗಣಿಸಲಾಗುತ್ತದೆ. ನಿರ್ದಿಷ್ಟ ಖಾತೆಯಲ್ಲಿರುವ ಹಣವನ್ನು ವಾರಸುದಾರರಿಲ್ಲದ ಹಣ (ಅನ್‌ಕ್ಲೇಮ್ಡ್ ಡೆಪಾಸಿಟ್) ಎಂದು ವರ್ಗೀಕರಿಸಲಾಗುತ್ತದೆ. ಆ ಹಣವನ್ನು ಆರ್‌ಬಿಐ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸುತ್ತದೆ. ಸರ್ಕಾರದ ಅಂಕಿ-ಅಂಶಗಳ ಪ್ರಕಾರ ವಾರಸುದಾರರಿಲ್ಲದೆ ಬ್ಯಾಂಕ್ ಖಾತೆಗಳಲ್ಲಿ ಬರೋಬ್ಬರಿ ಒಟ್ಟು ₹1.84 ಲಕ್ಷ ಕೋಟಿ ಕೊಳೆಯುತ್ತಿದೆ.

ನಿಷ್ಕ್ರಿಯ ಖಾತೆ ಆಗುವುದು ಹೇಗೆ?: ಉಳಿತಾಯ ಖಾತೆ ಅಥವಾ ಚಾಲ್ತಿ ಖಾತೆಗಳಲ್ಲಿ ಎರಡು ವರ್ಷ ಯಾವುದೇ ವಹಿವಾಟು ನಡೆಯದಿದ್ದರೆ ಅಂತಹ ಖಾತೆಗಳನ್ನು ಚಲಾವಣೆಯಲ್ಲಿ ಇಲ್ಲದ ಖಾತೆ ಅಥವಾ ಡೋರ್‌ಮೆಂಟ್ ಖಾತೆ ಎಂದು ಪರಿಗಣಿಸಲಾಗುತ್ತದೆ. ಅದೇ ರೀತಿ ನಿಶ್ಚಿತ ಠೇವಣಿಗಳು ಮೆಚ್ಯೂರಿಟಿ ಹೊಂದಿದ ಎರಡು ವರ್ಷಗಳ ಬಳಿಕವೂ ಹೂಡಿಕೆದಾರ ಆ ಹಣವನ್ನು ಹಿಂಪಡೆಯದಿದ್ದರೆ ಅದನ್ನೂ ಸಹ ಚಲಾವಣೆಯಲ್ಲಿ ಇಲ್ಲದ ಖಾತೆ ಎಂದು ವರ್ಗೀಕರಿಸಲಾಗುತ್ತದೆ. ಈ ಖಾತೆಗಳು ಮತ್ತೆ ಎಂಟು ವರ್ಷ ಸಕ್ರಿಯವಾಗಿ ಇರದಿದ್ದರೆ ಅಂತಹ ಖಾತೆಗಳನ್ನು ವಾರಸುದಾರರಿಲ್ಲದ ನಿಷ್ಕ್ರಿಯ ಬ್ಯಾಂಕ್ ಖಾತೆಗಳು ಎಂದು ವಿಂಗಡಿಸಿ ಅಲ್ಲಿರುವ ಮೊತ್ತವನ್ನು ಆರ್‌ಬಿಐ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸಲಾಗುತ್ತದೆ.

ಉದ್ಗಮ್ ಪೋರ್ಟಲ್‌ನಲ್ಲಿ ನಿಷ್ಕ್ರಿಯ ಖಾತೆಗಳ ವಿವರ: ನಿಷ್ಕ್ರಿಯ ಖಾತೆಗಳಲ್ಲಿ ಇರುವ ಹಣವನ್ನು ಅರ್ಹ ವಾರಸುದಾರರಿಗೆ ತಲುಪಿಸಲು ಭಾರತೀಯ ರಿಸರ್ವ್ ಬ್ಯಾಂಕ್ 2023ರಲ್ಲಿ ಉದ್ಗಮ್ ಪೋರ್ಟಲ್ ಆರಂಭಿಸಿತು. ಈ ಉದ್ಗಮ್ ಪೋರ್ಟಲ್‌ನಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ವಾರಸುದಾರರಿಲ್ಲದೆ ಉಳಿದುಕೊಂಡಿರುವ ಮಾಹಿತಿಯನ್ನು ಪತ್ತೆ ಮಾಡಬಹುದು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಧನಲಕ್ಷ್ಮಿ ಬ್ಯಾಂಕ್ ಲಿಮಿಟೆಡ್, ಸೌತ್ ಇಂಡಿಯನ್ ಬ್ಯಾಂಕ್ ಲಿಮಿಟೆಡ್, ಡಿಬಿಎಸ್ ಬ್ಯಾಂಕ್ ಇಂಡಿಯಾ ಲಿಮಿಟೆಡ್, ಸಿಟಿ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಇಂಡಿಯನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್, ಫೆಡರಲ್ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಯುಸಿಒ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ, ಐಡಿಬಿಐ ಬ್ಯಾಂಕ್, ಜಮ್ಮು ಕಾಶ್ಮೀರ್ ಬ್ಯಾಂಕ್, ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, ಎಚ್‌ಎಸ್‌ಬಿಸಿ ಲಿಮಿಟೆಡ್, ಕರ್ನಾಟಕ ಬ್ಯಾಂಕ್ ಲಿಮಿಟೆಡ್, ದಿ ಕರೂರ್ ವೈಶ್ಯ ಬ್ಯಾಂಕ್, ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ತಮಿಳುನಾಡು ಮರ್ಕಂಟೈಲ್ ಬ್ಯಾಂಕ್‌ಗಳ ಮಾಹಿತಿ ಉದ್ಗಮ್ ಪೋರ್ಟಲ್‌ನಲ್ಲಿ ಸಿಗುತ್ತದೆ.

ಉದ್ಗಮ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದು ಹೇಗೆ?: ಉದ್ಗಮ್ ವೆಬ್‌ಸೈಟ್‌ಗೆ ಹೋಗಿ, ಮೊದಲಿಗೆ ನಿಮ್ಮ ಮೊಬೈಲ್ ನಂಬರ್ ಮತ್ತು ಹೆಸರು ನಮೂದಿಸಿ, ಪಾಸ್ ವರ್ಡ್ ರಚನೆ ಮಾಡಿ. ಆರ್‌ಬಿಐನ ನೀತಿಗಳಿಗೆ ಅನುಗುಣವಾಗಿ ಉದ್ಗಮ್ ಪೋರ್ಟಲ್ ಬಳಸುತ್ತೇನೆ ಎಂದು ಚೆಕ್ ಬಾಕ್ಸ್ ಕ್ಲಿಕ್ ಮಾಡಿ. ನಿಮ್ಮ ನೋಂದಾಯಿತ ಮೊಬೈಲ್ ನಂಬರ್‌ಗೆ ಕಳುಹಿಸಿರುವ ಒಟಿಪಿಯನ್ನು ನಮೂದಿಸಿ ಪ್ರಕ್ರಿಯೆ ಪೂರ್ಣಗೊಳಿಸಿ.

ಈ ಮಾಹಿತಿ ನಿಮ್ಮ ಬಳಿ ಇರಲಿ: ಉದ್ಗಮ್ ಪೋರ್ಟಲ್‌ನಲ್ಲಿ ವಾರಸುದಾರರಿಲ್ಲದ ಠೇವಣಿಗಳನ್ನು ಪತ್ತೆ ಮಾಡಲು, ಬ್ಯಾಂಕ್‌ನ ಹೆಸರು ಮತ್ತು ಖಾತೆ ಹೊಂದಿರುವವರ ವಿವರದ ಜೊತೆ ಪ್ಯಾನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಮತದಾರ ಗುರುತಿನ ಚೀಟಿ, ಪಾಸ್‌ಪೋರ್ಟ್ ಅಥವಾ ಖಾತೆದಾರನ ಜನ್ಮದಿನಾಂಕದ ಮಾಹಿತಿ ನಮೂದಿಸಬೇಕಾಗುತ್ತದೆ. ಹಿಂದೂ ಅವಿಭಕ್ತ ಕುಟುಂಬ, ಪ್ರೊಪ್ರೈಟರ್ ಶಿಪ್ ಕಂಪನಿ, ಪಾರ್ಟ್‌ನರ್ ಶಿಪ್, ಎಲ್‌ಎಲ್‌ಪಿಗೆ ಸಂಬಂಧಿಸಿದ ಠೇವಣಿಗಳನ್ನು ಹುಡುಕಬೇಕಾದರೆ ನಾನ್ ಇಂಡುವಿಜುವಲ್ ಕ್ಯಾಟಗರಿ ಆಯ್ಕೆ ಮಾಡಬೇಕಾಗುತ್ತದೆ.

ಸಂಬಂಧಪಟ್ಟ ಬ್ಯಾಂಕ್‌ನಿಂದ ಮಾತ್ರ ಹಣ: ಉದ್ಗಮ್ ಪೋರ್ಟಲ್ ಮೂಲಕ ಯಾವ ಬ್ಯಾಂಕ್‌ನಲ್ಲಿ ನಿಮ್ಮ ಅಥವಾ ನಿಮ್ಮವರ ಹಣ ಇದೆ ಎನ್ನುವುದನ್ನು ತಿಳಿಯಬಹುದು. ಆದರೆ ಉದ್ಗಮ್ ಮೂಲಕ ಆ ಹಣವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಉದ್ಗಮ್ ಪೋರ್ಟಲ್‌ನಲ್ಲಿ ಸಿಕ್ಕ ಮಾಹಿತಿಯನ್ನು ತೆಗೆದುಕೊಂಡು ಸಂಬಂಧಪಟ್ಟ ಬ್ಯಾಂಕ್‌ಗೆ ಹಣಕ್ಕಾಗಿ ಕ್ಲೇಮ್ ಅರ್ಜಿ ಸಲ್ಲಿಸಬೇಕಾಗುತ್ತದೆ. ಅರ್ಜಿಯ ಜೊತೆಗೆ ಕೆವೈಸಿ ದಾಖಲೆ, ಠೇವಣಿ ವಿವರ, ಖಾತೆದಾರನ ಭಾವಚಿತ್ರ, ನೀವು ಕಾನೂನುಬದ್ಧ ಉತ್ತರಾಧಿಕಾರಿ ಎನ್ನುವುದಕ್ಕೆ ದಾಖಲೆ ಮತ್ತು ವ್ಯಕ್ತಿಯ ಮರಣ ಪ್ರಮಾಣ ಪತ್ರ ನೀಡಬೇಕಾಗುತ್ತದೆ. ನಿಮ್ಮ ಅರ್ಜಿ ಪರಿಶೀಲಿಸಿದ ಬಳಿಕ ಬ್ಯಾಂಕ್ ಹಣವನ್ನು ಬಿಡುಗಡೆ ಮಾಡುತ್ತದೆ.

ಉದ್ಗಮ್ ಪೋರ್ಟಲ್‌ನಲ್ಲಿ ಹುಡುಕುವುದು ಹೇಗೆ?

- ಉದ್ಗಮ್ ಪೋರ್ಟಲ್‌ಗೆ ಭೇಟಿ ನೀಡಿ
- ನೋಂದಾಯಿತ ಮೊಬೈಲ್ ನಂಬರ್, ಪಾಸ್‌ವರ್ಡ್‌ನೊಂದಿಗೆ ಲಾಗಿನ್ ಆಗಿ
- ಬ್ಯಾಂಕ್ ದಾಖಲೆಗಳ ಪ್ರಕಾರ ಖಾತೆದಾರನ ಹೆಸರು ನಮೂದಿಸಿ
- ನಂತರ ಒಂದು ಬ್ಯಾಂಕ್, ಹಲವು ಬ್ಯಾಂಕ್ ಅಥವಾ ಯಾವೆಲ್ಲಾ ಬ್ಯಾಂಕ್ ಎನ್ನುವುದನ್ನು ಆಯ್ಕೆ ಮಾಡಿ
- ಪ್ಯಾನ್‌ಕಾರ್ಡ್, ಮತದಾರ ಗುರುತಿನ ಚೀಟಿ, ಡ್ರೈವಿಂಗ್ ಲೈಸೆನ್ಸ್, ಪಾಸ್‌ಪೋರ್ಟ್ ಅಥವಾ ಹುಟ್ಟಿದ ದಿನಾಂಕ ನಮೂದಿಸಿ
- ನಂತರ ಸರ್ಚ್ ಮೇಲೆ ಕ್ಲಿಕ್ ಮಾಡಿ ಹುಡುಕಾಟ ನಡೆಸಿ. ನಿಮ್ಮ ಅಥವಾ ನಿಮ್ಮವರ ಹಣ ಇದ್ದರೆ ಆ ಮಾಹಿತಿ ಸಿಗುತ್ತದೆ.



ಭತ್ತದ ರಾಶಿ

ಛತ್ತೀಸಗಢದ ಬಸ್ತರ್ ಜಿಲ್ಲೆಯ ಜಗದಲ್‌ಪುರ್ ಗ್ರಾಮದ ಹೊರವಲಯದಲ್ಲಿ ರೈತರೊಬ್ಬರು ಭತ್ತ ತೂರಿದರು

ಪಿಟಿಐ ಚಿತ್ರ

ಚರ್ಚೆಗೆ ಪಟ್ಟು: ಸರ್ಕಾರಕ್ಕೆ ಇಕ್ಕಟ್ಟು

ಒಂದನೇ ಪುಟದಿಂದ...

‘ಅವಕಾಶ ನೀಡದಿದ್ದರೆ ಕಲಾಪಕ್ಕೆ ಅಡ್ಡಿ’: ‘ಎಸ್‌ಐಆರ್ ಪ್ರಕ್ರಿಯೆಯಲ್ಲಿ ಹಲವು ತಪ್ಪುಗಳಾಗಿವೆ. ಇದರ ಚರ್ಚೆಯಿಂದ ಸರ್ಕಾರ ಹಿಂದೆ ಸರಿಯುವಂತಿಲ್ಲ. ಉಳಿದ ವಿಷಯಗಳಿಗಿಂತ ಮೊದಲಿಗೆ ಎಸ್‌ಐಆರ್ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು. ಇಲ್ಲದಿದ್ದರೆ ಸಂಸತ್ತು ಸುಗಮವಾಗಿ ಕಾರ್ಯನಿರ್ವಹಿಸಲು ಬಿಡುವುದಿಲ್ಲ ಎಂಬುದಾಗಿ ಸಭೆಯಲ್ಲಿ ಎಚ್ಚರಿಸಿದ್ದೇವೆ’ ಎಂದು ಸಮಾಜವಾದಿ ಪಕ್ಷದ ನಾಯಕ ರಾಮಗೋಪಾಲ್ ಯಾದವ್ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ಎಸ್‌ಐಆರ್, ದೆಹಲಿ ಕಾರ್ ಬಾಂಬ್ ಸ್ಫೋಟ, ದೆಹಲಿ ವಾಯು ಮಾಲಿನ್ಯ ಕುರಿತು ಚರ್ಚೆಗೆ ಅವಕಾಶ ನೀಡಬೇಕು’ ಎಂದು ಸಿಪಿಐ ನಾಯಕರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಎರಡು ಗಂಟೆಗಳವರೆಗೆ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ 36 ಪಕ್ಷಗಳ 50 ನಾಯಕರು ಭಾಗವಹಿಸಿದ್ದರು. ಬಿಜೆಪಿ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಜೆಪಿ. ನಡ್ಡಾ, ಸಚಿವರಾದ ಕಿರಣ್ ರಿಜಿಜು, ಅರ್ಜುನ್ ರಾಮ್ ಮೇಘವಾಲ್, ಎಲ್. ಮುರುಗನ್ ಸಭೆಯಲ್ಲಿ ಇದ್ದರು.

‘ನಿಯಮಗಳ ಪ್ರಕಾರವೇ ಕಲಾಪ’

‘ಸಂಸತ್ತು ಸುಗಮವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡಬೇಕು ಎಂದು ಎಲ್ಲ ಪಕ್ಷಗಳ ಪ್ರತಿನಿಧಿಗಳನ್ನು ಕೋರಿದ್ದೇವೆ ಮತ್ತು ಕಲಾಪ ನಿಯಮಗಳ ಪ್ರಕಾರವೇ ನಡೆಯುತ್ತದೆ’ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಸರ್ವ ಪಕ್ಷಗಳ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

‘ಸಂಸದೀಯ ಪ್ರಜಾಪ್ರಭುತ್ವದಲ್ಲಿ ಬಿಕ್ಕಟ್ಟುಗಳು ಉಂಟಾಗುತ್ತಿ ರುತ್ತವೆ. ಪ್ರತಿಯೊಬ್ಬರೂ ತಮ್ಮದೇ ಆದ ಸಿದ್ಧಾಂತ ಮತ್ತು ಕಾರ್ಯಸೂಚಿ ಹೊಂದಿರುತ್ತಾರೆ. ಈ ವ್ಯತ್ಯಾಸಗಳ ನಡುವೆಯೂ ಸದನ ಸುಗಮವಾಗಿ ಸಾಗಬೇಕು. ಅದಕ್ಕೆ ಅಡ್ಡಿಪಡಿಸಬಾರದು ಎಂದು ಮನವಿ ಮಾಡಿದ್ದೇವೆ’ ಎಂದರು.

ಮೊದಲ ದಿನವೇ ಪ್ರಸ್ತಾಪಕ್ಕೆ ಸಜ್ಜು

ಅಧಿವೇಶನದ ಮೊದಲ ದಿನದ ಕಲಾಪದಲ್ಲೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಸಂಕ್ಷಿಪ್ತ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಪ್ರತಿಪಕ್ಷದ ನಾಯಕರು ರಾಜ್ಯಸಭೆಯ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಭಾನುವಾರ ಆಗ್ರಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಪರಾಷ್ಟ್ರಪತಿಯೂ ಆಗಿರುವ ರಾಜ್ಯಸಭೆ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು ಈ ವಿಷಯ ಪ್ರಸ್ತಾಪಿಸಿದರು.

‘ಕಲಾಪ ಸುಗುಮವಾಗಿ ನಡೆಯಬೇಕು ಎಂದುನಾವೂ ಬಯಸುತ್ತೇವೆ. ಅದಕ್ಕೆ ಸಹಕರಿಸುತ್ತೇವೆ. ಆದರೆ ಎಸ್‌ಐಆರ್ ಕುರಿತು ತುರ್ತು ಚರ್ಚಿಸಬೇಕಾದ ಅಗತ್ಯವಿದ್ದು, ಮೊದಲ ದಿನವೇ ಸಂಕ್ಷಿಪ್ತವಾಗಿ ಚರ್ಚಿಸಲು ಅನುವು ಮಾಡಿಕೊಡಬೇಕು ಎಂದು ಅವರು ಮನವಿ ಮಾಡಿದರು’ ಎಂದು ತಿಳಿಸಿವೆ.

ಆರ್‌ಎಸ್‌ಎಸ್ ಪ್ರತ್ಯೇಕ ಸಂಘಟನೆಯಲ್ಲ, ಜನರ ಗುಂಪು

‘ಶಾಖಾ ಟು ನೇಷನ್’ ಜನಾರ್ಪಣೆ ಕಾರ್ಯಕ್ರಮದಲ್ಲಿ ರಾಮ್ ಮಾಧವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಎಂಬುದು ಪ್ರತ್ಯೇಕ ಸಂಘಟನೆಯಲ್ಲ. ಅದು ದೇಶ ಕಟ್ಟುವ ಜನರ ಗುಂಪು. ಸದೃಢ ಭಾರತವನ್ನು ಕಟ್ಟಲು ನೋಂದಣಿ ಯಾಕೆ ಬೇಕು’ ಎಂದು ಲೇಖಕ ರಾಮ್ ಮಾಧವ್ ಪ್ರಶ್ನಿಸಿದರು.

ಥಿಂಕರ್ಸ್ ಫೋರಂ ವತಿಯಿಂದ ನಡೆದ ಅವರ ‘ಶಾಖಾ ಟು ನೇಷನ್’ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಆರ್‌ಎಸ್‌ಎಸ್ ಯಾಕೆ ನೋಂದಣಿ ಮಾಡಿಕೊಂಡಿಲ್ಲ ಎಂದು ಕರ್ನಾಟಕದ ಕೆಲವು ನಾಯಕರು ಕೇಳಿದ್ದರು. ಭಾರತವು ನೋಂದಣಿಯಾಗಿದೆಯೇ? ಏಕೀಕೃತ ಭಾರತವನ್ನು ಕಟ್ಟುವ ಕ್ರಿಯೆಯು ಹೇಗೆ ಒಂದು ಸಂಘಟನೆ ಯಾಗುತ್ತದೆ? ಭಾರತೀಯರಾದ ನಾವು ಎಂಬುದು ನಮ್ಮ ಸಂವಿಧಾನದ ಪೀಠಿಕೆಯಲ್ಲೇ ಇದೆ. ಅಲ್ಲಿಗೆ ಮುಗಿಯಿತು. ಆರ್‌ಎಸ್‌ಎಸ್ ತನಗಾಗಿ ಪ್ರತ್ಯೇಕ ಗುರುತು ಬೇಕು ಎಂದು ಬಯಸಿಲ್ಲ’ ಎಂದು ಹೇಳಿದರು.

ಆರ್‌ಎಸ್‌ಎಸ್ ಜನರ ಸಂಘಟನೆ ಆಗಿರುವುದರಿಂದ ಇಲ್ಲಿ ಯಾರು ಬೇಕಾದರೂ ಬರಬಹುದು. ಯಾರು ಬೇಕಾದರೂ ಹೊರ ಹೋಗಬಹುದು. ಅಷ್ಟು ಮಾತ್ರವಲ್ಲ. ಸಂಘಟನೆಯಿಂದ ಹೊರ ಹೋದವರು ಒಂದೆರಡು ವರ್ಷ ಬಿಟ್ಟು ಮತ್ತೆ ಒಳಗೆ ಬಂದರೂ ಯಾಕೆ ಬಿಟ್ಟು ಹೋದ್ರಿ? ಯಾಕೆ ಮತ್ತೆ ಬಂದ್ರಿ ಎಂದು ಕೇಳದೇ ಸೇರಿಸಿಕೊಳ್ಳುತ್ತದೆ ಎಂದು ವಿವರಿಸಿದರು.

ಆರ್‌ಎಸ್‌ಎಸ್ ಗುಪ್ತ ಸಂಘಟನೆ ಎಂದು ಕೆಲವರು ಆರೋಪಿಸುತ್ತಾರೆ. ಆರ್‌ಎಸ್‌ಎಸ್‌ನಲ್ಲಿ ರಹಸ್ಯ ಏನಿದೆ. ಎಲ್ಲವೂ ತೆರೆದಿದೆ ಎಂದು ಹೇಳಿದರು.

‘ಶಾಖಾ ಟು ನೇಷನ್’ ಕೃತಿಯಲ್ಲಿ 1925ರಿಂದ ಇಲ್ಲಿವರೆಗೆ ಸಂಘದ ಮತ್ತು ಸಂಘ ಪರಿವಾರದ ನಾಯಕರು ಮಾಡಿದ ಪ್ರಮುಖವಾದ 30 ಭಾಷಣಗಳಿವೆ. ಇದರಲ್ಲಿ ಎರಡು-ಮೂರು ಭಾಷಣಗಳಷ್ಟೇ ಆರ್‌ಎಸ್‌ಎಸ್ ಬಗ್ಗೆ ಇವೆ. ಉಳಿದವುಗಳೆಲ್ಲ ರಾಷ್ಟ್ರೀಯತೆ, ಸಮಾಜ, ಹಿಂದೂ ಸಮಾಜ, ಹಿಂದುತ್ವ, ಸಂಸ್ಕೃತಿ, ಏಕತೆಯ ಬಗ್ಗೆಯೇ ಇವೆ. ಆರ್‌ಎಸ್‌ಎಸ್ ಸಂಘಟನೆಗಿಂತ ದೇಶದ ಬಗ್ಗೆಯೇ ಹೆಚ್ಚು ಯೋಚಿಸುತ್ತದೆ. ಅದಕ್ಕಾಗಿಯೇ ಶತಮಾನದ ಸಂಭ್ರಮದಲ್ಲಿರುವ ಆರ್‌ಎಸ್‌ಎಸ್ ಹೆಮ್ಮರವಾಗಿ ಬೆಳೆದಿದೆ. ಬೆಳೆಯುತ್ತಲೇ ಇದೆ ಎಂದು ತಿಳಿಸಿದರು.



‘ಶಾಖಾ ಟು ನೇಷನ್’ ಜನಾರ್ಪಣೆ ಕಾರ್ಯಕ್ರಮದಲ್ಲಿ ರಾಮ್ ಮಾಧವ್, ವಿ. ನಾಗರಾಜ್ ಮತ್ತು ಶ್ರೀರಾಮ ದೇವತಾ ಭಾಗವಹಿಸಿದ್ದರು

ಪ್ರಜಾವಾಣಿ ಚಿತ್ರ

‘ಗುರುದಕ್ಷಿಣೆಗೆ ರಶೀದಿ ಏಕೆ’

‘ದೇಶ, ಧರ್ಮ, ಸಂಸ್ಕೃತಿಯ ಕಾಳಜಿ ವಹಿಸುವ ಆರ್‌ಎಸ್‌ಎಸ್ ಒಂದು ಟ್ರಸ್ಟ್ ಅಥವಾ ಸೊಸೈಟಿ ಅಲ್ಲ. ಇಲ್ಲಿ ಆದಾಯ ತೆರಿಗೆಯ ದಾಖಲೆಗಳಿಲ್ಲ. ಹೊರಗಿನಿಂದ ಯಾರಿಂದಲೂ ಯಾವುದೇ ನಿಧಿ ತೆಗೆದುಕೊಳ್ಳುವುದಿಲ್ಲ. ಆರ್‌ಎಸ್‌ಎಸ್‌ನ ಒಳಗಿನ ಹೃದಯವಂತರು ಗುರುದಕ್ಷಿಣೆ ರೂಪದಲ್ಲಿ ನೀಡುವುದನ್ನಷ್ಟೇ ಸ್ವೀಕರಿಸಲಾಗುತ್ತದೆ. ಆರ್‌ಎಸ್ ಎಸ್‌ನಲ್ಲಿ ರಸೀದಿ ಪುಸ್ತಕವೇ ಇಲ್ಲ. ಇನ್ನು ಹೊರಗಿನಿಂದ ಹಣ ಪಡೆಯುವುದು ಎಲ್ಲಿಂದ ಬಂತು’ ಎಂದು ರಾಮ್ ಮಾಧವ್ ಪ್ರಶ್ನಿಸಿದರು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹675	100 ಕ್ಕೆ	₹675
12 ಕ್ಕೆ	₹96		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-760
ದ್ವಿತಳಿ (ಬಿ.ವಿ)	₹350-856

ತಮಿಳುನಾಡಿನಲ್ಲಿ ಮೂವರು ಸಾವು

ಒಂದನೇ ಪುಟದಿಂದ...

ಇತರ ರಾಜ್ಯಗಳ 10 ಹೆಚ್ಚುವರಿ ತಂಡಗಳು ರಾಜ್ಯಕ್ಕೆ ಬರಲಿವೆ. ಸರ್ಕಾರವು ನಿಯಂತ್ರಣ ಕೊಠಡಿಗಳ ಮೂಲಕ ಜಿಲ್ಲಾಡಳಿತಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ತಿಳಿಸಿದರು.

ಗರಿಷ್ಠ ಮಳೆ: ಈ ಮಧ್ಯೆ ಪುದುಚೇರಿಯ ಕಾರೈಕಲ್‌ನಲ್ಲಿ 24 ತಾಸಿನಲ್ಲಿ ಗರಿಷ್ಠ 19 ಸೆಂ.ಮೀ ಮಳೆಯಾಗಿದೆ, ಸೆಂಬನಾರ್‌ಕೊಯಿಲ್‌ನಲ್ಲಿ 17 ಸೆಂ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಶ್ರೀಲಂಕಾ: 330ಕ್ಕೂ ಹೆಚ್ಚು ಸಾವು

ಒಂದನೇ ಪುಟದಿಂದ...

‘ಒಂದು ವಾರದಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕನಿಷ್ಠ 334 ಮಂದಿ ಮೃತಪಟ್ಟಿದ್ದಾರೆ ಮತ್ತು 370 ಮಂದಿ ನಾಪತ್ತೆಯಾಗಿದ್ದಾರೆ’ ಎಂದು ವಿಪತ್ತು ನಿರ್ವಹಣಾ ಕೇಂದ್ರವು (ಡಿಎಂಸಿ) ತಿಳಿಸಿದೆ.

‘2.73 ಲಕ್ಷ ಕುಟುಂಬಗಳ 9.98 ಲಕ್ಷ ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಭಾರಿ ಮಳೆಯಿಂದಾಗಿ 20,000 ಮನೆಗಳಿಗೆ ಹಾನಿಯಾಗಿದೆ. 1.22 ಲಕ್ಷ ಜನರು ತಾತ್ಕಾಲಿಕ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಉಳಿದ 8.33 ಲಕ್ಷ ಮಂದಿಗೆ ನೆರವಿನ ಅಗತ್ಯವಿದೆ’ ಎಂದು ಡಿಎಂಸಿ ಹೇಳಿದೆ.

ಕೆಲಾನಿ ನದಿಯ ನೀರಿನ ಮಟ್ಟ ಶನಿವಾರದಿಂದ ಏರಿಕೆಯಾಗುತ್ತಿರುವ ಕಾರಣ ಕೊಲಂಬೊದ ಉತ್ತರ ಭಾಗವು ಜಲಾವೃತಗೊಂಡಿದ್ದು, ಜನರ ಸ್ಥಳಾಂತರಕ್ಕೆ ಆದೇಶ ಹೊರಡಿಸಲಾಗಿದೆ.

ಭಾರತದ ಹೆಲಿಕಾಪ್ಟರ್ ರಕ್ಷಣಾ ಕಾರ್ಯಾಚರಣೆ ಯಲ್ಲಿ ಭಾಗಿಯಾಗಿ ಭಾನುವಾರ 24 ಮಂದಿಯನ್ನು ರಕ್ಷಿಸಿದೆ. ಪಾಕಿಸ್ತಾನ, ಜಪಾನ್ ಸಹ ರಕ್ಷಣಾ ತಂಡವನ್ನು ಕಳುಹಿಸಿವೆ ಎಂದು ಶ್ರೀಲಂಕಾ ವಾಯುಪಡೆಯು ತಿಳಿಸಿದೆ.

ಚಂಡಮಾರುತವು ಬೇರೆ ದಿಕ್ಕಿನತ್ತ ಮುಖ ಮಾಡಿದ್ದರೂ ಕೊಲಂಬೊದಲ್ಲಿ ಪ್ರವಾಹ ಪರಿಸ್ಥಿತಿ ಸುಧಾರಿಸಲು ಕನಿಷ್ಠ ಒಂದು ದಿನ ಬೇಕಾಗಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಜೈಶಂಕರ್‌ಗೆ ಪಿಣರಾಯಿ ಪತ್ರ

ತಿರುವನಂತಪುರ: ‘ದಿತ್ವಾ’ ಚಂಡಮಾರುತದ ಕಾರಣದಿಂದ ಶ್ರೀಲಂಕಾದ ಕೊಲಂಬೊ ವಿಮಾನ ನಿಲ್ದಾಣದಲ್ಲಿ ಅತಂತ್ರರಾಗಿರುವ ಭಾರತೀಯರಿಗೆ ಅಗತ್ಯ ನೆರವು ನೀಡಬೇಕೆಂದು ಕೋರಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪತ್ರ ಬರೆದಿದ್ದಾರೆ.

‘ಚಂಡಮಾರುತದ ಪರಿಣಾಮವಾಗಿ ಕೊಲಂಬೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ. ಕೇರಳದವರೂ ಸೇರಿದಂತೆ ಸುಮಾರು 300 ಭಾರತೀಯ ಪ್ರಯಾಣಿಕರು ಅತಂತ್ರರಾಗಿದ್ದಾರೆ. ಕಳೆದ ಮೂರು ದಿನಗಳಿಂದ ಅವರಿಗೆ ಸರಿಯಾದ ಆಹಾರ, ನೀರು ಮತ್ತು ಅಗತ್ಯ ಸೌಲಭ್ಯವಿಲ್ಲ’ ಎಂದು ತಿಳಿಸಿದ್ದಾರೆ.

‘ಅತಂತ್ರವಾಗಿರುವ ಪ್ರಯಾಣಿಕರ ಬಗ್ಗೆ ಕಳವಳ ಉಂಟಾಗಿದೆ. ಅವರಿಗೆ ನೆರವು ನೀಡಲು ಕೇರಳ ಸರ್ಕಾರ ಸಿದ್ಧವಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಕಾರ್ಯೋನ್ಮುಖವಾಗಲಿ’ ಎಂದು ಹೇಳಿದ್ದಾರೆ.

ಕೊಲಂಬೊ ತಲುಪಿದ ಸಿ-130ಜೆ

ನವದೆಹಲಿ: ಪ್ರವಾಹದಲ್ಲಿ ತತ್ತರಿಸಿರುವ ಶ್ರೀಲಂಕಾಕ್ಕೆ ನೆರವು ನೀಡಲು ‘ಆಪರೇಷನ್ ಸಾಗರ ಬಂಧು’ ಕಾರ್ಯಾಚರಣೆಯ ಭಾಗವಾಗಿ, ನೆರವಿನ ಸಾಮಗ್ರಿ ಹೊತ್ತ ಸಿ-130ಜೆ ವಿಮಾನವನ್ನು ಭಾರತೀಯ ವಾಯುಪಡೆಯು ಶ್ರೀಲಂಕಾಕ್ಕೆ ಕಳುಹಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

ತ್ವರಿತ ಪರಿಹಾರ ಕಾರ್ಯಾಚರಣೆಗಾಗಿ ಶ್ರೀಲಂಕಾ ರಾಜಧಾನಿಯಲ್ಲಿ ಎಂಐ 17 ಹೆಲಿಕಾಪ್ಟರ್‌ಗಳು ಸನ್ನದ್ಧ ಸ್ಥಿತಿಯಲ್ಲಿವೆ ಎಂದರು.

‘ಕೊಲಂಬೊದಲ್ಲಿ ನಿಯೋಜಿತವಾಗಿರುವ ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆ (ಎನ್‌ಡಿಆರ್‌ಎಫ್) ತಂಡಕ್ಕೆ ಅಗತ್ಯವಿರುವ ಸಾಧನಗಳನ್ನು ಹೊತ್ತೊಯ್ದ ವಿಮಾನವು ಭಾನುವಾರ ಅಲ್ಲಿಗೆ ತಲುಪಿದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಅತಂತ್ರ ರಾಗಿದ್ದ 330 ಮಂದಿ ಭಾರತೀಯರನ್ನು ಈ ವಿಮಾನದ ಮೂಲಕ ವಾಪಸ್ ಕರೆತರಲಾಗಿದೆ ಎಂದರು.

ಸೆಟ್ಟೇರಿತು ‘ಮುಜುಗರ’



ತನು

ಹಿರಿಯ ನಟ ರಾಜೇಶ್ ಅವರ ಮೊಮ್ಮಗ ಸಾಯಿನಂದ್ ಚಿತ್ರರಂಗ ಪ್ರವೇಶಿಸಿದ್ದಾರೆ. ಅವರು ನಾಯಕನಾಗಿ ನಟಿಸುತ್ತಿರುವ ‘ಮುಜುಗರ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿತು. ತರುಣ್ ಎನ್ ಆ್ಯಕ್ಷನ್– ಕಟ್ ಹೇಳುತ್ತಿದ್ದಾರೆ.

‘ನನಗೂ ಚಿತ್ರರಂಗಕ್ಕೂ 20 ವರ್ಷಗಳ ನಂಟು. ಟಿ.ಎಸ್. ನಾಗಾಭರಣ, ಅನಂತರಾಜು, ಅಮರ್ ಮುಂತಾದವರ ಬಳಿ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ಸ್ವತಂತ್ರ ನಿರ್ದೇಶಕನಾಗಿ ಇದು ಮೊದಲ ಚಿತ್ರ. ಕಾಫಿತೋಟದ ಸುತ್ತ ನಡೆಯುವ ಪ್ರೇಮಕಥೆಯಿದು. ನಿಮಿಷ್ಕ ಹಾಗೂ ತನು ನಾಯಕಿಯರಾಗಿ ಅಭಿನಯಿಸುತ್ತಿದ್ದಾರೆ. ಎರಡನೇ ನಾಯಕನಾಗಿ ಸುಭಾಷ್ ಹಾಗೂ ಖಳನ ಪಾತ್ರದಲ್ಲಿ ಪ್ರಮೋದ್ ಶೆಟ್ಟಿ ಕಾಣಿಸಿಕೊಳ್ಳಲಿದ್ದಾರೆ. ಡಿಸೆಂಬರ್ 15ರಿಂದ ಸಕಲೇಶಪುರ, ಚಿಕ್ಕಮಗಳೂರು, ಹೊರನಾಡು, ಕಳಸ, ಮಡಿಕೇರಿ ಮುಂತಾದೆಡೆ ಚಿತ್ರೀಕರಣ ನಡೆಯಲಿದೆ’ ಎಂದು ಮಾಹಿತಿ ನೀಡಿದರು ನಿರ್ದೇಶಕ.

ಶಾಂತ ಶ್ರೀನಿವಾಸ್ ಡಿ. ಬಂಡವಾಳ ಹೂಡುತ್ತಿದ್ದಾರೆ. ಜೈ ಆನಂದ್ ಛಾಯಾಚಿತ್ರಗ್ರಹಣ, ಶ್ರೀಧರ್ ವಿ.ಸಂಭ್ರಮ್ ಸಂಗೀತ ನಿರ್ದೇಶನವಿದೆ. ‘ನಾನು ನಟನಾಗಲು ನನ್ನ ತಾತ ರಾಜೇಶ್ ಅವರೇ ಸ್ಫೂರ್ತಿ. ಇಂದು ಅವರಿದ್ದಿದ್ದರೆ ತುಂಬಾ ಖುಷಿ ಪಡುತ್ತಿದ್ದರು’ ಎಂದ ಅವರು, ನಾಗತಿಹಳ್ಳಿ ಚಂದ್ರಶೇಖರ ಅವರ ಟೆಂಟ್ ಶಾಲೆಯಲ್ಲಿ ಅಭಿನಯ ಕಲಿತಿದ್ದೇನೆ’ ಎಂದರು ನಾಯಕ ಸಾಯಿನಂದ್.

ಮಣಿಕಂಠನಿಗೆ ನಾಗಾ ಸಾಧುಗಳ ಆಶೀರ್ವಾದ

ಅಯ್ಯಪ್ಪ ಸ್ವಾಮಿ ಕುರಿತಾದ ಕಥೆಯನ್ನು ಹೊಂದಿರುವ ‘ಮಣಿಕಂಠ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಕಾಶಿಯಿಂದ ಎಂಟು ನಾಗಾ ಸಾಧುಗಳು ಬಂದು ಚಿತ್ರದ ಮೊದಲ ದೃಶ್ಯಕ್ಕೆ ಚಾಲನೆ ನೀಡಿದ್ದು ವಿಶೇಷವಾಗಿತ್ತು. ಸಂತೋಷ್ ಸಿಂಹ ಕಥೆ ಬರೆದು, ನಿರ್ದೇಶಿಸುತ್ತಿದ್ದಾರೆ. ಜತೆಗೆ ನಾಯಕನಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

‘ಮಣಿಕಂಠನು ಜೀವನದಲ್ಲಿ ಆವರಿಸಿಕೊಂಡು ಪವಾಡ ಮಾಡಿದ್ದಾನೆ. ಅದನ್ನು ಅನುಭವಿಸಿದಾಗ ಮಾತ್ರ ತಿಳಿಯುತ್ತದೆ. ಹುಡುಕುತ್ತಾ ಹೋದರೆ ಮುಗಿಯುವುದಿಲ್ಲ. ಇಪ್ಪತ್ತೈದು ವರ್ಷ ದೊಡ್ಡಪಾದಕ್ಕೆ ಹೋಗಿ ಭಕ್ತಿಯಿಂದ ಸ್ವಾಮಿ ದರ್ಶನ ಮಾಡಿದ್ದೇನೆ. ಈ ಚಿತ್ರದ ಮೂಲಕ ನನ್ನ ಬದುಕಲ್ಲಿ ನಡೆದಂಥ ಸತ್ಯ ಘಟನೆಗಳು, ಸ್ವಾಮಿಯ ಪವಾಡಗಳನ್ನು ತೋರಿಸುವ ಪ್ರಯತ್ನ ಮಾಡುತ್ತಿದ್ದೇನೆ. ಮಾಲಾಧಾರಿಗಳು ತೊಂದರೆಗೆ ಸಿಲುಕಿಕೊಂಡಾಗ ಕರಪುಸ್ವಾಮಿ ಹೇಗೆ ಕಾಪಾಡುತ್ತಾನೆ ಎಂಬದನ್ನೂ ಕೂಡ ಚಿತ್ರದಲ್ಲಿ ತೋರಿಸುತ್ತೇವೆ’ ಎಂದರು ನಿರ್ದೇಶಕ.

ಅಶ್ವಿನಿ ಪ್ರೊಡಕ್ಷನ್ಸ್ ಅಡಿಯಲ್ಲಿ ಅಶ್ವಿನಿ ಸಂತೋಷ್ ಸಿಂಹ ನಿರ್ಮಾಣ ಮಾಡುವುದರ ಜತೆಗೆ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಜೀವನ್ ಸಿಂಹ, ತನುಶ್ರೀ ಸಿಂಹ, ಬಿ.ಎಸ್.ಮಂಜುಳಾ, ವೈಷ್ಣವಿ ಎಸ್.ಡಿ ಮುಂತಾದವರು ಚಿತ್ರದಲ್ಲಿದ್ದಾರೆ. ಚೇತನ್‌ಕುಮಾರ್ ಸಾಹಿತ್ಯದ ಐದು ಗೀತೆಗಳಿಗೆ ಸ್ವರೂಪ್ ಆರ್ ಸಂಗೀತ ಸಂಯೋಜಿಸುತಿದ್ದಾರೆ.

ಛಾಯಾಗ್ರಹಣ-ಸಂಕಲನ ವರ್ಷಿತ್.ಎಸ್.ಎನ್ ಅವರದ್ದು.

ಬೆಂಗಳೂರು, ಶಬರಿಮಲೆ, ಪಂಪ ನದಿ, ದೊಡ್ಡಪಾದ ಮುಂತಾದೆಡೆ ಚಿತ್ರೀಕರಣ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ.



ನಾಗಾ ಸಾಧುಗಳೊಂದಿಗೆ ಚಿತ್ರತಂಡ



ಶೈಲಾಶ್ರೀ ಮುಲ್ಕಿ, ಅರವಿಂದ್ ಬೋಳಾರ್, ಶ್ರೀಹನ್ ದೀಪಕ್

ತೆರೆಗೆ ಬರಲು ಸಜ್ಜಾದ ‘ಕೆಂಪು ಹಳದಿ ಹಸಿರು’

ಬಹುತೇಕ ಹೊಸಬರಿಂದಲೇ ಕೂಡಿರುವ ‘ಕೆಂಪು ಹಳದಿ ಹಸಿರು’ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡವು. ಮಣಿ ಕಾರ್ತಿಕೇಯನ್ ನಿರ್ದೇಶನವಿದೆ. ಸನ್‌ರೈಸ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಮೂಲಕ ಪ್ರಸಾದ್‌ಕುಮಾರ್ ನಾಯ್ಕ್ ಬಂಡವಾಳ ಹೂಡಿದ್ದಾರೆ.

‘ಚಿತ್ರದ ಶೀರ್ಷಿಕೆ ಪಾತ್ರಗಳ ಭಾವನೆಗಳನ್ನು ಹೇಳುತ್ತದೆ. ಕೆಂಪು, ಹಳದಿ, ಹಸಿರು ಎನ್ನುವಂಥ ಮೂರು ಪಾತ್ರಗಳು ಚಿತ್ರದಲ್ಲಿವೆ. ತ್ರಿಕೋನ ಪ್ರೇಮಕಥೆಯೊಂದಿಗೆ ಸಸ್ಪೆನ್ಸ್, ಥ್ರಿಲ್ಲರ್, ಕಾಮಿಡಿ ಜಾನರ್‌ನ ಚಿತ್ರ. ಸಣ್ಣ ಎಳೆ ಬಿಟ್ಟುಕೊಟ್ಟರೂ ಒಟ್ಟಾರೆ ಸಿನಿಮಾದ ಸಾರ ತಿಳಿಸಿದಂತೆ ಆಗುತ್ತದೆ. ಹೀಗಾಗಿ ಈಗಲೇ ಕಥೆ ಹೇಳುವುದಿಲ್ಲ. ಮಂಗಳೂರು, ಉಡುಪಿ ಮುಂತಾದೆಡೆ ಚಿತ್ರೀಕರಣ ನಡೆಸಲಾಗಿದೆ. ಡಿಸೆಂಬರ್ ಮೊದಲನೇ ವಾರದಲ್ಲಿ ತೆರೆಗೆ ತರಲು ಚಿಂತನೆ ನಡೆಸಲಾಗಿದೆ’ ಎಂದರು ನಿರ್ದೇಶಕ.

ಶ್ರೀಹನ್ ದೀಪಕ್ ಚಿತ್ರದ ನಾಯಕ. ದಿವ್ಯಾ ಸುರೇಶ್ ನಾಯಕಿ. ತುಳು ಚಿತ್ರರಂಗದ ಖ್ಯಾತ ಹಾಸ್ಯ ನಟ ಅರವಿಂದ್ ಬೋಳಾರ್, ಶೈಲಾಶ್ರೀ ಮುಲ್ಕಿ, ಚಿಂದೋಡಿ ವಿಜಯ್‌ಕುಮಾರ್ ಮುಂತಾದವರು ಅಭಿನಯಿಸಿದ್ದಾರೆ.

ಮಂಜುನಾಥ್ ನಾಯಕ್ ಛಾಯಾಚಿತ್ರಗ್ರಹಣ, ವಿಕಾಸ್ ವಿಶ್ವಕರ್ಮ ಸಂಗೀತ, ಸತೀಶ್ ಈರ್ಲಾ ಸಂಕಲನವಿದೆ.

ಯುವಜನರ ಸಮರ್ಪಣೆ ವಿಕಸಿತ ಭಾರತದ ದೊಡ್ಡ ಶಕ್ತಿ: ಮೋದಿ

ಪ್ರಸ್ತಾಪಿಸಿದ ವಿಚಾರಗಳು

- ಕರ್ನಾಟಕ ಸೇರಿದಂತೆ ದೇಶದಾದ್ಯಂತ ನಡೆಯುವ ಜೇನುಕೃಷಿ ಪ್ರಸ್ತಾಪ
- ಕ್ರೀಡಾ ಕ್ಷೇತ್ರದಲ್ಲಿ ಭಾರತೀಯ ಕ್ರೀಡಾಪಟುಗಳ ಸಾಧನೆಯೂ ಉಲ್ಲೇಖ
- 2030ರಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ಆಯೋಜಿಸುವ ಬಿಡ್ಡಿಂಗ್ ಪಡೆದ ಭಾರತ
- ದಕ್ಷಿಣ ಆಫ್ರಿಕಾ, ಜಿ–20 ಶೃಂಗಸಭೆ, ಭೂತಾನ್ ಪ್ರವಾಸದ ವಿವರ

ಮನದ ಮಾತು



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ಪಾದನೆಗಳಿಂದ ಕೃಷಿಯವರೆಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ನಡೆದ ಇತ್ತೀಚಿನ ಬೆಳವಣಿಗೆಯನ್ನು ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ದೇಶದ ಯುವಜನರೇ ವಿಕಸಿತ ಭಾರತದ ದೊಡ್ಡ ಶಕ್ತಿಯಾಗಿದ್ದಾರೆ’ ಎಂದು ಹೇಳಿದ್ದಾರೆ.

ತಮ್ಮ ‘ಮನದ ಮಾತು’ ಕಾರ್ಯಕ್ರಮದ 128ನೇ ಸಂಚಿಕೆಯಲ್ಲಿ ‘ವಂದೇ ಮಾತರಂ’ನ 150ನೇ ವರ್ಷಾಚರಣೆ, ಸಂಸತ್‌ನ ಸೆಂಟ್ರಲ್ ಹಾಲ್‌ನಲ್ಲಿ ಸಂವಿಧಾನ ದಿನ ಆಚರಣೆ, ಅಯೋಧ್ಯೆಯ ರಾಮಮಂದಿರ ಮೇಲ್ಭಾಗದಲ್ಲಿ ಧರ್ಮಧ್ವಜ ಸ್ಥಾಪನೆ ಸೇರಿದಂತೆ ಹಲವು ಚಟುವಟಿಕೆಗಳನ್ನು ಉಲ್ಲೇಖಿಸಿದ್ದಾರೆ.

ಹೈದರಬಾದ್‌ನಲ್ಲಿ ವಿಶ್ವದಲ್ಲಿಯೇ ಅತೀ ದೊಡ್ಡದಾದ ವಿಮಾನ ಎಂಜಿನ್‌ಗಳ ನಿರ್ವಹಣೆ, ದುರಸ್ತಿ ಹಾಗೂ ಕಾರ್ಯಾಚರಣೆಯ ಕೇಂದ್ರದ ಉದ್ಘಾಟನೆ, ಭಾರತೀಯ ನೌಕಾಪಡೆಗೆ ಐಎನ್‌ಎಸ್ ‘ಮಾಹೆ’ ಸೇರ್ಪಡೆ ಆಗಿರುವುದನ್ನು ಪ್ರಸ್ತಾಪಿಸಿದರು.

‘ಕಳೆದ ವಾರ ‘ಸ್ಕೈರೂಟ್ ಇನ್ಫಿನಿಟಿ ಕ್ಯಾಂಪಸ್’ ಭಾರತೀಯ ಬಾಹ್ಯಾಕಾಶ ಪರಿಸರ ವ್ಯವಸ್ಥೆಗೆ ಹೊಸ ಉತ್ತೇಜನ ನೀಡಿತು. ಇದು ಭಾರತದ ಹೊಸ ಚಿಂತನೆ, ಸಂಶೋಧನೆ ಹಾಗೂ ಯುವ ಸಮುದಾಯದ ಶಕ್ತಿಯನ್ನು ಪ್ರತಿಬಿಂಬಿಸಿತು’ ಎಂದು ಹೇಳಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಆಯೋಜಿಸಿದ್ದ ಡ್ರೋನ್ ಸ್ಪರ್ಧೆಯ ವಿಡಿಯೊವನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ ಹಂಚಿಕೊಂಡಿದ್ದಾರೆ. ‘ಈ ವಿಡಿಯೊದಲ್ಲಿ ಝೆನ್–ಜಿ ಯುವಕರು ಮಂಗಳ ಗ್ರಹದಲ್ಲಿ ಇರುವ ಪರಿಸ್ಥಿತಿಯಂತೆಯೇ ಡ್ರೋನ್‌ಗಳನ್ನು ಹಾರಿಸಲು ಯತ್ನಿಸಿದರು. ಹಲವು ವೈಫಲ್ಯಗಳ ನಂತರ ಯಶಸ್ಸು ಸಾಧಿಸಿದರು. ಚಂದ್ರಯಾನ–2 ಸಂಪರ್ಕ ಕಳೆದುಕೊಂಡಿದ್ದ ವೇಳೆ ಇಸ್ರೊ ವಿಜ್ಞಾನಿಗಳು ಕೂಡ ತೀವ್ರ ನಿರಾಸೆ ಹೊಂದಿದ್ದರು. ನಂತರ ಚಂದ್ರಯಾನ–3ರಲ್ಲಿ ಯಶಸ್ಸು ಸಾಧಿಸಿದರು’ ಎಂದು ಮೋದಿ ನೆನಪಿಸಿಕೊಂಡಿದ್ದಾರೆ.

ರಾಜ್ಯದ ಜೇನು ಉತ್ಪಾದಕರ ಉಲ್ಲೇಖ, ಶ್ಲಾಘನೆ

ಪ್ರಜಾವಾಣಿ ವಾರ್ತೆ

ತುಮಕೂರು/ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ‘ಮನದ ಮಾತು’ ಕಾರ್ಯಕ್ರಮದಲ್ಲಿ ರಾಜ್ಯದ ಎರಡು ಜೇನು ಉತ್ಪಾದಕ ಸಂಸ್ಥೆಗಳ ಸಾಧನೆ ಉಲ್ಲೇಖಿಸಿ ಶ್ಲಾಘಿಸಿದ್ದಾರೆ.

ತುಮಕೂರು ತಾಲ್ಲೂಕಿನ ಗೂಳೂರಿನಲ್ಲಿ ಮಹಿಳೆಯರೇ ಮುನ್ನಡೆಸುತ್ತಿರುವ ‘ಶಿವಗಂಗಾ ಜೇನು ಕೃಷಿ– ರೈತ ಉತ್ಪಾದಕ ಸಂಸ್ಥೆ’ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಗ್ರಾಮಜನ್ಯ ರೈತರ ಉತ್ಪಾದಕ ಕಂಪನಿಯ ಹೆಸರನ್ನು ಉಲ್ಲೇಖಿಸಿ ಪ್ರಧಾನಿ ಮೆಚ್ಚುಗೆ ಸೂಚಿಸಿದ್ದಾರೆ.

‘ಶಿವಗಂಗಾ ಸಂಸ್ಥೆ ಮಹಿಳೆಯರಿಗೆ ಕೃಷಿ ವಿಜ್ಞಾನ ಕೇಂದ್ರದಿಂದ ತಲಾ 2 ಜೇನು ಪೆಟ್ಟಿಗೆ ವಿತರಿಸಲಾಗಿದೆ. ಮಹಿಳೆಯರು ಲಕ್ಷಾಂತರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ’ ಎಂದು ಪ್ರಧಾನಿ ಶ್ಲಾಘಿಸಿದ್ದಾರೆ.



2022ರಲ್ಲಿ ಆರಂಭವಾದ ಶಿವಗಂಗಾ ಸಂಸ್ಥೆ ಧಾನ್ ಫೌಂಡೇಷನ್ ಸಹಕಾರದಲ್ಲಿ ನಡೆಯುತ್ತಿದೆ. ತಾಲ್ಲೂಕಿನ ಕೆ.ಪಾಲಸಂದ್ರ, ಗೂಳೂರು, ಹೆತ್ತೇನಹಳ್ಳಿ ಮತ್ತು ಹೆಬ್ಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ 300 ಜನ ರೈತ ಮಹಿಳೆಯರು ಸಂಸ್ಥೆಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ.

‘ಸಂಸ್ಥೆಯ ರೈತ ಮಹಿಳೆಯರು ಸದ್ಯ ವರ್ಷಕ್ಕೆ 1 ಸಾವಿರ ಕೆ.ಜಿ ಜೇನು ತುಪ್ಪ ಉತ್ಪಾದಿಸುತ್ತಿದ್ದಾರೆ’ ಎಂದು ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ಎನ್.ಕೆ.ವಸಂತಕುಮಾರ್ ತಿಳಿಸಿದರು.

ಮಂಗಳೂರು ವರದಿ: ‘ಪುತ್ತೂರಿನ ಗ್ರಾಮಜನ್ಯ ಸಂಸ್ಥೆ ನಿಸರ್ಗದ ಕೊಡುಗೆಯಾದ ಜೇನುತುಪ್ಪಕ್ಕೆ ಹೊಸ ದಿಸೆ ತೋರಿಸಿದೆ. ಆಧುನಿಕ ಸಂಸ್ಕರಣಾ ಘಟಕ, ಪ್ರಯೋಗಾಲಯ, ಸಂಗ್ರಹಾಗಾರಗಳನ್ನು ಗ್ರಾಮಜನ್ಯ ಹೊಂದಿದೆ. ಗ್ರಾಮೀಣ ಪ್ರದೇಶದ ಈ ಜೇನುತುಪ್ಪವು ಬ್ರ್ಯಾಂಡೆಡ್ ಉತ್ಪನ್ನವಾಗಿ ನಗರಗಳನ್ನು ತಲುಪುತ್ತಿದೆ. ಈ ಪ್ರಯತ್ನದಿಂದ ರೈತರಿಗೂ ಪ್ರಯೋಜನವಾಗಿದೆ’ ಎಂದು ಪ್ರಧಾನಿ ಹೇಳಿದ್ದಾರೆ.

ಈ ಬಗ್ಗೆ ಸಂತಸ ವ್ಯಕ್ತಪಡಿಸಿದ ಸಂಸ್ಥೆಯ ನಿರ್ದೇಶಕ (ಕಾರ್ಯಾಚರಣೆ) ರಾಮಪ್ರತೀಕ್ ಕರಿಯಾಲ, ‘ಇದರಿಂದ ನಮ್ಮ ಎಫ್‌ಪಿಒಗೆ ಹಾಗೂ ಅದರ ಚಟುವಟಿಕೆಗೆ ಉತ್ತೇಜನ ಸಿಗಲಿದೆ’ ಎಂದರು.

‘ಆತ್ಮನಿರ್ಭರ ಭಾರತ ಕಾರ್ಯಕ್ರಮದಡಿ ನಾವು ರೈತರ ಉತ್ಪಾದಕ ಕಂಪನಿಯನ್ನು 2020ರಲ್ಲಿ ಸ್ಥಾಪಿಸಿದೆವು. ಸಂಸ್ಥೆಯು 950 ಕೃಷಿಕರನ್ನು ಷೇರುದಾರರನ್ನಾಗಿ ಹೊಂದಿದ್ದು, ಅವರಲ್ಲಿ ಮೂರನೇ ಒಂದರಷ್ಟು ಮಂದಿ ಜೇನು ಕೃಷಿಯಲ್ಲಿ ತೊಡಗಿದ್ದಾರೆ. ಕೊಡಗು ಜಿಲ್ಲೆ ಹಾಗೂ ಕೇರಳದ ಕಾಸರಗೋಡು ಜಿಲ್ಲೆಯ ಜೇನು ಕೃಷಿಕರಿಂದಲೂ ಜೇನು ತುಪ್ಪ ಪಡೆಯುತ್ತೇವೆ’ ಎಂದರು.

ಮೆಕ್ಕೆಜೋಳ ಖರೀದಿಗೆ ಆದೇಶ

ಎಲ್ಲಿ ಎಷ್ಟು ಖರೀದಿ (ಟನ್‌ಗಳಲ್ಲಿ)

ಕಾರ್ತಿಕ್ ಆಗ್ರೋ ಇಂಡಸ್ಟ್ರೀಸ್ ಬಾಗಲಕೋಟೆ	4,465
ಗ್ರೀನ್ ಎನರ್ಜಿ ಬಯೋ ರಿಫೈನರೀಸ್ ಹಾವೇರಿ	12,742.5
ಸಾವನ್ ಡಿಸ್ಟಿಲ್ ಪ್ರೈ.ಲಿ ಬೆಳಗಾವಿ	1,004
ಸೂರಜ್ ಆಗ್ರೋ ಇಂಡಸ್ಟ್ರೀಸ್ ಹಾವೇರಿ	2,187.5
ಪ್ರಭೃತಿ ಎಥೆನಾಲ್ ಪ್ರೈ ಲಿ. ಹಾವೇರಿ	2,048

ಸೂಚನೆ ಏನೇನು

ಒಂದನೇ ಪುಟದಿಂದ...

- ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಡಿಸ್ಟಿಲರಿಗಳಿಂದ ಮಾರಾಟದ ಮೊತ್ತ ಪಡೆದ ದಿನಾಂಕದಿಂದ ಮೂರು ದಿನಗಳಲ್ಲಿ ಸಂಬಂಧಪಟ್ಟ ರೈತರಿಗೆ ನೇರವಾಗಿ ಖಾತೆಗೆ ಖರೀದಿ ಹಣ ಪಾವತಿಸಬೇಕು.
- ಧಾನ್ಯ ಹಾಗೂ ಕಾಕಂಬಿ ಆಧಾರಿತ ಡಿಸ್ಟಿಲರಿಗಳು ಬೇಡಿಕೆ ಸಲ್ಲಿಸಿದರೆ ಮೆಕ್ಕೆಜೋಳ ಖರೀದಿ ಪ್ರಕ್ರಿಯೆಯನ್ನು ಮಹಾಮಂಡಳ ಮುಂದುವರಿಸಬೇಕು.
- ಖರೀದಿ ಪ್ರಕ್ರಿಯೆಗೆ ತಗಲುವ ವೆಚ್ಚ, ಎನ್‌ಇಎಂಎಲ್ ಸಂಸ್ಥೆಯ ಸೇವಾ ವೆಚ್ಚ ಹಾಗೂ ಇತರ ವೆಚ್ಚಗಳನ್ನು ಮಹಾಮಂಡಳಕ್ಕೆ ರಾಜ್ಯ ಸರ್ಕಾರದಿಂದ ಒದಗಿಸಲಾಗುವುದು.

ಒಂದನೇ ಪುಟದಿಂದ...

ಈ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಸಭೆ ನಡೆಸಿದ್ದರು. ಸಭೆಯ ತೀರ್ಮಾನದಂತೆ, ಸಹಕಾರ ಇಲಾಖೆಯು ಖರೀದಿ ಪ್ರಕ್ರಿಯೆ, ನಿಗದಿತ ಡಿಸ್ಟಿಲರಿಗಳು, ಖರೀದಿಸುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಪ್ರಮಾಣಿತ ಕಾರ್ಯ ವಿಧಾನ (ಎಸ್‌ಒಪಿ) ಕುರಿತ ಆದೇಶ ಹೊರಡಿಸಿದೆ.

‘ಸೋಮವಾರದಿಂದಲೇ ಖರೀದಿಗೆ ರೈತರ ನೋಂದಣಿ ಪ್ರಕ್ರಿಯೆ ಆರಂಭವಾಗಲಿದೆ. ಮೂರು ದಿನದ ಬಳಿಕ ನೋಂದಣಿ ಜತೆಗೆ ಖರೀದಿ ಎರಡೂ ಪ್ರಕ್ರಿಯೆಗಳು ಮುಂದುವರಿಯಲಿವೆ. ಜಿಲ್ಲಾಧಿಕಾರಿ, ಅಬಕಾರಿ ಇಲಾಖೆ ಜಿಲ್ಲಾಧಿಕಾರಿ, ಸಹಕಾರ ಇಲಾಖೆಯ ಜಿಲ್ಲಾ ನಿಬಂಧಕರು ಖರೀದಿ ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸುವಂತೆ ಸೂಚಿಸಲಾಗಿದೆ’ ಎಂದು ಸಹಕಾರ ಇಲಾಖೆ ತನ್ನ ಆದೇಶದಲ್ಲಿ ಹೇಳಿದೆ.

ಆಹಾರಕ್ಕಾಗಿ ಬಂದ ಯುವಕನಿಗೆ ಗುಂಡೇಟು: ಸಾವು

ನವದೆಹಲಿ (ಪಿಟಿಐ): ಆಹ್ವಾನವಿಲ್ಲದಿದ್ದರೂ ಆಹಾರಕ್ಕಾಗಿ ವಿವಾಹ ಸಮಾರಂಭಕ್ಕೆ ಬಂದ 17 ವರ್ಷದ ಕೊಳೆಗೇರಿ ಯುವಕನನ್ನು ದೆಹಲಿಯ ಶಾಹದರಾದಲ್ಲಿ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಹೆಡ್ ಕಾನ್‌ಸ್ಟೆಬಲ್ ಗುಂಡಿಕ್ಕಿ ಕೊಂದಿದ್ದಾರೆ. ಮಾನಸ ಸರೋವರ ಪಾರ್ಕ್‌ನ ಡಿಡಿಎ ಮಾರುಕಟ್ಟೆ ಸಮುದಾಯ ಕೇಂದ್ರದ ಬಳಿ ಶನಿವಾರ ಸಂಜೆ ನಡೆದ ವಿವಾಹ ಸಮಾರಂಭದಲ್ಲಿ ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

‘ನ್ಯೂ ಮಾಡರ್ನ್ ಶಾಹದರಾ ನಿವಾಸಿಯಾದ ಯುವಕನಿಗೆ ಮದುವೆಯಲ್ಲಿ ಗುಂಡೇಟು ಬಿದ್ದಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದಾಗ, ಯುವಕ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ’ ಎಂದು ಡಿಸಿಪಿ ಪ್ರಶಾಂತ್ ಗೌತಮ್ ಹೇಳಿದ್ದಾರೆ.

ಬೆಲ್ಜಿಯಂ ತಂಡಕ್ಕೆ ‘ಅಜ್ಲಾನ್ ಶಾ ಕಪ್’

ಹಾಕಿ: ಭಾರತ ತಂಡಕ್ಕೆ ಬೆಳ್ಳಿ ಪದಕ ಸ್ಟಾಕ್‌ಬ್ರೊಯೆಕ್ಸ್ ನಿರ್ಣಾಯಕ ಗೋಲು



ಭಾರತ ಪುರುಷರ ಹಾಕಿ ತಂಡದ ನಾಯಕ ಸಂಜಯ್ ಎಕ್ಸ್ ಚಿತ್ರ

ಇಪೊ(ಪಿಟಿಐ): ಸುಲ್ತಾನ್ ಅಜ್ಲಾನ್ ಶಾ ಕಪ್ ಜಯಿಸುವ ಭಾರತ ಹಾಕಿ ತಂಡದ ಕನಸು ಕೈಗೂಡಲಿಲ್ಲ. ಭಾನುವಾರ ಇಲ್ಲಿ ನಡೆದ ಫೈನಲ್‌ನಲ್ಲಿ ಬೆಲ್ಜಿಯಂ ತಂಡವು 1–0ಯಿಂದ ಭಾರತ ತಂಡವನ್ನು ಸೋಲಿಸಿ ಪ್ರಶಸ್ತಿ ಗೆದ್ದಿತು.

ಅರ್ಧ ವಿರಾಮದವರೆಗೂ ಉಭಯ ತಂಡಗಳಿಗೆ ಒಂದೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಎರಡೂ ಕಡೆಯಿಂದ ತುರುಸಿನ ಹೋರಾಟ ಕಂಡುಬಂದಿತು.

ಆದರೆ 34ನೇ ನಿಮಿಷದಲ್ಲಿ ಬೆಲ್ಜಿಯಂ ತಂಡದ ಸ್ಟಾಕ್‌ಬ್ರೊಯೆಕ್ಸ್ ತಿಬೆಯು ಅವರು ಹೊಡೆದ ಗೋಲು ನಿರ್ಣಾಯಕವಾಯಿತು. ಆದರ ನಂತರ ಭಾರತ ತಂಡದ ಆಟಗಾರರ ಪ್ರಯತ್ನಗಳೆಲ್ಲವೂ ವಿಫಲವಾದವು. ಇನ್ನೊಂದೆಡೆ ಭಾರತದ ರಕ್ಷಣಾ ಆಟಗಾರರೂ ಎದುರಾಳಿ ಪಾಳೆಯಕ್ಕೆ ಗೋಲು ಬಿಟ್ಟುಕೊಡಲಿಲ್ಲ. ಆದರೆ ಗೆಲುವು ಬೆಲ್ಜಿಯಂ ಪಾಲಾಯಿತು. ಭಾರತ ತಂಡ ಬೆಳ್ಳಿ ಪದಕ ಪಡೆಯಿತು.

ಈ ಟೂರ್ನಿಯಲ್ಲಿ ಬೆಲ್ಜಿಯಂ ತಂಡ ಗಳಿಸಿದ ಮೊದಲ ಪ್ರಶಸ್ತಿ ಇದಾಗಿದೆ. ತಂಡವು ಎರಡನೇ ಬಾರಿ ಟೂರ್ನಿಯಲ್ಲಿ ಭಾಗವಹಿಸಿತ್ತು.

ಶನಿವಾರ ನಡೆದಿದ್ದ ಪಂದ್ಯದಲ್ಲಿ ಭಾರತ ತಂಡವು 14–3ರಿಂದ ಕೆನಡಾ ಎದುರು ಗೆದ್ದು ಫೈನಲ್ ಪ್ರವೇಶಿಸಿತ್ತು. ಆದರೆ ಅಂತಿಮ ಪಂದ್ಯದಲ್ಲಿ ಮೂರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಾಗಿ ಪರಿವರ್ತಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ. ಟೂರ್ನಿಯುದ್ದಕ್ಕೂ ಭಾರತದ ಜುಗರಾಜ್ ಸಿಂಗ್, ಅಮಿತ್ ರೋಹಿದಾಸ್ ಮತ್ತು ನಾಯಕ ಸಂಜಯ್ ಅವರು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ದಾಖಲಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ ಬೆಲ್ಜಿಯಂ ಎದುರು ವಿಫಲರಾದರು.

ಈ ಟೂರ್ನಿಯಲ್ಲಿ ಭಾರತ ತಂಡವು ಬೆಲ್ಜಿಯಂ ಎದುರು ಅನುಭವಿಸಿದ ಎರಡನೇ ಸೋಲು ಇದು. ಲೀಗ್ ಹಂತದಲ್ಲಿ ಭಾರತವು 2–3ರಿಂದ ಸೋತಿತ್ತು.

ಬೆಲ್ಜಿಯಂ ತಂಡದ ರಕ್ಷಣಾ ಗೋಡೆಯನ್ನು ಮೀರಿ ನಿಲ್ಲಲು ಭಾರತ ತಂಡಕ್ಕೆ ಸಾಧ್ಯವಾಗಲಿಲ್ಲ. ಮಿಡ್‌ಫೀಲ್ಡರ್‌ಗಳಾದ ಮನಪ್ರೀತ್ ಸಿಂಗ್ ಮತ್ತು ಹಾರ್ದಿಕ್ ಸಿಂಗ್ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಆದ್ದರಿಂದ ಯುವ ಆಟಗಾರರ ಮೇಲೆ ಒತ್ತಡವಿತ್ತು.

ಬೆಲ್ಜಿಯಂ ಆಟಗಾರರು ಆರಂಭದಿಂದಲೇ ಚೆಂಡನ್ನು ನಿಯಂತ್ರಣಕ್ಕೆ ಪಡೆಯುವ ಮತ್ತು ಪಾಸ್ ಕೊಡುವ ತಂತ್ರಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸಿದರು. ಭಾರತದ ರಕ್ಷಣಾ ಆಟಗಾರರು ಉತ್ತಮವಾಗಿ ಆಡಿದರು. ಗೋಲ್‌ಕೀಪರ್ ಎರಡು ಬಾರಿ ಗೋಲು ತಡೆದರು.

ಕಾಮನ್‌ವೆಲ್ತ್: ₹ 3000–5000 ಕೋಟಿ ನಿರ್ವಹಣಾ ವೆಚ್ಚ

ನವದೆಹಲಿ (ಪಿಟಿಐ): ಅಹಮದಾಬಾದಿನಲ್ಲಿ 2030ರಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕಾಗಿ ಸಂಘಟನಾ ಸಮಿತಿಯೊಂದನ್ನು ರಚಿಸಲಾಗುವುದು. ಕೂಟದ ಕಾರ್ಯ ನಿರ್ವಹಣಾ ವೆಚ್ಚವು ಅಂದಾಜು ₹ 3000 ರಿಂದ ₹ 5000 ಕೋಟಿ ಆಗುವ ಸಾಧ್ಯತೆ ಇದೆ.

ಕೂಟದ ಯೋಜನೆಯಲ್ಲಿ ಭಾಗಿಯಾಗಿರುವ ಮೂಲಗಳ ಪ್ರಕಾರ, ಕ್ರೀಡೆ ಮತ್ತು ಸಾರ್ವಜನಿಕ ಬಳಕೆಗಾಗಿ ಇರುವ ಮೂಲಸೌಲಭ್ಯಗಳನ್ನು ಉನ್ನತ ದರ್ಜೆಗೆ ಏರಿಸುವುದು, ಹೊಸ ಸೌಲಭ್ಯಗಳನ್ನು ನಿರ್ಮಿಸುವುದು ಸೇರಿದಂತೆ ಇರುವ ಕಾರ್ಯ ಯೋಜನೆಗಳಿಗೆ ಒಟ್ಟಾರೆ ವೆಚ್ಚವನ್ನು ಅಂದಾಜು ಮಾಡಲಾಗುತ್ತಿದೆ.

‘2010ರಲ್ಲಿ ದೆಹಲಿಯಲ್ಲಿ ಕಾಮನ್‌ವೆಲ್ತ್ ಕೂಟ ನಡೆದಿತ್ತು. ಅದರಲ್ಲಿ ಹಲವು ವಿವಾದಗಳಾಗಿದ್ದವು. ಮೂಲಸೌಲಭ್ಯಗಳ ಅಭಿವೃದ್ಧಿಯಲ್ಲಿ ವಿಳಂಬ, ಭ್ರಷ್ಟಾಚಾರ ಆರೋಪಗಳು ಮತ್ತು ಪೂರ್ವಯೋಜನೆಯಲ್ಲಿ ನಿರ್ಧರಿಸಿದ ವೆಚ್ಚವು ನಿರ್ಮಾಣ ಹಂತದ ಕೊನೆಯಲ್ಲಿ ವಿಪರೀತ ಹೆಚ್ಚಳವಾಗಿ ವಿವಾದವಾಗಿದ್ದವು. ಆದ್ದರಿಂದ ಈ ಬಾರಿ ಯಾವುದೇ ವಿವಾದಗಳು ಇಲ್ಲಿ ಆಗದಂತೆ ಎಚ್ಚರ ವಹಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಕೂಟದ ನಿರ್ವಹಣಾ ವೆಚ್ಚವು ₹ 3000 ರಿಂದ ₹ 5000 ಕೋಟಿವರೆಗೆ ಆಗಲಿದೆ. ಇದರಲ್ಲಿ ಕಟ್ಟಡ ನಿರ್ಮಾಣ ಮತ್ತಿತರ ಮೂಲಸೌಲಭ್ಯ ಅಭಿವೃದ್ಧಿಯ ವೆಚ್ಚ ಸೇರಿಲ್ಲ’ ಎಂದೂ ಮೂಲಗಳು ತಿಳಿಸಿವೆ.

ಭಾರತ– ಅಫ್ಗನ್ ಪಂದ್ಯ ಮಳೆಯ ಪಾಲು

ಬೆಂಗಳೂರು (ಪಿಟಿಐ): ಪ್ರತಿಕೂಲ ಹವಾಮಾನದ ಕಾರಣ ಭಾರತ ಮತ್ತು ಅಫ್ಗಾನಿಸ್ತಾನ ತಂಡಗಳ ನಡುವಣ 19 ವರ್ಷದೊಳಗಿನವರ ತ್ರಿಕೋನ ಏಕದಿನ ಸರಣಿಯ ಪಂದ್ಯ ಭಾನುವಾರ ಸ್ಥಗಿತಗೊಂಡಿತು. ಭಾರತ 19 ಓವರುಗಳಲ್ಲಿ 5 ವಿಕೆಟ್‌ಗೆ 79 ರನ್ ಗಳಿಸಿದ್ದಾಗ ಮಳೆ ಮತ್ತು ಮಂದ ಬೆಳಕಿನಿಂದ ಪಂದ್ಯಕ್ಕೆ ಅಡ್ಡಿಯಾಯಿತು.

ಜೂನಿಯರ್ ಹಾಕಿ ವಿಶ್ವಕಪ್: ಸ್ಪೇನ್‌ಗೆ 2ನೇ ಗೆಲುವು

ಮದುರೈ (ಪಿಟಿಐ): ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಸ್ಪೇನ್ ತಂಡವು ಭಾನುವಾರ ಇಲ್ಲಿ ನಡೆದ ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್‌ನ ಡಿ ಗುಂಪಿನ ಪಂದ್ಯದಲ್ಲಿ 2–0 ಗೋಲುಗಳಿಂದ ಬೆಲ್ಜಿಯಂ ತಂಡವನ್ನು ಸೋಲಿಸಿತು. ಸತತ ಎರಡನೇ ಗೆಲುವು ದಾಖಲಿಸಿದ ಸ್ಪೇನ್, ಕ್ವಾರ್ಟರ್ ಫೈನಲ್ ಸ್ಥಾನಕ್ಕಾಗಿ ತನ್ನ ಹಾದಿಯನ್ನು ಸುಗಮಗೊಳಿಸಿತು.

ಜುವಾನ್ ಪ್ರಾಡೊ (20ನೇ ನಿಮಿಷ) ಮತ್ತು ಬ್ರೂನೊ ಅವಿಲಾ (32ನೇ ನಿಮಿಷ) ಅವರು ಸ್ಪೇನ್ ಪರ ಗೋಲು ಗಳಿಸಿದರು. ಇದಕ್ಕೂ ಮುನ್ನ ಸ್ಪೇನ್ 8–0ಯಿಂದ ಈಜಿಪ್ಟ್ ತಂಡವನ್ನು ಮಣಿಸಿ ಅಭಿಯಾನ ಆರಂಭಿಸಿತ್ತು.

ಸ್ಪೇನ್ ತಂಡವು ಎರಡು ಪಂದ್ಯಗಳಿಂದ ಆರು ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಏಳನೇ ಕ್ರಮಾಂಕದ ಬೆಲ್ಜಿಯಂ ತಂಡವು ಎರಡು ಪಂದ್ಯಗಳಿಂದ ಮೂರು ಅಂಕಗಳನ್ನು ಹೊಂದಿದೆ. ಸ್ಪೇನ್ ತಂಡವು ಮಂಗಳವಾರ ನಮೀಬಿಯಾ ವಿರುದ್ಧ ಆಡಲಿದ್ದು, ಅದೇ ದಿನ ಬೆಲ್ಜಿಯಂ ತಂಡವು ಈಜಿಪ್ಟ್ ವಿರುದ್ಧ ಸೆಣಸಲಿದೆ.



ನ್ಯೂಜಿಲೆಂಡ್ (ಬಲ) ಮತ್ತು ಅರ್ಜೆಂಟೀನಾ ತಂಡದ ಆಟಗಾರರ ನಡುವೆ ಚೆಂಡಿಗಾಗಿ ಪೈಪೋಟಿ ಪಿಟಿಐ ಚಿತ್ರ

ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ನಮೀಬಿಯಾ ತಂಡವು 4–2ರಿಂದ ಈಜಿಪ್ಟ್ ತಂಡವನ್ನು ಮಣಿಸಿತು. ನಮೀಬಿಯಾ ಪರ ಲಿಯಾಮ್ ಬ್ರೊಯ್ಸ್ (23ನೇ), ಜೇಮ್ಸ್ ಡಿ ಜಾಗರ್ (26ನೇ), ಜೋಶ್ ವ್ಯಾನ್ ಮೆರ್ವೆ (32ನೇ) ಮತ್ತು ಜಾನ್ ಪೌಲ್ ಬ್ರಿಟ್ಜ್ (60ನೇ) ಗೋಲು ಗಳಿಸಿದರು. ಈಜಿಪ್ಟ್ ಪರ ಅಬ್ದುಲ್ ರಹಮಾನ್ ಕಾಸೆಮ್ (28ನೇ) ಮತ್ತು ಮೊಹಬ್ ಹೆಗಾಬ್ (53ನೇ) ಚೆಂಡನ್ನು ಗುರಿ ಸೇರಿಸಿದರು.

ಇತರ ಪಂದ್ಯಗಳಲ್ಲಿ ವಿಶ್ವದ ಐದನೇ ಕ್ರಮಾಂಕದ ನೆದರ್ಲೆಂಡ್ಸ್ ತಂಡವು 6–1ರಿಂದ ಮಲೇಷ್ಯಾವನ್ನು ಸೋಲಿಸಿ ಇ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಅಷ್ಟೇ ಪಂದ್ಯಗಳಲ್ಲಿ ಎರಡು ಗೆಲುವು ದಾಖಲಿಸಿದ ಇಂಗ್ಲೆಂಡ್ ಎರಡನೇ ಸ್ಥಾನದಲ್ಲಿದೆ. ಇಂಗ್ಲೆಂಡ್ ತಂಡವು 13-0ರಿಂದ ಆಸ್ಟ್ರಿಯಾವನ್ನು ಮಣಿಸಿತು.

ಚೆನ್ನೈನ ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು 3–3 ಗೋಲುಗಳಿಂದ ಅರ್ಜೆಂಟೀನಾ ತಂಡದೊಂದಿಗೆ ಡ್ರಾ ಸಾಧಿಸಿತು. ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಜಪಾನ್ 3–2ರಿಂದ ಚೀನಾ ತಂಡವನ್ನು ಮಣಿಸಿತು. ಎಫ್ ಗುಂಪಿನ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವು 3–3ರಿಂದ ಬಾಂಗ್ಲಾದೇಶ ವಿರುದ್ಧ ಡ್ರಾ ಮಾಡಿಕೊಂಡಿತು.

ವಿಶ್ವ ಯುವ ಟಿಟಿ: ದಿವ್ಯಾಂಶಿಗೆ ಕಂಚು



ಕ್ಲುಯ್ ನಪೋಕಾ (ರುಮೇನಿಯಾ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ದಿವ್ಯಾಂಶಿ ಭೌಮಿಕ್ ಅವರು ಐಟಿಟಿಎಫ್ ವಿಶ್ವ ಯುವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ 15 ವರ್ಷದೊಳಗಿನವರ ವಿಭಾಗದಲ್ಲಿ ಭಾನುವಾರ ಕಂಚಿನ ಪದಕ ಗೆದ್ದುಕೊಂಡರು.

15 ವರ್ಷ ವಯಸ್ಸಿನ ದಿವ್ಯಾಂಶಿ, ಸೆಮಿಫೈನಲ್‌ನಲ್ಲಿ ಹೋರಾಟ ತೋರಿದರೂ 1–4 ರಲ್ಲಿ (12–10, 10–12, 6–11, 4–11, 8–11ರಲ್ಲಿ) ಚೀನಾದ ಝು ಕ್ವಿಹುಯಿ ಅವರಿಗೆ ಮಣಿದು ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.


ಇದಕ್ಕೆ ಮೊದಲು ಭಾರತದ ಆಟಗಾರ್ತಿ, ಯುರೋಪ್, ಕೊರಿಯಾ, ಜಪಾನ್ ಎದುರಾಳಿಗಳ ವಿರುದ್ಧ ಹೋರಾಡಿ ಜಯ ಸಾಧಿಸಿದ್ದರು.

ಭಾರತ ತಂಡ ವಿಭಾಗದಲ್ಲಿ ಎರಡು ಪದಕಗಳನ್ನು ಗೆದ್ದುಕೊಂಡಿತು. 15 ವರ್ಷದೊಳಗಿನ ಬಾಲಕಿಯರ ತಂಡ (ದಿವ್ಯಾಂಶಿ, ಅನನ್ಯಾ ಮುರಳೀಧರನ್, ಅಂಕೊಲಿಕಾ ಚಕ್ರವರ್ತಿ ಮತ್ತು ನೈಶಾ ರೆವಾಸ್ಕರ್) ಕಂಚಿನ ಪದಕ ಗೆದ್ದಿತ್ತು.

19 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಭಾರತ ತಂಡ ಬೆಳ್ಳಿ ಪದಕ ಗೆದ್ದಿತು. ಅಂಕುರ್ ಭಟ್ಟಾಚಾರ್ಜಿ, ಅಭಿನಂದ್ ಪ್ರದಿವಾಧಿ, ಪುನಿತ್ ಬಿಸ್ವಾಸ್ ಮತ್ತು ಪ್ರಿಯಾನುಜ್ ಭಟ್ಟಾಚಾರ್ಯ ಅವರನ್ನು ತಂಡ ಒಳಗೊಂಡಿತ್ತು.

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್: ಕರುಣ್ ನಾಯರ್ ಅರ್ಧಶತಕ

ಕರ್ನಾಟಕ ವಿರುದ್ಧ ರಾಜಸ್ಥಾನಕ್ಕೆ ರೋಚಕ ಜಯ



ಕರುಣ್

ಅಹಮದಾಬಾದ್ (ಪಿಟಿಐ): ಕರುಣ್ ನಾಯರ್ ಮತ್ತು ಆರ್. ಸ್ಮರಣ್ ಅವರ ಉತ್ತಮ ಬ್ಯಾಟಿಂಗ್ ಹೊರತಾಗಿಯೂ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ರಾಜಸ್ಥಾನ ಎದುರು ಕೇವಲ 1 ರನ್ ಅಂತರದಿಂದ ಸೋತಿತು.

ಭಾನುವಾರ ನಡೆದ ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ 202 ರನ್‌ಗಳ ಜಯದ ಗುರಿ ಬೆನ್ನಟ್ಟಿದ ಕರ್ನಾಟಕ ಆರಂಭಿಕ ಆಘಾತ ಅನುಭವಿಸಿತು. 19 ರನ್ ಗಳಿಸುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡಿತು. ಮಯಂಕ್ ಅಗರವಾಲ್ ಮತ್ತು ಕೆ.ಎಲ್. ಶ್ರೀಜಿತ್ ಅವರು ನಿರ್ಗಮಿಸಿದರು. ಆಟಕ್ಕೆ ಕುದುರಿಕೊಂಡಿದ್ದ ದೇವದತ್ತ ಪಡಿಕ್ಕಲ್ (32; 23ಎ) ಅವರು ಔಟಾದಾಗ ತಂಡದ ಮೊತ್ತವು 51ಕ್ಕೆ3 ವಿಕೆಟ್‌ಗಳಾಗಿತ್ತು.

ಈ ಹಂತದಲ್ಲಿ ಕರುಣ್ (51; 32ಎ) ಮತ್ತು ಸ್ಮರಣ್ (ಔಟಾಗದೇ 48, 31ಎ) ಅವರಿಬ್ಬರೂ ಪ್ರತಿ ಹೋರಾಟ ಮಾಡಿದರು. ಇದರಿಂದಾಗಿ 14.5 ಓವರ್‌ಗಳಲ್ಲಿ ತಂಡವು 133 ರನ್‌ಗಳನ್ನು ತಲುಪಿತ್ತು. ಇದರಿಂದಾಗಿ ತಂಡದಲ್ಲಿ ಗೆಲುವಿನ ಭರವಸೆ ಮೂಡಿತ್ತು. ಆದರೆ ಕರುಣ್ ಔಟಾಗಿದ್ದೇ ತಡ ಸನ್ನಿವೇಶ ಬದಲಾಯಿತು. ಅಭಿನವ್ ಮನೋಹರ್ (6), ಶ್ರೇಯಸ್ ಗೋಪಾಲ್ (4) ಮತ್ತು ಪ್ರವೀಣ ದುಬೆ (6) ಅವರು ಹೆಚ್ಚು ಹೊತ್ತು ನಿಲ್ಲದೇ ನಿರ್ಗಮಿಸಿದರು. ಇದರಿಂದಾಗಿ ಹಾದಿ ಕಠಿಣವಾಯಿತು. ಇದೇ ಹೊತ್ತಿನಲ್ಲಿ ವಿದ್ಯಾಧರ್ ಪಾಟೀಲ (27; 8ಎ, 4X2, 6X3) ಅವರು ಸ್ಮರಣ್ ಜೊತೆಗೂಡಿ ಕೇವಲ ಎಂಟು ಎಸೆತಗಳಲ್ಲಿ 29 ರನ್‌ಗಳನ್ನು ಸೇರಿಸಿದರು. ಕಮಲೇಶ್ ನಾಗರಕೋಟಿ (52ಕ್ಕೆ3) ಅವರ ದಾಳಿಯಲ್ಲಿ ವಿದ್ಯಾಧರ್ ಔಟಾದರು. ಆಗ ತಂಡದ ಮೊತ್ತವು 184 ರನ್‌ಗಳಾಗಿದ್ದವು.

ಕೊನೆಯ ಓವರ್‌ನಲ್ಲಿ 15 ರನ್‌ಗಳ ಅಗತ್ಯವಿದ್ದಾಗ ವೈಶಾಖ ವಿಜಯಕುಮಾರ್ ಅವರು ಒಂದು ಸಿಕ್ಸರ್ ಮತ್ತು ಸ್ಮರಣ್ ಒಂದು ಬೌಂಡರಿ ಹೊಡೆದರು. ಇದರಿಂದಾಗಿ ಕೊನೆಯ ಎಸೆತದಲ್ಲಿ ಗೆಲುವಿಗೆ 3 ರನ್‌ಗಳ ಅಗತ್ಯವಿತ್ತು. ಆದರೆ ಬ್ಯಾಟರ್‌ಗಳಿಗೆ ಕೇವಲ ಒಂದು ರನ್ ಗಳಿಸಲು ಸಾಧ್ಯವಾಯಿತು. ರೋಚಕ ಜಯ ಸಾಧಿಸಿದ ರಾಜಸ್ಥಾನ 12 ಅಂಕಗಳೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನಕ್ಕೇರಿದೆ. ಕರ್ನಾಟಕ ನಾಲ್ಕು ಅಂಕಗಳೊಂದಿಗೆ ಐದನೇ ಸ್ಥಾನಕ್ಕೆ ಜಾರಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ರಾಜಸ್ಥಾನ ತಂಡವು ದೀಪಕ್ ಹೂಡಾ (43), ಕಾರ್ತಿಕ್ ಶರ್ಮಾ (46 ರನ್) ಮತ್ತು ಲೊಮ್ರೊರ್ (ಔಟಾಗದೇ 48) ಅವರ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ: 20 ಓವರ್‌ಗಳಲ್ಲಿ 5ಕ್ಕೆ201 (ದೀಪಕ್ ಹೂಡಾ 43, ಕಾರ್ತಿಕ್ ಶರ್ಮಾ 46, ಮಹಿಪಾಲ್ ಲೊಮ್ರೊರ್ ಔಟಾಗದೇ 48, ವಿದ್ಯಾಧರ್ ಪಾಟೀಲ 41ಕ್ಕೆ2, ವೈಶಾಖ ವಿಜಯಕುಮಾರ್ 39ಕ್ಕೆ2) ಕರ್ನಾಟಕ: 20 ಓವರ್‌ಗಳಲ್ಲಿ 8ಕ್ಕೆ200 (ಕರುಣ್ ನಾಯರ್ 51, ಸ್ಮರಣ್ ರವಿಚಂದ್ರನ್ ಔಟಾಗದೇ 48, ಅಶೋಕ್ ಶರ್ಮಾ 43ಕ್ಕೆ3, ಕಮಲೇಶ್ ನಾಗರಕೋಟಿ 52ಕ್ಕೆ3) ಫಲಿತಾಂಶ: ರಾಜಸ್ಥಾನ ತಂಡಕ್ಕೆ 1 ರನ್ ಜಯ.

ಅಭಿಷೇಕ್ ಶರ್ಮಾ ಶರವೇಗದ ಶತಕ

ಹೈದರಾಬಾದ್ (ಪಿಟಿಐ): ಪಂಜಾಬ್ ತಂಡದ ಅಭಿಷೇಕ್ ಶರ್ಮಾ ಅವರು 52 ಎಸೆತಗಳಲ್ಲಿ 148 ರನ್ ಗಳಿಸಿ ದಾಖಲೆ ಬರೆದರು. ಭಾನುವಾರ ನಡೆದ ಸೈಯದ್ ಮುಷ್ತಾಕ್ ಅಲಿ ಟೂರ್ನಿಯ ಪಂದ್ಯದಲ್ಲಿ ಅಭಿಷೇಕ್ ಆಟದ ಬಲದಿಂದ ಪಂಜಾಬ್ ತಂಡವು ಬಂಗಾಳ ಎದುರು 112 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಪಂಜಾಬ್ ತಂಡವು ಮೊದಲು ಬ್ಯಾಟಿಂಗ್ ಮಾಡಿತು. ಅಭಿಷೇಕ್ 12 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು. ಟಿ20 ಮಾದರಿಯಲ್ಲಿ ಎರಡನೇ ವೇಗದ ಅರ್ಧಶತಕ ದಾಖಲಿಸಿದ ಭಾರತೀಯ ಬ್ಯಾಟರ್ ಆದರು. ಒಟ್ಟಾರೆ ಮೂರನೇ ಬ್ಯಾಟರ್ ಆದರು.

ಮೊಹಮ್ಮದ್ ಶಮಿ ಮತ್ತು ಆಕಾಶ್ ದೀಪ್ ಅವರಂತಹ ಉತ್ತಮ ಬೌಲರ್‌ಗಳ ಎದುರು ಅಭಿಷೇಕ್ ಅಬ್ಬರಿಸಿದರು. ಅವರ ಆಟದಿಂದಾಗಿ ಪಂಜಾಬ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 310 ರನ್ ಗಳಿಸಿತು. ಅಭಿಷೇಕ್ ಆಟದಲ್ಲಿ 8 ಬೌಂಡರಿ ಮತ್ತು 16 ಸಿಕ್ಸರ್‌ಗಳಿದ್ದವು.

ಗುರಿ ಬೆನ್ನಟ್ಟಿದ ಬಂಗಾಳ ತಂಡಕ್ಕೆ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 198 ರನ್‌ಗಳಿಸಲು ಮಾತ್ರ ಸಾಧ್ಯವಾಯಿತು. ತಂಡದ ನಾಯಕ ಅಭಿಮನ್ಯು ಈಶ್ವರನ್ (ಅಜೇಯ 130; 66ಎ, 4X12, 6X8) ಅವರು ಶತಕ ಹೊಡೆದರು. ಆದರೆ ಉಳಿದ ಬ್ಯಾಟರ್‌ಗಳು ವಿಫಲರಾದರು. ಆಕಾಶ್ ದೀಪ್ 31 ರನ್) ಎರಡಂಕಿ ಗಳಿಸಿದ ಎರಡನೇ ಬ್ಯಾಟರ್ ಆದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 310 (ಅಭಿಷೇಕ್ ಶರ್ಮಾ 148, ಪ್ರಭಸಿಮ್ರನ್ ಸಿಂಗ್ 70, ರಮಣದೀಪ್ ಸಿಂಗ್ 39, ಸನ್ವೀರ್ ಸಿಂಗ್ 22, ಆಕಾಶ್ ದೀಪ್ 55ಕ್ಕೆ2) ಬಂಗಾಳ: 20 ಓವರ್‌ಗಳಲ್ಲಿ 9ಕ್ಕೆ198 (ಅಭಿಮನ್ಯು ಈಶ್ವರನ್ ಔಟಾಗದೇ 130, ಆಕಾಶ್ ದೀಪ್ 31, ಗುರ್ನೂರ್ ಬ್ರಾರ್ 40ಕ್ಕೆ2, ಹರಪ್ರೀತ್ ಬ್ರಾರ್ 23ಕ್ಕೆ4, ನೇಹಲ್ ವಧೇರಾ 19ಕ್ಕೆ2).

ರೋ–ಕೊ ಜೊತೆಯಾಟಕ್ಕೆ ಒಲಿದ ಜಯ

ಭಾರತ ಶುಭಾರಂಭ • ಕುಲದೀಪ್‌ಗೆ ನಾಲ್ಕು ವಿಕೆಟ್ • ರಾಹುಲ್ ಅರ್ಧಶತಕ

ರಾಂಚಿ (ಪಿಟಿಐ): ಏಕದಿನ ಕ್ರಿಕೆಟ್ ಮಾದರಿಯ 'ದಿಗ್ಗಜ ಜೋಡಿ' ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಅಬ್ಬರದ ಆಟಕ್ಕೆ ಜಯ ಒಲಿಯಿತು.

ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆ (ಜೆಎಸ್‌ಸಿಎ) ಕ್ರೀಡಾಂಗಣದಲ್ಲಿ ಭಾನುವಾರ ದಕ್ಷಿಣ ಆಫ್ರಿಕಾ ಎದುರು ನಡೆದ ಮೊದಲ ಏಕದಿನ ಪಂದ್ಯದಲ್ಲಿ ಭಾರತ ತಂಡವು 17 ರನ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಇದಕ್ಕೆ ಪ್ರಮುಖವಾಗಿ ಕಾರಣವಾಗಿದ್ದು ವಿರಾಟ್ ಮತ್ತು ರೋಹಿತ್ ಅವರ ಅಮೋಘ ಬ್ಯಾಟಿಂಗ್. ಏಕದಿನ ಕ್ರಿಕೆಟ್‌ನಲ್ಲಿ 52ನೇ ಶತಕ ದಾಖಲಿಸಿದರು. ರೋಹಿತ್ 60ನೇ ಅರ್ಧಶತಕ ಹೊಡೆದರು. ಇಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ 136 ರನ್‌ಗಳನ್ನೂ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 349 ರನ್‌ಗಳಿಸಿತು.


ಕುಲದೀಪ್ ಯಾದವ್ ಬೌಲಿಂಗ್

ರಾಹುಲ್ (60; 56ಎ, 4X2, 6X3) ಅರ್ಧಶತಕ ಹೊಡೆದು ತಂಡದ ಮೊತ್ತ ಹೆಚ್ಚಲು ಕಾರಣರಾದರು. ರವೀಂದ್ರ ಜಡೇಜ 20 ಎಸೆತಗಳಲ್ಲಿ 32 ರನ್ ಹೊಡೆದು ಉಪಯುಕ್ತ ಕಾಣಿಕೆ ನೀಡಿದರು.

ಆದರೆ ಪ್ರವಾಸಿ ತಂಡದ ಕೆಳಕ್ರಮಾಂಕದ ಬ್ಯಾಟರ್‌ಗಳಾದ ಮಾರ್ಕೊ ಯಾನ್ಸೆನ್ (70; 39ಎ) ಮತ್ತು ಕಾರ್ಬಿನ್ ಬಾಷ್ (67; 51ಎ) ದಿಟ್ಟ ಹೋರಾಟದ ಮೂಲಕ ಭಾರತ ತಂಡದಿಂದ ಗೆಲುವು ಕಸಿದುಕೊಳ್ಳುವ ಬೆದರಿಕೆ ಒಡ್ಡಿದ್ದರು. ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಂತಹ ಅನುಭವಿ ಬೌಲರ್‌ಗಳ ಗೈರು ಈ ಹಂತದಲ್ಲಿ ಕಾಡಿತ್ತು. ಆದರೆ ಕುಲದೀಪ್ ಯಾದವ್ (68ಕ್ಕೆ4) ಮತ್ತು ಹರ್ಷಿತ್ ರಾಣಾ (65ಕ್ಕೆ3) ತುಸು ದುಬಾರಿಯಾದರೂ ವಿಕೆಟ್ ಉರುಳಿಸಿದರು. ಇದರಿಂದಾಗಿ ದಕ್ಷಿಣ ಆಫ್ರಿಕಾ ತಂಡವು 332 ರನ್‌ಗಳಿಗೆ ಆಲೌಟ್ ಆಯಿತು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಆರಂಭದಲ್ಲಿಯೇ ಆಘಾತವಾಯಿತು. ಹರ್ಷಿತ್ ರಾಣಾ ಅವರು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ರಿಯಾನ್ ರಿಕೆಲ್ಟನ್ ಮತ್ತು ಕ್ವಿಂಟನ್ ಡಿ ಕಾಕ್ ಅವರ ವಿಕೆಟ್ ಕಬಳಿಸಿದರು. ಇಬ್ಬರೂ ಬ್ಯಾಟರ್‌ಗಳು ಖಾತೆ ತೆರೆಯದೇ ನಿರ್ಗಮಿಸಿದರು. ಇನ್ನೊಂದೆಡೆ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ಏಡನ್ ಮರ್ಕರಂ ವಿಕೆಟ್ ಗಳಿಸಿದರು. ಇದರಿಂದಾಗಿ ತಂಡವು 11 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಭಾರತ ತಂಡದ ಹಂಗಾಮಿ ನಾಯಕ ಮತ್ತು ವಿಕೆಟ್‌ಕೀಪರ್ ಕೆ.ಎಲ್. ರಾಹುಲ್ ಅವರು ಮರ್ಕರಂ ಮತ್ತು ಕ್ವಿಂಟನ್ ಅವರ ಕ್ಯಾಚ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾದರು.

ಆದರೆ ಮ್ಯಾಥ್ಯೂ ಬ್ರೀಜ್ (72; 80ಎ) ಅವರು ತುಸು ಚೇತರಿಕೆ ನೀಡಿದರು. ಅವರಿಗೆ ಟೋನಿ ಡಿ ಝೋರ್ಜಿ (39; 35ಎ) ಮತ್ತು ಡಿವಾಲ್ಡ್ ಬ್ರೆವಿಸ್ (37 ರನ್) ಜೊತೆ ನೀಡಿದರು. ಅವರನ್ನೂ ಕಟ್ಟಿಹಾಕುವಲ್ಲಿ ಕುಲದೀಪ್ ಯಾದವ್ ಮತ್ತು ಹರ್ಷಿತ್ ಯಶಸ್ವಿಯಾದರು.

ಆದರೆ ಮಾರ್ಕೊ ಅವರ ಅಬ್ಬರಕ್ಕೆ ಬೌಲರ್‌ಗಳು ಬಸವಳಿದರು. 39 ಎಸೆತಗಳಲ್ಲಿ 70 ರನ್ ಗಳಿಸಿದ ಯಾನ್ಸೆನ್ 8 ಬೌಂಡರಿ ಮತ್ತು 3 ಸಿಕ್ಸರ್ ಬಾರಿಸಿದರು. ಕಾರ್ಬಿನ್ ಬಾಷ್ ಕೊನೆಯವರಾಗಿ ಔಟಾಗುವವರೆಗೂ ತಂಡದ ಗೆಲುವಿನ ಆಸೆ ಜೀವಂತವಾಗಿತ್ತು. ಅವರ ವಿಕೆಟ್ ಪಡೆಯುವಲ್ಲಿ ಕನ್ನಡಿಗ ಪ್ರಸಿದ್ಧಕೃಷ್ಣ ಕೊನೆಯ ಓವರ್‌ನಲ್ಲಿ ಸಫಲರಾದರು.

ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ಸಿಕ್ಸರ್

ಸಿಕ್ಸರ್	ಆಟಗಾರ
352*	ರೋಹಿತ್ ಶರ್ಮಾ(ಭಾರತ)
351	ಶಾಹಿದ್ ಆಫ್ರಿದಿ (ಪಾಕಿಸ್ತಾನ)
331	ಕ್ರಿಸ್ ಗೇಲ್ (ವೆಸ್ಟ್ ಇಂಡೀಸ್)
270	ಸನತ್ ಜಯಸೂರ್ಯ (ಶ್ರೀಲಂಕಾ)
229	ಮಹೇಂದ್ರಸಿಂಗ್ ಧೋನಿ(ಭಾರತ)


ಶತಕ ದಾಖಲಿಸಿದ ಸಂಭ್ರಮದಲ್ಲಿ ವಿರಾಟ್ ಕೊಹ್ಲಿ
ಪಿಟಿಐ ಚಿತ್ರಗಳು

ದ.ಆಫ್ರಿಕಾ ಎದುರು ಭಾರತದ ಅತ್ಯಧಿಕ ಮೊತ್ತ (ಏಕದಿನ)

ಸ್ಕೋರ್	ಸ್ಥಳ	ವರ್ಷ
3ಕ್ಕೆ401	ಗ್ವಾಲಿಯರ್	2010
8ಕ್ಕೆ349	ರಾಂಚಿ	2025
7ಕ್ಕೆ331	ಕಾರ್ಡಿಫ್	2013
5ಕ್ಕೆ326	ಕೋಲ್ಕತ್ತ	2023

ಭಾರತದ ಕ್ರೀಡಾಂಗಣಗಳಲ್ಲಿ ಹೆಚ್ಚು ಶತಕಗಳು

ಶತಕಗಳು	ಆಟಗಾರ	ಸ್ಥಳ
3 (5ಇನಿಂಗ್ಸ್)	ವಿರಾಟ್ ಕೊಹ್ಲಿ	ರಾಂಚಿ
3 (7ಇನಿಂಗ್ಸ್)	ಸಚಿನ್ ತೆಂಡೂಲ್ಕರ್	ವಡೋದರ
3 (7ಇನಿಂಗ್ಸ್)	ವಿರಾಟ್ ಕೊಹ್ಲಿ	ವಿಶಾಖಪಟ್ಟಣಂ
3 (8ಇನಿಂಗ್ಸ್)	ವಿರಾಟ್ ಕೊಹ್ಲಿ	ಪುಣೆ

ಸ್ಕೋರ್ ಕಾರ್ಡ್

ಭಾರತ: 8ಕ್ಕೆ 349 (50 ಓವರ್‌ಗಳಲ್ಲಿ)
ಜೈಸ್ವಾಲ್ ಸಿ ಕ್ವಿಂಟನ್ ಬಿ ಬರ್ಗರ್ 18 (16ಎ, 4x2, 6x1)
ರೋಹಿತ್ ಎಲ್‌ಬಿಡಬ್ಲ್ಯು ಬಿ ಯಾನ್ಸನ್ 57 (51ಎ, 4x5, 6x3)
ಕೊಹ್ಲಿ ಸಿ ರಿಕೆಲ್ಟನ್ ಬಿ ಬರ್ಗರ್ 135 (120ಎ, 4x11, 6x7)
ಗಾಯಕವಾಡ ಸಿ ಬ್ರೆವಿಸ್ ಬಿ ಬಾರ್ಟ್‌ಮನ್ 8 (14ಎ)
ವಾಷಿಂಗ್ಟನ್ ಸಿ ಕಾರ್ಬಿನ್ ಬಿ ಬಾರ್ಟ್‌ಮನ್ 13 (19ಎ, 6x1)
ರಾಹುಲ್ ಸಿ ಕ್ವಿಂಟನ್ ಬಿ ಯಾನ್ಸನ್ 60 (56ಎ, 4x2, 6x3)
ಜಡೇಜ ಸಿ ಮರ್ಕರಂ ಬಿ ಕಾರ್ಬಿನ್ 32 (20ಎ, 4x2, 6x1)
ಹರ್ಷಿತ್ ರಾಣಾ ಔಟಾಗದೇ 3 (2ಎ)
ಅರ್ಷದೀಪ್ ಬಿ ಕಾರ್ಬಿನ್ 0 (1)
ಕುಲದೀಪ್ ಯಾದವ್ ಔಟಾಗದೇ 0 (1ಎ)
ಇತರೆ: 23 (ಬೈ 5, ಲೆಗ್‌ಬೈ 4, ವೈಡ್ 14)
ವಿಕೆಟ್ ಪತನ: 1-25 (ಯಶಸ್ವಿ ಜೈಸ್ವಾಲ್, 3.1), 2-161 (ರೋಹಿತ್ ಶರ್ಮಾ, 21.2), 3-183 (ಋತುರಾಜ್ ಗಾಯಕವಾಡ, 26.3), 4-200 (ವಾಷಿಂಗ್ಟನ್ ಸುಂದರ್, 30.3), 5-276 (ವಿರಾಟ್ ಕೊಹ್ಲಿ, 42.5), 6-341 (ಕೆ. ಎಲ್. ರಾಹುಲ್, 48.5), 7-347 (ರವೀಂದ್ರ ಜಡೇಜ, 49.4), 8-347 (ಅರ್ಷದೀಪ್ ಸಿಂಗ್, 49.5)
ಬೌಲಿಂಗ್: ಮಾರ್ಕೊ ಯಾನ್ಸೆನ್ 10–0–76–2, ನಾಂದ್ರೆ ಬರ್ಗರ್ 10–0–65–2, ಕಾರ್ಬಿನ್ ಬಾಷ್ 10–0–66–2, ಒಟ್ನೀಲ್ ಬಾರ್ಟ್‌ಮನ್ 10–0–60–2, ಪ್ರೆನೆಲನ್ ಸುಬ್ರಾಯನ್ 10–0–73–0

ದಕ್ಷಿಣ ಆಫ್ರಿಕಾ: 332 (49.2 ಓವರ್‌ಗಳಲ್ಲಿ)
ಮರ್ಕರಂ ಸಿ ರಾಹುಲ್ ಬಿ ಅರ್ಷದೀಪ್ 7 (15ಎ, 4x1)
ರಿಕೆಲ್ಟನ್ ಬಿ ರಾಣಾ 0 (1ಎ)
ಕ್ವಿಂಟನ್ ಸಿ ರಾಹುಲ್ ಬಿ ರಾಣಾ 0 (2ಎ)
ಬ್ರೀಜ್ ಸಿ ಕೊಹ್ಲಿ ಬಿ ಕುಲದೀಪ್ 72 (80ಎ, 4x8, 6x1)
ಝೋರ್ಜಿ ಎಲ್‌ಬಿಡಬ್ಲ್ಯು ಬಿ ಕುಲದೀಪ್ 39 (35ಎ, 4x7)
ಬ್ರೆವಿಸ್ ಸಿ ಗಾಯಕವಾಡ ಬಿ ರಾಣಾ 37 (28ಎ, 4x2, 6x3)
ಯಾನ್ಸೆನ್ ಸಿ ಜಡೇಜ ಬಿ ಕುಲದೀಪ್ 70 (39ಎ, 4x8, 6x3)
ಕಾರ್ಬಿನ್ ಸಿ ರೋಹಿತ್ ಬಿ ಪ್ರಸಿದ್ಧ 67 (51ಎ, 4x5, 6x4)
ಸುಬ್ರಾಯನ್ ಸಿ ರಾಹುಲ್ ಬಿ ಕುಲದೀಪ್ 17 (16ಎ, 4x1, 6x1)
ಬರ್ಗರ್ ಸಿ ರಾಹುಲ್ ಬಿ ಅರ್ಷದೀಪ್ 17 (23ಎ, 4x2)
ಬಾರ್ಟ್‌ಮನ್ ಔಟಾಗದೇ 0 (6ಎ)
ಇತರೆ: 6 (ಲೆಗ್‌ಬೈ 3, ವೈಡ್ 3)
ವಿಕೆಟ್ ಪತನ: 1-7 (ರಿಯಾನ್ ರಿಕೆಲ್ಟನ್, 1.1), 2-7 (ಕ್ವಿಂಟನ್ ಡಿ ಕಾಕ್, 1.3), 3-11 (ಏಡೆನ್ ಮಾರ್ಕರಂ, 4.4), 4-77 (ಟೋನಿ ಡಿ ಝೋರ್ಜಿ, 14.6), 5-130 (ಡಿವಾಲ್ಡ್ ಬ್ರೆವಿಸ್, 21.4), 6-227 (ಮಾರ್ಕೊ ಯಾನ್ಸೆನ್, 33.1), 7-228 (ಮ್ಯಾಥ್ಯೂ ಬ್ರೀಜ್, 33.3), 8-270 (ಪ್ರೆನೆಲನ್ ಸುಬ್ರಾಯನ್, 39.3), 9-312 (ನಾಂದ್ರೆ ಬರ್ಗರ್, 46.1), 10-332 (ಕಾರ್ಬಿನ್ ಬಾಷ್, 49.2)
ಬೌಲಿಂಗ್: ಅರ್ಷದೀಪ್ ಸಿಂಗ್ 10–1–64–2, ಹರ್ಷಿತ್ ರಾಣಾ 10–0–65–3, ವಾಷಿಂಗ್ಟನ್ 3–0–18–0, ಪ್ರಸಿದ್ಧ ಕೃಷ್ಣ 7.2–1–48–1, ಕುಲದೀಪ್ ಯಾದವ್ 10–0–68–4, ರವೀಂದ್ರ ಜಡೇಜ 9–0–66–0
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ

ಫಲಿತಾಂಶ: ಭಾರತ ತಂಡಕ್ಕೆ 17 ರನ್‌ಗಳ ಗೆಲುವು, ಸರಣಿಯಲ್ಲಿ 1–0 ಮುನ್ನಡೆ

ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್
ಪ್ರಶಸ್ತಿ ಉಳಿಸಿಕೊಂಡ ಟ್ರೀಸಾ–ಗಾಯತ್ರಿ

ಲಖನೌ (ಪಿಟಿಐ): ಭಾರತದ ಜೋಡಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಸೈಯದ್ ಮೋದಿ ಅಂತರ ರಾಷ್ಟ್ರೀಯ ಸೂಪರ್ 300 ಟೂರ್ನಿಯಲ್ಲಿ ಮಹಿಳೆಯರ ಡಬಲ್ಸ್ ಪ್ರಶಸ್ತಿಯನ್ನು ತಮ್ಮಲ್ಲೇ ಉಳಿಸಿಕೊಂಡರು. ಆದರೆ, ಅನುಭವಿ ಕಿದಂಬಿ ಶ್ರೀಕಾಂತ್ ಅವರು ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಮುಗ್ಗರಿಸಿದರು.

ಕಳೆದ ಬಾರಿಯ ಚಾಂಪಿಯನ್ ಟ್ರೀಸಾ–ಗಾಯತ್ರಿ ಜೋಡಿಯು ಆರಂಭಿಕ ಗೇಮ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 17-21, 21-13, 21-15 ಜಪಾನ್‌ನ ಕಾಹೊ ಒಸಾವ–ಮಾಯಿ ತನಾಬೆ ಜೋಡಿಯನ್ನು ಸೋಲಿಸಿತು. ಅಗ್ರಶ್ರೇಯಾಂಕದ ಭಾರತದ ಆಟಗಾರ್ತಿಯರು ಒಂದು ಗಂಟೆ 16 ನಿಮಿಷಗಳ ರೋಚಕ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಎದುರಾಳಿಯನ್ನು ಹಿಮ್ಮೆಟ್ಟಿಸಿ, ಖುತುವಿನಲ್ಲಿ ತಮ್ಮ ಮೊದಲ ಕಿರೀಟ ಮುಡಿಗೇರಿಸಿಕೊಂಡರು.

ಭುಜದ ನೋವಿನಿಂದಾಗಿ ಗಾಯತ್ರಿ ಐದು ತಿಂಗಳು ವಿಶ್ರಾಂತಿಯಲ್ಲಿದ್ದರು. ಪುನರಾಗಮನದ ಬಳಿಕ ಅವರು ಆಡುತ್ತಿರುವ ಎರಡನೇ ಟೂರ್ನಿ ಇದಾಗಿದೆ. ಫೈನಲ್ ಪಂದ್ಯವು 49 ಶಾಟ್‌ಗಳ ಮ್ಯಾರಥಾನ್ ರ‍್ಯಾಲಿಯೊಂದಿಗೆ ಆರಂಭವಾಯಿತು. ಮೊದಲ ಗೇಮ್‌ನ ಆರಂಭದಲ್ಲಿ ಸಮಬಲದ ಹೋರಾಟ ಕಂಡು ಬಂದರೂ ನಿಧಾನವಾಗಿ ಜಪಾನ್ ಜೋಡಿಯು ನಿಖರ ಆಟದ ಮೂಲಕ ಮೇಲುಗೈ ಸಾಧಿಸಿತು.

ತಪ್ಪನ್ನು ತಿದ್ದಿಕೊಂಡ ಭಾರತದ ಆಟಗಾರ್ತಿಯರು ಲಯ ಕಂಡುಕೊಂಡರು. ಆಕ್ರಮಣಕಾರಿ ಆಟಕ್ಕೆ ಇಳಿದ ಟ್ರೀಸಾ–ಗಾಯತ್ರಿ ಜೋಡಿ ಎರಡನೇ ಗೇಮ್‌ನಲ್ಲಿ 9–2 ಮುನ್ನಡೆಯೊಂದಿಗೆ ಹಿಡಿತ ಸಾಧಿಸಿತು. ಬ್ಯಾಕ್‌ಕೋರ್ಟ್‌ನಲ್ಲಿ ಟ್ರೀಸಾ ಆಕರ್ಷಕ ರಿಟರ್ನ್‌ಗಳ ಮೂಲಕ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು.

ನಿರ್ಣಾಯಕ ಗೇಮ್‌ನಲ್ಲೂ ಚುರುಕಿನ ಆಟ ಪ್ರದರ್ಶಿಸಿದ ಟ್ರೀಸಾ–ಗಾಯತ್ರಿ ಜೋಡಿಯು 12–5 ಮುನ್ನಡೆ ಪಡೆಯಿತು. ಈ ಹಂತದಲ್ಲಿ ಪ್ರತಿರೋಧ ತೋರಿದ ಎದುರಾಳಿ ಆಟಗಾರ್ತಿಯರು ಹಿನ್ನಡೆಯನ್ನು 15–13ಕ್ಕೆ ತಗ್ಗಿಸಿಕೊಂಡರು. ಆದರೆ, ನಂತರ ಟ್ರೀಸಾ ಅವರ ನಿಖರ ನೆಟ್‌ಶಾಟ್, ಗಾಯತ್ರಿ ಅವರ ತೀಕ್ಷ್ಣವಾದ ಸ್ಮ್ಯಾಷ್‌ಗಳು ಗೆಲುವನ್ನು ಸುಗಮಗೊಳಿಸಿತು.


ಪ್ರಶಸ್ತಿ ಗೆದ್ದ ಗಾಯತ್ರಿ ಗೋಪಿಚಂದ್ ಮತ್ತು ಟ್ರೀಸಾ ಜೋಳಿ —ಪಿಟಿಐ ಚಿತ್ರ

ಫೈನಲ್‌ನಲ್ಲಿ ಕಿದಂಬಿ ಶ್ರೀಕಾಂತ್‌ಗೆ ನಿರಾಸೆ



ಎಂಟು ವರ್ಷಗಳ ಪ್ರಶಸ್ತಿಯ ಬರವನ್ನು ನೀಗಿಸಿಕೊಳ್ಳುವ ಛಲದಲ್ಲಿದ್ದ 32 ವರ್ಷದ ಶ್ರೀಕಾಂತ್ ಅವರಿಗೆ ಮತ್ತೆ ನಿರಾಸೆಯಾಯಿತು. ವಿಶ್ವ ಕ್ರಮಾಂಕದಲ್ಲಿ 38ನೇ ಸ್ಥಾನದಲ್ಲಿರುವ ಅವರು 16-21, 21-8, 20-22ರಿಂದ ಹಾಂಗ್‌ಕಾಂಗ್‌ನ ಜೇಸನ್ ಗುನವಾನ್ ಅವರಿಗೆ ಸೋತರು. 21 ವರ್ಷದ ಜೇಸನ್ ಅವರಿಗೆ ಬಿಡಬ್ಲ್ಯುಎಫ್ ವಿಶ್ವ ಟೂರ್‌ನ ಚೊಚ್ಚಲ ಪ್ರಶಸ್ತಿ ಇದಾಗಿದೆ.

2017ರಲ್ಲಿ ಕೊನೆಯ ಬಾರಿಗೆ ಫ್ರೆಂಚ್ ಓಪನ್‌ನಲ್ಲಿ ಪ್ರಶಸ್ತಿಯನ್ನು ಗೆದ್ದಿರುವ ಶ್ರೀಕಾಂತ್ ಅವರು 2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ಜಯಿಸಿದ್ದರು. ಈ ವರ್ಷದ ಆರಂಭದಲ್ಲಿ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದ್ದ ಶ್ರೀಕಾಂತ್, ಅಲ್ಲೂ ನಿರಾಸೆ ಅನುಭವಿಸಿದ್ದರು.

ಚಾಂಪಿಯನ್

ಪ್ರಜಾವಾಣಿ ಚಿತ್ರ


ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ನೈರುತ್ಯ ರೈಲ್ವೆ ಮಹಿಳೆಯರ ತಂಡ. (ನಿಂತವರು) ಎಡದಿಂದ; ಸತ್ಯಾ, ಅನುಷಾ, ಸೂರ್ಯಾ (ನಾಯಕ), ರುತ್, ಸೋಬಾನಾ, ಬಾಲಾ (ಕುಳಿತವರು) ಬಾಂಧವ್ಯಾ ಮತ್ತು ಶ್ರುತಿ

ಏಷ್ಯನ್ ಕಪ್ ಭಾರತ ಬಾಲಕರ ತಂಡ ಅರ್ಹತೆ

ಅಹಮದಾಬಾದ್ (ಪಿಟಿಐ): ಭಾರತ ಬಾಲಕರ ಫುಟ್‌ಬಾಲ್ ತಂಡವು ಭಾನುವಾರ ನಡೆದ ಡಿ ಗುಂಪಿನ ಅರ್ಹತಾ ಪಂದ್ಯದಲ್ಲಿ 2–1 ಗೋಲುಗಳಿಂದ ಇರಾನ್ ತಂಡವನ್ನು ಮಣಿಸಿ 2026ರ ಎಎಫ್‌ಸಿ 17 ವರ್ಷದೊಳಗಿನವರ ಏಷ್ಯನ್ ಕಪ್ ಟೂರ್ನಿಗೆ ಟಿಕೆಟ್ ಪಡೆದುಕೊಂಡಿತು.

ಏಷ್ಯನ್ ಕಪ್ ಟೂರ್ನಿಯು ಮುಂದಿನ ವರ್ಷ ಸೌದಿ ಅರೇಬಿಯಾದಲ್ಲಿ ನಡೆಯಲಿದ್ದು, ಭಾರತ ತಂಡವು 10ನೇ ಬಾರಿ ಸ್ಪರ್ಧಿಸಲಿದೆ.

ನಾಲ್ಕು ಪಂದ್ಯಗಳ ಪೈಕಿ ಎರಡನ್ನು ಗೆದ್ದು, ಒಂದರಲ್ಲಿ ಡ್ರಾ ಸಾಧಿಸಿದ ಭಾರತ ತಂಡವು 7 ಅಂಕಗಳೊಂದಿಗೆ ಡಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಇರಾನ್ ಎರಡನೇ ಸ್ಥಾನದೊಂದಿಗೆ ಟೂರ್ನಿಯಿಂದ ಹೊರಬಿತ್ತು